Loans for Construction of Irrigation wells	24.96	24.66	752.57
Advances for purchase of Electrical Pumps	10.23	153.42	441.53
Loans to Agriculturists for purchase of Tractors ...	5.45	19.90	41.72
Loans under the Land Improvement Act (Coorg) ...	0.54	0.45	4.17
Takavi Loan (New Rules)	5.63	43.17	185.88
Land Improvement Loans (New Rules)	2.86	22.09	93.67
Loans under the Land Improvement Loans Act and Agriculturists Loans Act (Bellary).	1.03	4.28	30.26
Loans under the Land Improvement Loans Act and Agriculturists Act (Bombay).	20.31	40.22	232.39

ANNEXURE F—(*Contd.*)

(*Rs. in lakhs*)

Heads	Accounts 1966-67		Balance as on 1st April 1967
	Credits	Debits	
1	2	3	4
Loans under the Agriculturists Loans Act (Coorg) ...	0.58	0.15	1.78
Famine Takavi	5.32	...	...
Tagai Advances	...	...	2.28
Loans under the Land Improvement Act (Madras) ...	0.56	0.58	...
Loans for maintenances and Restoration of Tanks ...	(—)18.49	2.03	28.31
Charges by P. W. Officers under T.M. Rules	18.51	...	...
New Well Subsidy Scheme	...	...	5.07
Development Takavi for Development Area under T.B. Project ...	...	...	26.47
Loans for purchase of Seeds and Manures for sale to cultivators ...	635·94	610.09	335.52
Loans for completing incomplete wells and deepening of existing wells in scarcity affected areas.	0.12	9.11	30.98
Advances under Special Laws—State Aid to Industries ...	0.88	36.96	200·51
Loans under C.D.P. and N.E.S.	24.67	33.04	19.24
Loans under soil conservation	0.85	20.62	143.61
Miscellaneous Loans and Advances :—			
Miscellaneous Loans ...	0·17	...	82·60
Loan to Gold Mining Companies ...	0·09	...	226·23

ANNEXURE F—(*Contd.*) (*Rs. in lakhs*)

Heads	Accounts 1966-67		Balance as on 1st April 1967
	Credits	Debits	
1	2	3	4
Loan to Mysore Central Rural Industrial Financing Bank for Small Scale Industries	13·20	...	5·80
Loans for Development of Cotton Handloom Industries ...	5·87	1·67	17·19
Advances to Trust Boards for L. A. and Development Schemes ...	1·96	3·00	73·99
Woollen Handloom Industry	1·10	0·15	14·77
Silk Handloom Industry	1·75	...	14·62
Loans to Small Scale Industries	9·09	1·00	41·39
Loan for Installation of Power Looms	2·92	0·81	72·11
Advances to Regulated Markets	3·89	2·16	27·02
Loans to Mysore Housing Board (For S.I.H. Schemes) ...	4·50	8·50	99·99
Advances to Trust Boards for Layout of Extensions ...	4·46	...	49·34
Loans for Low Income Group Housing Scheme	13·28	17·88	414·21
Middle Income Group Housing Scheme	5·30	6·00	145·55
Loans to Co-operative Societies including House Building Societies	6·86	11·93	96·23
Aid against Flood and Rains	3·23	0·66	51·80
Loan to Electricity Board	...	400·00	3915·11
Loan to Electricity Board for extension of power lines ...	...	...	255·00
Loans to Co-operative Societies	2·03	...	18·69
Special Advances to Deputy Commissioners for implementation of Mysore Village Panchayats and Local Boards Act ...	...	...	12·01

ANNEXURE F—(*Concld.*)

(*Rs. in lakhs*)

Heads	Accounts 1967		Balance as on 1st April 1967
	Credits	Debits	
1	2	3	4
Rural Housing ...	0·29	7·22	58·81
Loans to Government Servants ...	51·61	83·09	258·19
Loans to Electricity Board for Rural Electrification ...	66·79	...	23·14
Loans for Housing Schemes (L. I. C. Funds) ...	2·71	81·71	201·09
Loans to Mysore Iron and Steel Works Ltd., Bhadravathi ...	...	...	621·79
Loans for Rural Godowns ...	2·69	14·88	67·65
Loans to Wholesale Consumers' Co-operative Stores for working capital ...	—0·23	...	24·00
Loans to individual and displaced goldsmiths for starting petty shops cottage Industries ...	...	...	39·00
Loans to State Industrial Bank for the scheme of rehabilitation of goldsmiths ...	2·00	...	23·00
Loans for construction of houses for backward classes through the Agency of Building Societies ...	0·38	...	33·83
Loans for Rural Housing setting up Pilot Housing Projects ...	...	...	28·62
Advances to Electricity Board for purchase of Pumpsets ...	...	...	255·00
Loans to Bangalore Water Supply and Sewerage Board ...	10·00	115·00	320·00

ANNEXURE G

	Date of retirement	*Existing rates of Dearness Allowance on pensions (up to Rs. 100 per mensem)*	*New rates of Dearness Allowance on pensions (up to Rs. 200 per mensem).*
1	Government servants retiring before 1-4-1961	Rs. 15. with marginal adjustments for pensioners exceeding Rs. 100, but below Rs. 115 *i.e*, the difference between the pension and Rs. 115.	Rs. 22.50, with marginal adjustments for pensioners drawing pensions exceeding Rs. 200 but below Rs. 222.50 *i.e.*, the differnce between the pension and Rs. 222.50.
2	Government servants retiring on or after 1-4-1961 but before 1-7-1961.	Rs. 14, with margial adjustments for pensioners drawing pensions exceeding Rs. 100 but below Rs. 114 *i.e.*, the difference between the pension and Rs. 114.	Rs. 21, with marginal adjustments for pensioners drawing pensions exceeding Rs. 200 but below Rs. 221 *i.e.*, the difference between the pension and Rs. 221.
3	Government servants retiring on or after 1-7-1961 but before 1-10-1961.	Rs. 13, with marginal adjustments for pensions exceeding Rs. 100 but below Rs. 113 *i.e.*, the difference between the pension and Rs. 113.	Rs. 19.50, with marginal adjustments for pensioners drawing pensions exceeding Rs. 200 but below Rs. 219.50 *i e.* the difference between the pension and Rs. 219·50.
4	Government servants retiring on or after 1-10-1961 but before 1-1-62.	Rs. 12, with marginal adjustments for pensioners drawing pensions exceeding Rs. 100 but below Rs. 112 *i.e.*, the difference between the pension and Rs. 112.	Rs. 18, with marginal adjustments for pensioners drawing pensions exceeding Rs. 200 but below Rs. 218 *i.e.*, the difference beeween the pension and Rs. 218.
5	Government servants retiring on or after 1-1-1962 but before 1-4-1962.	Rs. 11, with marginal adjustments for pensioners drawing pensions exceeding Rs. 100 but below Rs. 111, *i.e.*, the difference between the pension and Rs. 111.	Rs. 16-50, with marginal adjustments for pensioners drawing pensions exceeding Rs. 200 but below Rs. 216-50, *i.e.*, the difference between the pension and Rs. 216.50.

	Date of retirement	Exsting rates of Dearness Allowance on pensions (upto Rs. 100 per menem)	New rates of Dearness Allowance on pension (upto Rs. 200 per mensem)
6	Government servants retiring on or after 1-4-1962 but before 1-7-1962.	Rs. 10, with marginal adjustments for pensioners drawing pensions exceeding Rs. 100 but below Rs. 110, *i.e.*, the difference between the pension and Rs. 110.	Rs. 15. with marginal adjustments for pensioners drawing pensions exceeding Rs. 200 but below Rs. 215, *i.e.*, the difference between the pension and Rs. 215.
7	Government servants retiring on or after 1-7-1962 but before 1-10-1962.	Rs. 9, with marginal adjustments for pensioners drawing pensions exceeding Rs. 100 but below Rs. 109, *i.e.*, the difference between the pension and Rs. 109.	Rs. 13.50, with marginal adjustments for pensioners drawing pensions exceeding Rs. 200 but below Rs. 213·50, *i.e.*, the difference between the pension and Rs. 213.50.
8	Government servants retiring on or after 1-10-1962 but before 1-1-1963.	Rs. 8, with marginal adjustments for pensioners drawing pensions exceeding Rs. 100 but below Rs. 108 *i.e.*, the difference between the pension and Rs. 108.	Rs. 12.00, with marginal adjustments for pensioners drawing pensions exceeding Rs. 200 but below Rs. 212.00 *i.e.*, the difference between the pension and Rs. 212.
9	Government servants retiring on or after 1-1-1963 but before 1-4-1963	Rs. 7, with marginal adjustments for pensioners drawing pensions exceding Rs. 100 but below Rs. 107, *i.e.*, the difference between the pension and Rs. 107.	Rs. 10.50, with marginal adjustments for pensioners drawing pensions exceeding Rs. 200 but below Rs. 210·50, *i.e.*, the difference between the pension and Rs. 210.50.
10	Government servants retiring on or after 1-4-1963 but before 1-7-1963.	Rs. 6. with marginal adjustments for pensioners drawing pension exceeding Rs. 100 but below Rs. 106, *i.e.*, the difference between the pension and Rs. 106.	Rs. 9, with marginal adjustments for pensioners drawing pensions exceeding Rs. 200 but below Rs. 209, *i.e.*, the difference between the pension and Rs. 209.
11	Government servants retiring on or after 1-7-1963.	Rs. 5, with marginal adjustments for pensioners drawing pensions exceeding Rs. 100 but below Rs. 105, *i.e.*, the difference between the pension and Rs. 105.	Rs. 7.50, with marginal adjustments for pensioners drawing pensions exceeding Rs. 200 but below Rs. 207.50, *i.e.*, the difference between the pension and Rs. 207.50.

1968 ನೆಯ ಇಸವಿ ಮಾರ್ಚಿ 1ನೆಯ ದಿನಾಂಕದಂದು 1968-69ನೆಯ ವರ್ಷದ ಆಯವ್ಯಯ ಪತ್ರವನ್ನು ವಿಧಾನಸಭೆಯಲ್ಲಿ ಮಂಡಿಸುವ ಸಂದರ್ಭದಲ್ಲಿ ಮೈಸೂರು ರಾಜ್ಯದ ದ್ರವ್ಯಶಾಖೆಯ ಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆಯವರು ನೀಡಿದ ಭಾಷಣದ ಕನ್ನಡ ಭಾಷಾಂತರ.

ಮಹಾಶಯರೆ,

1968-69ನೆಯ ವರ್ಷದ ಮೈಸೂರು ರಾಜ್ಯದ ಆಯವ್ಯಯದ ಅಂದಾಜುಗಳನ್ನು ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ; ಅದರ ಜತೆಗೆ, ಸಮಗ್ರ ವರ್ಷದ ಆಯವ್ಯಯ ಪ್ರತವನ್ನು ಚರ್ಚಿಸಲು ಸದಸ್ಯರಿಗೆ ಹೆಚ್ಚು ಕಾಲಾವಕಾಶ ಒದಗಲೆಂಬ ದೃಷ್ಟಿಯಿಂದ, ವರ್ಷದ ಮೂರು ತಿಂಗಳ ಮಟ್ಟಿಗೆ ತಮ್ಮ ಲೇಖಾನುದಾನವನ್ನೂ ಕೋರುತ್ತೇನೆ.

ನಾನು ಕಳೆದ ಸಲ 1967-68ನೆಯ ಇಸವಿಯ ಆಯವ್ಯಯ ಪತ್ರವನ್ನು ಮಂಡಿಸಿದಂದಿನಿಂದೀಚೆಗೆ, ದೇಶದ ರಾಜಕೀಯ ಮತ್ತು ಅರ್ಥಿಕ ರಂಗಗಳೆರಡರಲ್ಲೂ ನಾನಾ ಬದಲಾವಣೆಗಳು ಸಂಭವಿಸಿವೆ. ಅನೇಕರ ಚಿಂತೆಗೆ ಕಾರಣವಾದ ಹಲವಾರು ಮಹತ್ವದ ಸಮಸ್ಯೆಗಳಲ್ಲಿ ಭಾಷಾ ಪ್ರಶ್ನೆಯೂ ಒಂದು. ರಾಜ್ಯ ಸರ್ಕಾರದವರು ಈಗಾಗಲೇ ತ್ರಿಭಾಷಾ ಸೂತ್ರವನ್ನು ಅಂಗೀಕರಿಸಿರುವ ವಿಚಾರವು ಈ ಸಭೆಗೆ ತಿಳಿದೇ ಇದೆ. ಆದರೂ ಈ ವಿಚಾರವಾಗಿ ಹಲವರಿಗೆ ಶಂಕೆಯುಂಟಾಗಿರುವ ಕಾರಣ, ಸಮಗ್ರ ದೇಶದ ಒಕ್ಕಟ್ಟನ್ನು ಗಮನದಲ್ಲಿಟ್ಟುಕೊಂಡು, ಸಂಬಂಧಪಟ್ಟವರೆಲ್ಲರಿಗೂ ಸಮಾಧಾನಕರವಾಗುವಂತೆ ಈ ಸಮಸ್ಯೆಯನ್ನು ಬಗೆಹರಿಸಲು ಕ್ರಮ ಕೈಕೊಳ್ಳಲಾಗುವುದೆಂದು ನಂಬಿದ್ದೇನೆ.

ಈ ಹಿಂದಿನ ಎರಡು ವರ್ಷಗಳಲ್ಲಿ ನಮ್ಮ ಅರ್ಥಿಕ ಸ್ಥಿತಿಯು ವಿಶೇಷವಾದ ಒತ್ತಡಕ್ಕೆ ಗುರಿಯಾಗಿದ್ದಿತು. 1965ರಲ್ಲಿ ನಡೆದ ಘರ್ಷಣೆಯು ದೇಶದ ಅರ್ಥಿಕ ಸ್ಥಿತಿಯ ಮೇಲೆ ಹಲವಾರು ಪ್ರತಿಕೂಲ ಪರಿಣಾಮಗಳನ್ನು ಬೀರಿದ್ದಿತು. ಯುದ್ಧ ಪ್ರಾರಂಭವಾಗುತ್ತಲೂ, ವಿದೇಶೀ ಸಾಲ ಬರುವುದು ನಿಂತುಹೋಯಿತು. ಇದರಿಂದಾಗಿ, ನಿರಂತರ ಅರ್ಥಿಕಾಭಿವೃದ್ಧಿಗೆ ಅತ್ಯವಶ್ಯವಾದ ಆಯಾತಗಳನ್ನು ತಗ್ಗಿಸಿ ಕಟ್ಟುನಿಟ್ಟಾದ ನಿಯಂತ್ರಣಕ್ಕೆ ಒಳಪಡಿಸಬೇಕಾಯಿತು. ದೇಶ ರಕ್ಷಣೆಗೆ ಹೆಚ್ಚಿನ ಹಣ ಒದಗಿಸಬೇಕಾದುದರಿಂದಲೂ ವಿದೇಶೀ ಸಾಲ ನಿಂತು, ಆಯಾತಗಳನ್ನು ಕಟ್ಟುನಿಟ್ಟಾಗಿ ಹಿಡಿತದಲ್ಲಿ ಇಟ್ಟುಕೊಳ್ಳಬೇಕಾದುದರಿಂದಲೂ, ಅಭಿವೃದ್ಧಿ ಕಾರ್ಯಕ್ರಮಕ್ಕೆ ಒದಗಿಸಬೇಕಾದ ಹಣದಲ್ಲಿ ಕಡಿತವುಂಟಾಯಿತು.

1964-65ರಲ್ಲಿ ಮತ್ತು 1965-66ರಲ್ಲಿ ಅನಾವೃಷ್ಟಿಯಿಂದಾಗಿ ವ್ಯವಸಾಯೋತ್ಪಾದನೆಯು ಕುಂಠಿತವಾದುದರಿಂದಲೂ ವ್ಯವಸಾಯ ಸಂಬಂಧವಾದ ಕಚ್ಚಾ ಸಾಮಾನುಗಳನ್ನೇ ಅವಲಂಬಿಸಿರುವ ಮಹತ್ವದ ಉದ್ಯಮಗಳಿಗೆ ಧಕ್ಕೆಯುಂಟಾಯಿತು.

ಅದುವರೆಗೆ ಉತ್ತಮ ಪ್ರಗತಿ ಸಾಧಿಸುತಿದ್ದ ದೇಶದ ಅರ್ಥಿಕ ವ್ಯವಸ್ಥೆಯ ಮೇಲೆ ಹೀಗೆ ರಾಜಕೀಯ ಘಟನೆಗಳೂ ನಿಸರ್ಗವೂ ಹಾವಳಿ ಮಾಡಿದುವು.

ದೇಶದಲ್ಲಿ ಉದ್ದಿಮೆ ಹಿಂಜರಿತವೂ ಹಣದುಬ್ಬರವೂ ಒಟ್ಟೊಟ್ಟಿಗೆ ತಲೆದೋರಿದ ಆದೊಂದು ವಿರೋಧಭಾಸ ಸ್ಥಿತಿ ಹುಟ್ಟಿಕೊಂಡಿದೆ. ಈ ಜಟಿಲ ಪರಿಸ್ಥಿತಿಯ ನಿವಾರಣೆಗೆ ಉದ್ಯಮಗಳೂ ಕಾರ್ಮಿಕ ಸಮುದಾಯವೂ ಸರ್ಕಾರದವರೂ ಸಂಪೂರ್ಣ ಸಹಕಾರದಿಂದ ಕಾರ್ಯೋದ್ಯುಕ್ತರಾಗಬೇಕು.

ನಮ್ಮ ದೇಶದ ವೇತನ ಮಟ್ಟವು ಅನ್ಯದೇಶಗಳಲ್ಲಿರುವ ವೇತನ ಮಟ್ಟಕ್ಕಿಂತ ಕಡಿಮೆಯಾಗಿರುವುದೇನೊ ನಿಜ—ಆದರೆ ನಮ್ಮ ಉತ್ಪನ್ನಗಳ ಬೆಲೆ ಹೆಚ್ಚಾದ ಕಾರಣ, ಅವು ಜಾಗತಿಕ ಮಾರುಕಟ್ಟೆಯಲ್ಲಿ ಸ್ಪರ್ಧೆಗೆ ಇಳಿಯಲು ಸಾಧ್ಯವಾಗದೆ ಹೋಗಿದೆ. ಈ ಪರಿಸ್ಥಿತಿಯನ್ನು ಯಶಸ್ವಿಯಾಗಿ ಎದುರಿಸಲು ಉತ್ಪಾದನ ಸಾಮರ್ಥ್ಯದ ಮಟ್ಟವನ್ನೂ ಪ್ರಮಾಣವನ್ನೂ ಹೆಚ್ಚಿಸಬೇಕಾಗಿದೆ.

ಸರ್ಕಾರಿ ಉದ್ಯಮ ವಲಯ—ಖಾಸಗಿ ವಲಯಗಳೆರಡೂ ಒಟ್ಟೊಟ್ಟಿಗೆ ಶ್ರಮಿಸಿ, ದೇಶದ ಅರ್ಥಿಕ ಸ್ಥಿತಿಯ ಅಭಿವೃದ್ಧಿಗೆ ನೆರವಾಗಬೇಕಾದ ಕಾಲ ಈಗ ಸನ್ನಿಹಿತವಾಗಿದೆ. ಈ ದಿಶೆಯಲ್ಲಿ ಇವೆರಡೂ ವಲಯಗಳು ಪ್ರಮುಖ ಪಾತ್ರ ವಹಿಸಬೇಕಾಗಿವೆ. ಹಿಂದಿನ 20 ವರ್ಷಗಳಲ್ಲಿ ದೇಶವು ಸಾಧಿಸಿದ ಪ್ರಗತಿಗೆ ಸರ್ಕಾರಿ ಉದ್ಯಮ ವಲಯದ ಮಹತ್ವಪೂರ್ಣ ಪಾತ್ರವೇ ಕಾರಣ. ವಿದ್ಯುಚ್ಛಕ್ತಿ, ರಸ್ತೆ ಮತ್ತು ಮೂಲೋದ್ಯಮಗಳು-ಇವೆಲ್ಲವರ ಅಭಿವೃದ್ಧಿಗೆ ಸರ್ಕಾರಿ ವಲಯವೇ ಕಾರಣ. ಸರ್ಕಾರಿ ವಲಯವು ಮುಂದೆ ಇನ್ನೂ ಹೆಚ್ಚಿನ ಪಾತ್ರ ವಹಿಸಲಿದೆ. ಸರ್ಕಾರದವರು ಮುಖ್ಯ ವಲಯಗಳಲ್ಲಿ ಭಾರಿ ಬಂಡವಾಳ ವಿನಿಯೋಗಿಸಿದ ಕಾರಣವೇ ಖಾಸಗಿ ವಲಯದ ಉದ್ಯಮಗಳು ವಿಸ್ತರಣ

ಗೊಂಡಿರುವುದಾಗಿದೆ. ಇನ್ನು ಮೇಲೆ ಸರ್ಕಾರಿ ವಲಯದ ಉದ್ಯಮಗಳು ಕೇವಲ ಭಾವಾವೇಶದ ಅಥವಾ ಆದರ್ಶ ಪ್ರೇರಣೆಯಿಂದ ಮುಂದುವರಿಯದೆ, ಆರ್ಥಿಕ ಮತ್ತು ವ್ಯಾಪಾರ ದೃಷ್ಟಿಯಿಂದ ಮುನ್ನಡೆಯಬೇಕು. ಅದೇ ರೀತಿಯಲ್ಲಿ, ಬ್ರಿಟಿಷರ ಆಳ್ವಿಕೆಯಲ್ಲಿ ದಳ್ಳಾಳಿ ವೃತ್ತಿಯನ್ನೇ ಪ್ರಧಾನವಾಗಿಟ್ಟುಕೊಂಡಿದ್ದ ಖಾಸಗಿ ವಲಯವು ಲಾಭಾರ್ಜನೆಯನ್ನು ಗೌಣವಾಗಿ ಪರಿಗಣಿಸಿ ಸಾಹಸದಿಂದ ಮುನ್ನುಗ್ಗುವ ಪ್ರವೃತ್ತಿಯನ್ನು ಇನ್ನೂ ಸಾಕಷ್ಟು ಬೆಳೆಸಿಕೊಂಡಿಲ್ಲ.

ಸರ್ಕಾರಿ ವಲಯದ ಉದ್ಯಮಗಳು ಆದಾಯ ವೃದ್ಧಿಗೆ ಮೂಲವೆಂಬುದೇನೋ ಸರಿಯೆ. ಆದರೆ ಅವುಗಳ ಕೆಲಸವಾದರೋ ನಿರೀಕ್ಷಿತ ಮಟ್ಟಕ್ಕೆ ಬಂದಿಲ್ಲ. ಅದಕ್ಕೆ ಕಾರಣಗಳು ಹಲವಾರು. ಸರ್ಕಾರಿ ಉದ್ಯಮ ಸಂಸ್ಥೆಗಳಿಂದ ಗಮನಾರ್ಹ ಪ್ರಯೋಜನವಾಗಬೇಕೆಂಬುದೇ ಜನಸಾಮಾನ್ಯರ ಅಪೇಕ್ಷೆ ಎಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಈ ಕರರಹಿತ ಆದಾಯ ಮೂಲವು ಹೆಚ್ಚಿದ ಪಕ್ಷದಲ್ಲಿ, ಆದರಿಂದ ಕರಭಾರವೂ ತಗ್ಗಬಹುದಾಗಿದೆ.

ನೈಸರ್ಗಿಕ ವಿಪತ್ತುಗಳಿಂದಲೂ, ಅನಾವೃಷ್ಟಿಯಿಂದಲೂ, ಹಾನಿಯುಂಟಾಗಿ ಆದರಿಂದ ಹಿಂಜರಿತ ಹಾಗೂ ಬೆಲೆಯೇರಿಕೆಯ ವಿಷಮಸ್ಥಿತಿ ಹುಟ್ಟಿಕೊಂಡರೂ ದೇಶವು ಹೇಗೋ ಈ ಸಂಕಟದಿಂದ ಪಾರಾಗಿದೆ. ಈ ದುಸ್ಥಿತಿ ನಿವಾರಣೆಗಾಗಿ ಹಲವಾರು ಕ್ರಮಗಳನ್ನು ಕೈಕೊಳ್ಳಲಾಗಿದೆ. ಹಿಂಜರಿತವನ್ನು ತಡೆಯಲು ಹಲವಾರು ಏರ್ಪಾಡುಗಳನ್ನು ಕೈಕೊಳ್ಳಲಾಗಿದ್ದಿತು. ನಿರ್ಯಾತಾರ್ಥವಾಗಿ ಉತ್ಪಾದನ ನಿರತವಾಗುವ ಮತ್ತು ಅತ್ಯವಶ್ಯ ಉದ್ಯಮಗಳ ಅನುಕೂಲತೆಗಾಗಿ 1966-67ರಿಂದ ಆಯಾತ ನಿಯಮಗಳನ್ನು ಸಡಿಲಗೊಳಿಸಲಾಗಿದೆ. ಉತ್ಪಾದನ ವಿವಿಧೀಕರಣಕ್ಕೆ ಉತ್ತೇಜನ ಕೊಡುವ ಸಲುವಾಗಿ 1967ನೇ ಇಸವಿ ಡಿಸೆಂಬರ್ ತಿಂಗಳಲ್ಲಿ ಆಯಾತ ನಿಯಮಗಳನ್ನು ಮತ್ತಷ್ಟು ಸಡಿಲಗೊಳಿಸಲಾಯಿತು. ಉದ್ಯಮಗಳ (ಅಭಿವೃದ್ಧಿ ಮತ್ತು ವಿನಿಯಮನ) ಸಂಬಂಧವಾದ ಅಧಿನಿಯಮದ ಲೈಸನ್ಸ್ ನೀಡಿಕೆ ನಿಯಮಗಳಿಂದ ಹಲವಾರು ಉದ್ಯಮಗಳಿಗೆ ವಿನಾಯತಿ ಕೊಟ್ಟಿದೆ. ಹೀಗೆ ವಿನಾಯತಿ ಪಡೆದ ಉದ್ದಿಮೆಗಳಲ್ಲಿ ಕಬ್ಬಿಣ ಮತ್ತು ಉಕ್ಕಿನ ಎರಕುಗಳು, ಎಲೆಕ್ಟ್ರಿಕ್ ಮೋಟಾರು, ಕಾಗದ ಮತ್ತು ಕುಸುರಿ, ವಿದ್ಯುತ್ತು, ಮದ್ಯಸಾರ, ಗೋಂದು, ಇತ್ಯಾದಿಗಳನ್ನು ಉಲ್ಲೇಖಿಸಬಹುದು. ಬೆಲೆ ಮತ್ತು ವಿತರಣ ನಿಯಂತ್ರಣ ಸಂಬಂಧವಾದ ಕಾರ್ಯನೀತಿಯಲ್ಲಿ ಕೊಂಚ ಬದಲಾವಣೆಯಾಗಿದೆ. ಕಬ್ಬಿಣ ಮತ್ತು ಉಕ್ಕಿಗೂ ಕಲ್ಲಿದ್ದಲಿಗೂ ವಿನಾಯತಿ ನೀಡಿರುವ ವಿಚಾರ, ಹತ್ತಿಯ ಮೇಲಣ ಶಾಸನ ನಿಯಂತ್ರಣವನ್ನು ತೆಗೆದುಹಾಕಿರುವ ವಿಚಾರ, ಹತ್ತಿ, ಸಕ್ಕರೆ ಇತ್ಯಾದಿ ಪದಾರ್ಥಗಳಿಗೆ ಕನಿಷ್ಠ ಬೆಂಬಲ ಬೆಲೆ ನೀಡಿರುವುದು—ಇದೆಲ್ಲ ಮಾನ್ಯ ಸದಸ್ಯರಿಗೆ ವಿದಿತವಾಗಿದೆಯಷ್ಟೆ. ಹಿಂದಿನ ಅಧಿವೇಶನದಲ್ಲಿ ಈ ಮಾನ್ಯ ಸದನವು ಕಬ್ಬಿನ ಮೇಲಣ ಕೊಳ್ಳಾಟ ತೆರಿಗೆಯನ್ನು ತಗ್ಗಿಸಲು ಒಪ್ಪಿಗೆ ನೀಡಿತ್ತು; ಕಬ್ಬಿಗೆ ಮೆಟ್ರಿಕ್ ಟನ್ ಒಂದಕ್ಕೆ 115 ರೂಪಾಯಿಯಷ್ಟು ಕನಿಷ್ಠ ಬೆಲೆ ಗೊತ್ತುಪಡಿಸಲು ರಾಜ್ಯ ಸರ್ಕಾರದವರು ಒಪ್ಪಿಗೆಕೊಟ್ಟಿದ್ದರು. ಇಂಜನಿಯರಿಂಗ್ ಮತ್ತು ಇತರ ಉದ್ದಿಮೆಗಳಲ್ಲಿ ಹಿಂಜರಿತ ಉಂಟಾದ ಕಾರಣ, ಭಾರತ ಸರ್ಕಾರದವರು ರೈಲ್ವೆ ಸಾರಿಗೆ, ಮೊದಲಾದ ಸರ್ಕಾರಿ ಉದ್ದಿಮೆಗಳಲ್ಲಿ ಹಣ ವಿನಿಯೋಗವನ್ನು ಹೆಚ್ಚಿಸಿದರು. ಹಿಂಜರಿತವನ್ನು ತಡೆಗಟ್ಟುವ ಸಲುವಾಗಿ ಭಾರತ ಸರ್ಕಾರದವರೂ ಭಾರತದ ರಿಸರ್ವ್ ಬ್ಯಾಂಕಿನವರೂ ಆರಂಶದ ಯೋಜನೆಯೊಂದನ್ನು ಸಿದ್ಧಪಡಿಸಿದ್ದಾರೆ. ಸರ್ಕಾರಿ ವಲಯದ ಉದ್ದಿಮೆಗಳು ಮುಂದಾಗಿಯೇ ಕೋರಿಕೆ ಸಲ್ಲಿಸುವುದು, ದೇಶೀಯ ಉತ್ಪನ್ನಗಳಿಗೆ ಪರಮಾವಧಿಯ ಬೆಂಬಲ ನೀಡುವುದು ; ಸಾಲದ ಸೌಲಭ್ಯಗಳನ್ನು ಹೆಚ್ಚಿಸುವುದು ; ಕೆಲಕೆಲವು ವಿಶಿಷ್ಟ ನಿರ್ಯಾತಗಳಿಗೆ ನಗದಾಗಿ ಸಹಾಯ ಧನ ನೀಡುವುದು ; ಉಕ್ಕನ್ನು ಅಂತರರಾಷ್ಟ್ರೀಯ ಬೆಲೆಗೆ ಕೊಂಡುಕೊಳ್ಳುವುದು—ಇವೇ ಮೊದಲಾದ ಕ್ರಮಗಳು ಆ ಆರಂಶದ ಯೋಜನೆಯಲ್ಲಿ ಅಡಕವಾಗಿವೆ. ಹಿಂಜರಿತವು ನಮ್ಮ ದೇಶವೊಂದಕ್ಕೇ ವಿಶಿಷ್ಟವಾದ ಪರಿಸ್ಥಿತಿ ಯೇನಲ್ಲವಾದರೂ, ಅದನ್ನು ತಡೆಗಟ್ಟಲು ಸರ್ಕಾರವು ಕೈಕೊಂಡ ತೀವ್ರಕ್ರಮವನ್ನು ಈ ಪೂರ್ವೋಕ್ತ ವ್ಯವಸ್ಥೆ ಸೂಚಿಸುತ್ತದೆ. ಇವೆಲ್ಲ ಏರ್ಪಾಡುಗಳ ಪ್ರಭಾವವು ಕಾಲಕ್ರಮದಲ್ಲಿ ವ್ಯಕ್ತವಾಗುವುದು. ಲೈಸೆನ್ಸ್ ನೀಡಿಕೆಯಲ್ಲಿ ಅನುಸರಿಸುವ ಧೋರಣೆಯನ್ನು ಉದಾರಗೊಳಿಸಿದರೂ, ಕಾರ್ಯವಿಧಾನದ ಮತ್ತು ಬೇರೆ ಔಪಚಾರಿಕ ವಿಧಿಗಳನ್ನು ಇನ್ನಷ್ಟು ಏಕರೂಪಕ್ಕೆ ತಂದು ಕಾರ್ಯಗತಗೊಳಿಸುವ ಕೆಲಸ ಇನ್ನೂ ನಡೆಯಬೇಕಾಗಿದೆ. ವಿದೇಶೀಯ ಸಹೋದ್ಯಮಿಗಳ ನೆರವನ್ನು ಬಯಸುವಾಗ, ಅವರಿಗೆ ನಾವು ಅನುಮತಿ ನೀಡುವಲ್ಲಿ ತಲೆದೋರುವ ವಿಳಂಬವನ್ನು ತಗ್ಗಿಸುವುದು ಅವಶ್ಯ. ಹೀಗೆಂದ ಮಾತ್ರಕ್ಕೆ, ದೇಶದ ಹಿತಾರ್ಥಗಳನ್ನು ಕಡೆಗಣಿಸಬೇಕೆಂದು ನನ್ನ ಅಭಿಪ್ರಾಯವಲ್ಲ. ಆದರೆ ಯಾವ ಯಾವ ಉದಾರ ಸೌಲಭ್ಯಗಳನ್ನು ನೀಡಬೇಕೋ ಅವುಗಳನ್ನೆಲ್ಲ ದೀರ್ಘಸೂತ್ರವಿಲ್ಲದೆ ಕೊಟ್ಟುಬಿಡಬೇಕು.

ವಿದ್ಯುಚ್ಛಕ್ತಿ ಇಲ್ಲದೆ ಔದ್ಯಮಿಕೀಕರಣವು ಸಾಧ್ಯವಿಲ್ಲವಷ್ಟೆ. ಆದ್ದರಿಂದ ಹಿಂದಿನ ಪಾಂಚವಾರ್ಷಿಕ ಯೋಜನೆಯಲ್ಲಿ ವಿದ್ಯುತ್ತಿನ ಅಭಿವೃದ್ಧಿಗೆ ಪ್ರಾಧಾನ್ಯ ನೀಡಲಾಯಿತು.

ಇದರ ಫಲವಾಗಿ, ಇಂದು ಮೈಸೂರು ರಾಜ್ಯವು ಬೃಹತ್ಪ್ರಮಾಣದ ಶರಾವತೀ ಯೋಜನೆಯಿಂದ ಧಾರಾಳ ವಿದ್ಯುಚ್ಛಕ್ತಿಯನ್ನು ಪಡೆಯುತ್ತಿದೆ. ಉದ್ಯಮೆದಾರರಿಗೆ ಬೇರೆ ರಾಜ್ಯಗಳಿಗಿಂತ ಈ ರಾಜ್ಯದಲ್ಲಿ ಕಡಿಮೆ ಬೆಲೆಗೆ ವಿದ್ಯುತ್ತನ್ನು ಪಡೆಯುವ ಸೌಲಭ್ಯವಿದೆ. ಉದ್ಯಮ ಸ್ಥಾಪನೆಯ ಶಕ್ಯತೆಯನ್ನು ಪ್ರಾರಂಭಿಕವಾಗಿ ಪರಿಶೀಲಿಸುವ ಹಲವಾರು ಕೈಪಿಡಿಗಳನ್ನು ಉದ್ಯಮ ಇಲಾಖೆಯು ಪ್ರಕಟಿಸಿದೆ. ಕಚ್ಚಾ ಸಾಮಗ್ರಿಗಳ ಲಭ್ಯತೆಯೇ ಮೊದಲಾದ ವಿಷಯಗಳ ಕುರಿತು ಸಾಕಷ್ಟು ಮಾಹಿತಿಯನ್ನು ಈ ಕೈಪಿಡಿಗಳು ನೀಡುತ್ತವೆ. ಸಂಯುಕ್ತ ರಾಷ್ಟ್ರ ಸಂಘದ ಕಾರ್ಯ ಸಂಸ್ಥೆಗಳ ಹಾಗೂ ರಾಷ್ಟ್ರೀಯ ಪ್ರಾಯೋಗಿಕ ಆರ್ಥಿಕ ಸಂಶೋಧನ ಪರಿಷತ್ತಿನ ನೆರವಿನಿಂದ ರಾಜ್ಯ ಸರ್ಕಾರದವರು ಗಹನವಾದ ವಿನಿಯೋಗ-ಪೂರ್ವ ಪರಿಶೀಲನೆಗಳನ್ನು ಕೈಕೊಂಡಿದ್ದಾರೆ. ಈ ಸಂಬಂಧವಾದ ಆರ್ಥಿಕ ಪರಿಶೀಲನ ವರದಿಗಳು ದೊರೆಯುತ್ತವೆ. ಇವುಗಳಲ್ಲದೆ ಅಲ್ಪ ಪ್ರಮಾಣೋದ್ಯಮ ಸಹಾಯ ಸಂಸ್ಥೆಯು ಕ್ಷೇತ್ರ ಹಾಗೂ ಔದ್ಯಮಿಕ ಪರಿಶೀಲನ ವರದಿಯನ್ನು ಪ್ರಕಟಿಸಿದೆ. ಈ ಸಂಬಂಧದಲ್ಲಿ ಕೈಕೊಂಡಿರುವ ವಿವರಣ ಪಟ್ಟಿಗಳು ಉದ್ಯಮ ವಲಯಗಳಿಗೆ ಉಪಯುಕ್ತವಾಗಬಲ್ಲವು. ಮಂಗಳೂರು ಬಂದರು ಯೋಜನೆಯ ಪ್ರಗತಿಯು ತೃಪ್ತಿಕರವಾಗಿದೆ. ಇದುವರೆಗೆ ಈ ಯೋಜನೆಗಾಗಿ 6.25 ಕೋಟಿ ರೂಪಾಯಿಯಷ್ಟು ಹಣ ವೆಚ್ಚವಾಗಿದೆ. ಈ ಪ್ರಾರಂಭಿಕ ಕಾರ್ಯ ಹಂತದಲ್ಲೂ ಕೂಡ ಈ ಪ್ರದೇಶದ ಸಮಗ್ರ ಸ್ವರೂಪವೇ ಮಾರ್ಪಟ್ಟಿರುವುದೂ ಸ್ಪಷ್ಟವಾಗಿದೆ. 1971-72ರ ವಳಗಾಗಿ ಈ ಬಂದರಿನ ಮೂಲಕ 2.96 ಮಿಲಿಯ ಟನ್ನು ಸರಕು ಸಾಗಣೆಯಾಗಬೇಕೆಂಬುದು ನಮ್ಮ ಉದ್ದೇಶ. ಬೇರೆ ಸಣ್ಣಪುಟ್ಟ ಬಂದರುಗಳ ನಿರ್ಮಾಣ ಕಾರ್ಯವು ಮುಂದುವರಿಯುತ್ತಿದೆ. ಇವುಗಳಿಗೆ ಭೂಮಿ ಒದಗಿಸುವ ಸಲುವಾಗಿ ಸರ್ಕಾರದವರು ಹಲವಾರು ಕಡೆ ಸುಮಾರು 8,000 ಎಕರೆ ಭೂಮಿಯು ಔದ್ಯಮಿಕ ಕ್ಷೇತ್ರದೊಳಗೆ ಬಂದಿರುವುದಾಗಿ ಘೋಷಿಸಿರುತ್ತಾರೆ. ಭೂಮಿಯ ಅರ್ಜನ ಕಾರ್ಯವು ಸರ್ಕಾರಿ ಕಾರ್ಯಸಂಸ್ಥೆಗಳ ಮೂಲಕವೂ ಮೈಸೂರು ಔದ್ಯಮಿಕ ಪ್ರದೇಶಾಭಿವೃದ್ಧಿ ಮಂಡಲಿಯ ಮೂಲಕವೂ ಹಂತಹಂತವಾಗಿ ಮುಂದುವರಿಯುತ್ತಿದೆ.

ಮೈಸೂರು ರಾಜ್ಯದ ಔದ್ಯಮಿಕ ವಿನಿಯೋಗ ಮತ್ತು ಅಭಿವೃದ್ಧಿ ನಿಗಮವು ಕೆನರಾ ಫರ್ಟಿಲೈಸರ್ಸ್ ಅಂಡ್ ಕೆಮಿಕಲ್ಸ್ ಲಿಮಿಟೆಡ್, ಚಿತ್ರದುರ್ಗ, ಕಾಪ್ಪರ್ ಕಂಪನಿ, ಲಿಮಿಟೆಡ್ ಮತ್ತು ಮೈಸೂರು ಅಸ್ಬೆಸ್ಟಾಸ್ ಪ್ರೈವೇಟ್, ಲಿಮಿಟೆಡ್—ಮುಂತಾದ ಭಾರೀ ಉದ್ಯಮ ಸಂಸ್ಥೆಗಳ ಸ್ಥಾಪನೆಯನ್ನು ಕೈಕೊಂಡಿದೆ. ಇದಲ್ಲದೆ ಮಲಬಾರ್ ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್, ಲಿಮಿಟೆಡ್, ಮೈಸೂರು ಮಿನರಲ್ಸ್, ಲಿಮಿಟೆಡ್, ಮೈಸೂರು ಅಸಿಟೇಟ್ ಅಂಡ್ ಕೆಮಿಕಲ್ಸ್. ಮೈಸೂರು ಮ್ಯಾಚ್ ಕಂಪನಿ, ಎಂ. ಎಸ್. ಕೆ. ಮಿಲ್ಸ್, ಮೈಸೂರು ಪೋರ್ಸಲೇನ್ಸ್, ಲಿಮಿಟೆಡ್, ವಿಜ್ಞಾನ ಇಂಡಸ್ಟ್ರೀಸ್ ಲಿಮಿಟೆಡ್, ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲೆಬಾರೆಟರಿ, ರೆಮಕೋ, ಕರ್ಣಾಟಕ ಎಕ್ಸ್‌ಪೋರ್ಟ್ಸ್, ಲಿಮಿಟೆಡ್, ಮುಂತಾದ ಉದ್ಯಮ ಸಂಸ್ಥೆಗಳಲ್ಲಿ ಶೇರುಗಳನ್ನು ಕೊಂಡುಕೊಳ್ಳುವುದರ ಮೂಲಕ ಧನಸಹಾಯ ನೀಡಲಾಗುತ್ತಿದೆ.

ಹೊಸ ಉದ್ಯಮಗಳಿಗೆ ಭೂಮಿ, ನೀರು ಇತ್ಯಾದಿ ಸೌಲಭ್ಯಗಳಲ್ಲದೆ ಬೇರೆ ಹಲವಾರು ಉತ್ತೇಜನಗಳನ್ನೂ ನೀಡಿದ ವಿಚಾರವು ಈ ಮಾನ್ಯ ಸಭೆಗೆ ಈಗಾಗಲೇ ವಿದಿತವಾಗಿದೆಯಷ್ಟೆ. ಅವಶ್ಯವಿರುವಲ್ಲೆಲ್ಲಾ ಮಾರಾಟ ತೆರಿಗೆಯನ್ನು ತಗ್ಗಿಸಲು ವಿಧಾನಮಂಡಲವು ಸರ್ಕಾರಕ್ಕೆ ಅಧಿಕಾರ ನೀಡಿರುವುದೇನೋ ನಿಜ, ಆದರೆ ಪ್ರತಿಯೊಂದು ಹೊಸ ಉದ್ಯಮ ವಿಚಾರದಲ್ಲೂ ಆಯಾ ಸಂದರ್ಭದ ಗುಣದೋಷಗಳನ್ನು ಪರಿಶೀಲಿಸಿ, ಈಗಿರುವ ಉದ್ಯಮಗಳಿಗೆ ತೊಂದರೆಯುಂಟಾಗದಂತೆ ಹೊಸ ಉದ್ಯಮ ಘಟಕಗಳಿಗೆ ತಾತ್ಕಾಲಿಕವಾಗಿ ಮಾತ್ರ ಈ ಸೌಲಭ್ಯ ನೀಡಲು ಸಾಧ್ಯ. ಇತರ ರಾಜ್ಯಗಳಲ್ಲಿ ಮಾರಾಟ ತೆರಿಗೆ ಕಡಿಮೆ. ಆದ್ದರಿಂದ ನಮ್ಮ ರಾಜ್ಯದ ತಯಾರಕರಿಗೆ ಒದಗುವ ತೊಂದರೆಯನ್ನು ನಿವಾರಿಸುವ ಸಲುವಾಗಿ, ನಮ್ಮ ರಾಜ್ಯದಲ್ಲಿ ತಯಾರಿಸಿದ ಸಾಧನ ಸಲಕರಣೆಗಳ ಮೇಲಿನ ಮಾರಾಟ ತೆರಿಗೆಯನ್ನು ಕಡಿಮೆ ಮಾಡಲಾಗುವುದು. ಅಕ್ಟ್ರಾಯ ತೆರಿಗೆಯನ್ನು ತೆಗೆದುಹಾಕಬೇಕೆಂಬ ಬೇಡಿಕೆಯಿದೆಯಷ್ಟೆ. ಆದರೆ ಅನೇಕ ಸ್ಥಳೀಯ ಸಂಸ್ಥೆಗಳಿಗೆ ಇದೊಂದು ಮುಖ್ಯ ಆದಾಯ ಮೂಲವಾಗಿದೆ. ಆದುದರಿಂದ ಈ ತೆರಿಗೆಯ ಬದಲಾಗಿ ಬೇರೆ ಆದಾಯಮೂಲಗಳನ್ನು ಕಂಡುಹಿಡಿದ ಹೊರತು ಅಂತಹ ಕ್ರಮ ಕೈಗೊಳ್ಳುವುದು ಸಾಧ್ಯವಿಲ್ಲ. ಈಗ ಅಕ್ಟ್ರಾಯ ತೆರಿಗೆ ಎಲ್ಲ ಕಡೆಗೂ ಒಂದೇ ರೀತಿಯಾಗಿಲ್ಲ. ಅದರ ಬಹ್ವಂಶವನ್ನು ಮಾರಾಟ ತೆರಿಗೆಯ ಬದಲಾಗಿ ಈಗಾಗಲೇ ಹೆಚ್ಚಿನ ಉತ್ಪಾದನ ಶುಲ್ಕ (ಅಬ್ಕಾರಿ) ವಿರುವ ಸಾಮಗ್ರಿಗಳ ಮೇಲೆ ವಿಧಿಸಲಾಗುತ್ತಿದೆ. ಇನ್ನು ಬೇರೆ ಹಲವಾರು ಸಂದರ್ಭಗಳಲ್ಲಿ ಘೋಷಿತ ಸರಕುಗಳ ಸಂಬಂಧದಲ್ಲಿ ಕಂಡುಬರುವಂತೆ ಪರಿಮಿತಿಗಳಿರುವುದರಿಂದ ಮಾರಾಟ ತೆರಿಗೆಯ ದರಗಳದ್ನು ಹೆಚ್ಚಿಸಲು ಸಾಧ್ಯವಿಲ್ಲವಾಗಿದೆ. ಹೆಚ್ಚಿನ ಮಾರಾಟ ತೆರಿಗೆಯಿಂದ ಬೆಲೆಗಳ ಮತ್ತು ವ್ಯಾಪಾರದ ಮೇಲೆ ಪ್ರತಿಕೂಲ ಪರಿಣಾಮವಾಗುವಿದ್ದರೆ, ದುರ್ವ್ಯವಹಾರಗಳು ಹೆಚ್ಚದಿದ್ದರೆ, ಮತ್ತು ಬೆಲೆಗಳು ಏರದಿದ್ದರೆ ಮಾತ್ರವೇ ಮಾರಾಟ ತೆರಿಗೆಯನ್ನು ಹೆಚ್ಚಿಸುವ ವಿಚಾರಕ್ಕೆ ಗಮನ ಕೊಡಬಹುದು. ಪ್ರಕೃತ ಪರಿಸ್ಥಿತಿಯಲ್ಲಿ, ಮಾರಾಟ ತೆರಿಗೆಯ ದರಗಳನ್ನು

ಇನ್ನೂ ಹೆಚ್ಚಿಸಲು ಅವಕಾಶವಿರುವುದಿಲ್ಲ. ಉದ್ಯಮಗಳಿಗೆ ಕೊಡುವ ಉತ್ತೇಜನಗಳನ್ನು ಎಷ್ಟು ಪ್ರಚಾರ ಮಾಡಿದರೂ, ವೈಯಕ್ತಿಕ ಸಂಪರ್ಕದಿಂದಲೇ ನಿಜವಾದ ಪ್ರಗತಿ ಸಾಧ್ಯ.

ಮುಂಬಯಿ, ಕಲಕತ್ತಾ, ಮುಂತಾದ ಕೆಲವಾರು ಮುಖ್ಯ ಮುಖ್ಯ ಉದ್ಯಮ ಕೇಂದ್ರಗಳನ್ನು ಮಾನ್ಯ ಮುಖ್ಯ ಮಂತ್ರಿಗಳೂ ನಾನೂ ಸಂದರ್ಶಿಸಿದ್ದೇವೆ. ನಮ್ಮ ಆಹ್ವಾನಕ್ಕೆ ದೊರೆತ ಪ್ರತಿಕ್ರಿಯೆ ಉತ್ತೇಜಕವಾಗಿದೆ. ಹೊರಗಿನಿಂದ 87 ಉದ್ಯಮಿಗಳು ಈ ವಿಚಾರದಲ್ಲಿ ಮಾಹಿತಿಗಳನ್ನು ಕೋರಿ ಪತ್ರ ಬರೆದಿದ್ದಾರೆ.

ಸರ್ಕಾರಿ ಮತ್ತು ಖಾಸಗಿ ವಲಯಗಳೆರಡರಲ್ಲೂ ನಡೆಯುವ ನಮ್ಮ ಉದ್ಯಮ ಯೋಜನೆಗಳಲ್ಲಿ ಕೆಲವಕ್ಕೆ ವಿದೇಶೀ ಸಂಸ್ಥೆಗಳಿಂದ ತಾಂತ್ರಿಕ ಮತ್ತು ಆರ್ಥಿಕ ಸಹಕಾರವನ್ನು ಗಳಿಸಿಕೊಳ್ಳುವ ಶಕ್ಯತೆಯನ್ನು ಅನ್ವೇಷಿಸುವ ದೃಷ್ಟಿಯಿಂದ ಮತ್ತು ನಮ್ಮ ವಿದೇಶೀ ಸಹೋದ್ಯಮಿಗಳೊಡನೆ ನಮ್ಮ ಸಂಪರ್ಕವನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ ಆಗಸ್ಟ್ 26, 1967 ರಿಂದ ಅಕ್ಟೋಬರ್ 26, 1967ರ ವರೆಗೆ ಅಮೇರಿಕಾದ ಸಂಯುಕ್ತ ಸಂಸ್ಥಾನಗಳು, ಜಪಾನ್, ಯುನೈಟೆಡ್ ಕಿಂಗ್‌ಡಮ್ ಮತ್ತು ಯೂರೋಪಿನ ಬೇರೆ ಮುಖ್ಯ ದೇಶಗಳನ್ನು ಸಂದರ್ಶಿಸಿದೆನು. ಇದರಿಂದ ನಮ್ಮ ರಾಜ್ಯದಲ್ಲಿ ಹೊಸ ಉದ್ಯಮಗಳ ಸ್ಥಾಪನೆಗೆ ನ್ಯಾಯಸಮ್ಮತ ಸಹಭಾಗದ ರೂಪದಲ್ಲೂ ತಾಂತ್ರಿಕ ಜ್ಞಾನ ದಾನದ ರೂಪದಲ್ಲೂ ವಿದೇಶೀ ಸಹಕಾರವು ಇನ್ನಷ್ಟು ಹೆಚ್ಚು ಲಭಿಸೀತೆಂದು ದೃಢವಾಗಿ ನಂಬಿದ್ದೇನೆ.

ನಮ್ಮ ರಾಜ್ಯದಲ್ಲಿ ಹೊಸ ಉದ್ಯಮಗಳ ಸ್ಥಾಪನೆಗೆ ಭಾರತ ಸರ್ಕಾರದವರು 1951ನೆಯ ಇಸವಿಯ ಉದ್ಯಮಗಳ (ಅಭಿವೃದ್ಧಿ ಮತ್ತು ವಿನಿಯಮನ) ಸಂಬಂಧವಾದ ಅಧಿನಿಯಮದ ಮೇರೆಗೆ 1956–57 ರಿಂದ 1965–66ರ ವರೆಗಿನ ಹತ್ತು ವರ್ಷಗಳ ಅವಧಿಯಲ್ಲಿ 351 ಉದ್ದಿಮೆ ಲೈಸೆನ್ಸುಗಳನ್ನು ನೀಡಿದ್ದಾರೆ. ಇವುಗಳಲ್ಲಿ ಹೊಸ ಉದ್ಯಮಗಳ ಸ್ಥಾಪನೆಗೆ ಕೊಟ್ಟಿರುವ ಲೈಸೆನ್ಸುಗಳು 102 ; ಹೊಸ ಬಗೆಯ ಸಾಮಗ್ರಿಗಳ ತಯಾರಿಕೆಗೆಂದು ಕೊಟ್ಟಿರುವ ಲೈಸೆನ್ಸುಗಳು 74 ; ಈಗಿರುವ ಉದ್ಯಮ ಸಂಸ್ಥೆಗಳ ಗಮನಾರ್ಹ ವಿಸ್ತರಣಕ್ಕೆಂದು ನೀಡಿರುವ ಲೈಸೆನ್ಸುಗಳು 153, ಉದ್ಯಮ ಸಂಸ್ಥೆಗಳ ಸ್ಥಳಾಂತರದ ಸಲುವಾಗಿ ನೀಡಿರುವ ಲೈಸೆನ್ಸುಗಳು 16, ಮತ್ತು ಮೈಸೂರು ರಾಜ್ಯದಲ್ಲಿ ಉದ್ಯಮ ಸಂಸ್ಥೆಯ ವ್ಯವಹಾರ ನಡೆಸಲು ಕೊಟ್ಟಿರುವ ಲೈಸೆನ್ಸುಗಳು 6. ಇದರಿಂದ ಜತೆಗೆ, ನವದಿಲ್ಲಿಯಲ್ಲಿರುವ ತಾಂತ್ರಿಕಾಭಿವೃದ್ಧಿ ಸಂಚಾಲನಾಲಯವು ಮಧ್ಯಮ ಪ್ರಮಾಣದ 10 ಉದ್ಯಮ ಘಟಕಗಳನ್ನು ರಿಜಿಸ್ಟರು ಮಾಡಿದೆ.

1966-67ರಲ್ಲಿ 49 ಹೊಸ ಉದ್ಯಮ ಸಂಸ್ಥೆಗಳಿಗೆ ಲೈಸೆನ್ಸು ಕೊಡುವಂತೆ ಶಿಫಾರಸು ಮಾಡಲಾಗಿದ್ದಿತು. ಇವುಗಳಲ್ಲಿ 13 ಕ್ಕೆ ಲೈಸೆನ್ಸು ನೀಡಲಾಗಿದೆ. ನವದಿಲ್ಲಿಯ ತಾಂತ್ರಿಕಾಭಿವೃದ್ಧಿ ಸಂಚಾಲನಾಲಯವು ಅವುಗಳ ಪೈಕಿ ಮಧ್ಯಮ ಪ್ರಮಾಣದ 2 ಉದ್ಯಮಗಳನ್ನು ರಿಜಿಸ್ಟರು ಮಾಡಿದೆ. 1967–68ರಲ್ಲಿ 22 ಹೊಸ ಉದ್ಯಮಗಳಿಗೆ ಲೆಸೆನ್ಸು ಕೊಡುವಂತೆ ಸಿಫಾರಸುಗಳನ್ನು ಕಳುಹಿಸಿದೆ.

ಹೊಸದಾಗಿ ಕಾರ್ಯರೂಪಕ್ಕೆ ಬಂದ ಮುಖ್ಯ ಉದ್ಯಮಗಳಲ್ಲಿ ಮೈಸೂರ್ ಆ್ಯಸಿಟೇಟ್ ಅಂಡ್ ಕೆಮಿಕಲ್ಸ್ ಲಿಮಿಟೆಡ್, ಮೈಸೂರ್ ಚಿಪ್‌ಬೋರ್ಡ್ಸ್ ಲಿಮಿಟೆಡ್, ಭಾರತ್ ಅರ್ತ್ ಮೂವರ್ಸ್ ಲಿಮಿಟೆಡ್, ಕಿರ್ಲೋಸ್ಕರ್ ಏಸಿಯಾ ಲಿಮಿಟೆಡ್, ಅಲೆಂಬಿಕ್ ಗ್ಲಾಸ್ ವರ್ಕ್ಸ್, ಸಂಡೂರ್ ಫೆರ್ರೋ-ಮ್ಯಾಂಗನೀಸ್, ದೀಪಕ್ ಇನ್ಸುಲೇಟೆಡ್ ಕೇಬಲ್ಸ್ ಕಾರ್ಪೊರೇಷನ್, ಲಿಮಿಟೆಡ್—ಎಂಬ ಸಂಸ್ಥೆಗಳನ್ನು ಉಲ್ಲೇಖಿಸಬಹುದು. ಇದುವರೆಗೆ ಲೈಸೆನ್ಸು ಪಡೆದಿರುವ ಬೇರೆ ಬೇರೆ ಉದ್ದಿಮೆಗಳು ನಾನಾ ಹಂತಗಳಲ್ಲಿ ಕಾರ್ಯರೂಪಕ್ಕೆ ಬರುತ್ತಿವೆ.

ಕೆಲವಾರು ಉದ್ದಿಮೆಗಳಿಗೆ ಹಿಂಜರಿತದಿಂದ ತಾತ್ಕಾಲಿಕವಾಗಿ ಹಾನಿತಟ್ಟಿರ ಬಹುದಾದರೂ, ಭಾರಿ ಉದ್ದಿಮೆಗಳಲ್ಲಿ, ಮುಖ್ಯವಾಗಿ ಬಟ್ಟೆಗಿರಣಿ, ಸಕ್ಕರೆ ಕಾರ್ಖಾನೆ, ಸಿಮೆಂಟ್ ಕಾರ್ಖಾನೆ, ಕಾಗದದ ಕಾರ್ಖಾನೆ, ಮಿಶಿನ್ ಟೂಲ್ಸ್ ಕಾರ್ಖಾನೆ ಮತ್ತು ರಾಸಾಯನಿಕ ಸಾಮಗ್ರಿಗಳ ಕಾರ್ಖಾನೆ, ಇವುಗಳಲ್ಲಿ ಉತ್ಪಾದನ ಸಾಮರ್ಥ್ಯವು ಗಮನಾರ್ಹವಾಗಿ ಹೆಚ್ಚಿದೆಯೆಂದು ಸಂತಸದಿಂದ ತಿಳಿಸಬಯಸುತ್ತೇನೆ. ರಾಜ್ಯದಲ್ಲಿ ತಯಾರಿಕೆ ಸಂಸ್ಥೆಗಳನ್ನು ಕೈಕೊಳ್ಳಲು ಉದ್ಯಮ ಸಂಸ್ಥೆಗಳನ್ನು ಹೊಸದಾಗಿ ಸ್ಥಾಪಿಸುವುದಲ್ಲದೆ, ಅವುಗಳ ಉತ್ಪಾದನ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕೂ ನಿರಂತರ ಪ್ರಯತ್ನ ನಡೆಯುತ್ತಿದೆ.

ಕಾರ್ಮಿಕ ಸಮುದಾಯದ ಮತ್ತು ಉತ್ಪಾದನೆಯ ಹಿತದೃಷ್ಟಿ ಯಿಂದ ಮಂಡ್ಯ ನ್ಯಾಷನಲ್ ಪೇಪರ್ ಮಿಲ್ಸ್ ಕಾರ್ಖಾನೆ, ಯಂ. ಯಸ್. ಕೆ. ಮಿಲ್ಸ್ ಲಿಮಿಟೆಡ್, ಇವುಗಳನ್ನು ಪುನಸ್ಸಜ್ಜೀಕರಿಸಲು ಸರಕಾರದವರು ನಿಷ್ಕೃಷ್ಟ ಕ್ರಮಕೈಕೊಂಡಿದ್ದಾರೆಂಬುದನ್ನು ತಿಳಿಯಲು ಸಭೆಗೆ ಸಂತೋಷವಾಗಬಹುದು. ಮೈಸೂರು ಸ್ಪಿನ್ನಿಂಗ್-ಅಂಡ್ ಮ್ಯಾನುಫ್ಯಾಕ್ಚರಿಂಗ್ ಕಂಪೆನಿ, ಮಿನರ್ವಾ ಮಿಲ್ಸ್ ಲಿಮಿಟೆಡ್—ಇವೆರಡು ಸಂಸ್ಥೆಗಳೂ ಕೆಲಸ ಪ್ರಾರಂಭಿಸಿವೆ. ಈ ಸಂಸ್ಥೆಗಳು ಸುಮುಖವಾಗಿ ಮುನ್ನಡೆಯುವಂತೆ ಅವುಗಳ ಸಮಸ್ಯೆಗಳ ಪರಿಹಾರಕ್ಕೆ ನಮ್ಮ ಸರ್ಕಾರಿ ಡೈರೆಕ್ಟರುಗಳು ನೆರವಾಗುತ್ತಿದ್ದಾರೆ.

ನಮ್ಮ ಸ್ಥಿತಿಗತಿಗಳೆಲ್ಲ ತೃಪ್ತಿಕರವಾಗಿವೆ ಎಂದೇನೂ ನಾನು ಹೇಳುವುದಿಲ್ಲ. ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಅಡಚಣೆಗಳನ್ನು ಅಭಿವೃದ್ಧಿ ಹೊಂದಿದ ದೇಶಗಳು ತಿಳಿದುಕೊಂಡಿವೆ ಎಂಬುದು ಮಾನ್ಯ ಸದಸ್ಯರಿಗೆ ವಿದಿತವಾಗಿದೆಯಷ್ಟೆ. ಇತ್ತೀಚೆಗೆ ನಡೆದ 'ಅಂಕ್ಟಾಡ್' ಸಮ್ಮೇಳನದ ಪ್ರಯತ್ನ ಫಲವಾಗಿ ನಮ್ಮ ಸರಕುಗಳಿಗೆ ಮಾರುಕಟ್ಟೆ ಲಭಿಸುವುದೆಂದು ನಾನು ನಂಬಿದ್ದೇನೆ.

ಮೈಸೂರಿನಲ್ಲಿರುವ ಸರ್ಕಾರಿ ಕಂಪೆನಿಗಳ ಸಹಿತವಾಗಿ ಸರ್ಕಾರಿ ವಲಯದ ಉದ್ಯಮ ಸಂಸ್ಥೆಗಳು ನಿರೀಕ್ಷಿತ ಮಟ್ಟದಲ್ಲಿ ಕೆಲಸ ಮಾಡುತ್ತಿಲ್ಲವೆಂದು ನಾನು ಈಗಾಗಲೇ ಹೇಳಿದ್ದೇನೆ. ಈ ಸಂಸ್ಥೆಗಳಿಂದ ಸೇಕಡಾ 9 ರಿಂದ 10 ರಷ್ಟು ಲಾಭ ಬರುವಂತೆ ಮಾಡಲು ಸರ್ವ ಪ್ರಯತ್ನವನ್ನೂ ಮಾಡಲಾಗುವುದೆಂದು ಈ ಸಭೆಗೆ ಆಶ್ವಾಸನೆ ನೀಡುತ್ತೇನೆ. ಉತ್ಪತ್ತಿ ವ್ಯಯ ಸಂಬಂಧವಾದ ಲೆಕ್ಕಪತ್ರಗಳನ್ನು ಸರಿಯಾಗಿಡಬೇಕೆಂದು ಸರ್ಕಾರಿ ಲೆಕ್ಕಪತ್ರ ಸಮಿತಿಯವರು ಮಾಡಿದ ಟೀಕೆ ನನ್ನ ಪರಿಶೀಲನೆಯಲ್ಲಿದೆ. ಅಂದಾಜು ಸಮಿತಿಯವರ ಸೂಚನೆಗಳನ್ನೂ ಗಮನಕ್ಕೆ ತೆಗೆದುಕೊಳ್ಳಲಾಗಿದೆ. ಸರ್ಕಾರಿ ವ್ಯವಸ್ಥಾಪನೆಯಲ್ಲಿರುವ ಉದ್ಯಮ ಸಂಸ್ಥೆಗಳಲ್ಲಿ ಸಕಾಲಿಕ ಮಾರ್ಗದರ್ಶನ ನೀಡಲು ಒಬ್ಬರು ಉದ್ಯಮಾಯುಕ್ತರನ್ನೂ (ಇಂಡಸ್ಟ್ರಿಯಲ್ ಕಮಿಷನರ್) ಉತ್ಪತ್ತಿ ವ್ಯಯದ ಲೆಕ್ಕಪತ್ರ ಪದ್ಧತಿಯನ್ನು ಶಾಸ್ತ್ರೀಯವಾಗಿ ಸುಗಮಗೊಳಿಸಲು ಒಬ್ಬರು ಉತ್ಪತ್ತಿ ವ್ಯಯ ತಜ್ಞರನ್ನೂ ಸರ್ಕಾರದವರು ನೇಮಿಸಲಿದ್ದಾರೆ. ಈ ವ್ಯವಸ್ಥೆಗಳಿಗೆ ಸ್ವಾಗತ ಲಭಿಸುವುದೆಂದು ಆಶಿಸುತ್ತೇನೆ.

ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಶೇರುಗಳೆಲ್ಲಾ ರಾಜ್ಯ ಸರ್ಕಾರಕ್ಕೇ ಸೇರಿವೆ. ಈ ಕಾರ್ಖಾನೆಯು ಅಭಿವೃದ್ಧಿ ಕಾರ್ಯವನ್ನು ಈಡೇರಿಸುವಲ್ಲಿ ಆರ್ಥಿಕ ಸಂಕಷ್ಟಕ್ಕೊಳಗಾಯಿತು. ಇದರಿಂದ ರಾಜ್ಯ ಸರ್ಕಾರಕ್ಕೆ ಸಲ್ಲತಕ್ಕ ಮೊತ್ತಗಳನ್ನು ಶೇರುಗಳನ್ನಾಗಿ ಪರಿವರ್ತಿಸುವುದಕ್ಕೂ ಸಮಾನ ಹಕ್ಕಿನ ಸಮಂಜಸ ಋಣ ಪ್ರಮಾಣವನ್ನು ಒದಗಿಸಿಕೊಳ್ಳುವುದಕ್ಕೂ ಶೇರು ಬಂಡವಾಳದಲ್ಲಿ ವಿನಿಯೋಗಿಸುವುದಕ್ಕೆಂದು ಭಾರತ ಸರ್ಕಾರದವರಿಂದ ಹಣ ಸಾಲ ಪಡೆಯುವುದಕ್ಕೂ ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಇದಲ್ಲದೆ ನಿರ್ದಿಷ್ಟಾವಧಿಯ ಸಾಲವನ್ನು ಒದಗಿಸುವುದಕ್ಕಾಗಿ ಕಮರ್ಷಿಯಲ್ ಬ್ಯಾಂಕುಗಳಿಗೂ ಕೋರಿಕೆ ಸಲ್ಲಿಸಿದ್ದಾರೆ. ಮಿಶ್ರಲೋಹ ಮತ್ತು ವಿಶೇಷ ಉಕ್ಕಿನ ಕಾರ್ಖಾನೆಯು ಮತ್ತು ಬೀಡು ಕಬ್ಬಿಣ ಕಾರ್ಖಾನೆಯ ಸ್ಥಾಪನೆಯನ್ನು 1968ರಲ್ಲಿ ಪೂರ್ತಿಗೊಳಿಸುವ ನಿರೀಕ್ಷೆ ಇದೆ. ಈ ಕಾರ್ಖಾನೆಗಳು ಕಾರ್ಯಾರಂಭ ಮಾಡಿ, ಸಿದ್ಧವಸ್ತುಗಳ ಮಾರಾಟಕ್ಕೆ ವ್ಯವಸ್ಥೆಯಾದೊಡನೆ, ಈ ಬೃಹತ್ಸಂಸ್ಥೆಯು ರಾಜ್ಯದ ಆರ್ಥಿಕಾಭಿವೃದ್ಧಿಯನ್ನು ತ್ವರೆಗೊಳಿಸುವುದೆಂದು ಆಶಿಸುತ್ತೇವೆ. ಅಭಿವೃದ್ಧಿ ಕಾರ್ಯಕ್ರಮವನ್ನು ಪೂರ್ಣಗೊಳಿಸಲು ಅಪಾರ ಧನ ಬೇಕಾಗುವ ಕಾರಣ ಭಾರತ ಸರ್ಕಾರದವರು ಸಕಾಲಿಕ ಸಹಾಯವನ್ನು ನೀಡುವರೆಂಬ ಹಾರೈಕೆ ಇದೆ. ಕೆಲವೇ ವರ್ಷಗಳ ಹಿಂದೆ ಈ ಸಂಸ್ಥೆಯು ಶೇರಿನ ಮತ್ತು ಸಾಲದ ಮೂಲಕ ಸುಮಾರು 11 ಕೋಟಿ ರೂಪಾಯಿಯ ಹಣ ವಿನಿಯೋಗವುಳ್ಳ ಲಿಮಿಟೆಡ್ ಸಂಸ್ಥೆಯಾಗಿ ಪರಿವರ್ತಿತವಾಗಿತ್ತೆಂಬ ಅಂಶವನ್ನು ಮಾನ್ಯ ಸದಸ್ಯರು ಗಮನಿಸಬೇಕು. ಮುಂದೆ ಒಂದೆರಡು ವರ್ಷಗಳಲ್ಲಿ ಈ ಸಂಸ್ಥೆಯ ಧನ ವಿನಿಯೋಗವು 60 ಕೋಟಿ ರೂಪಾಯಿಗೇರಿ ಅದರ ವ್ಯಾಪಾರ ಪ್ರಮಾಣವು ಗಮನಾರ್ಹವಾಗಿ ಹೆಚ್ಚುವಂತಾಗುವುದು.

ಉತ್ಪಾದನೆಯನ್ನು ನಿಯಂತ್ರಿಸಿ ಸಾಕಷ್ಟು ಸಾಧನ ಸಂಪತ್ತಿಯನ್ನು ಒದಗಿಸಿಕೊಳ್ಳಲು ಗಣಿ ಮತ್ತು ಭೂಗರ್ಭ ಇಲಾಖೆಯು ಮರಳು-ಕಲ್ಲು, ಗ್ರ್ಯಾನೈಟ್ ಕಲ್ಲು, ಇತ್ಯಾದಿ ಕೆಳವರ್ಗದ ಖನಿಜ ಮೂಲಗಳ ಸುವ್ಯವಸ್ಥಿತ ಪರಿಶೀಲನೆಯನ್ನು ಕೈಗೊಂಡಿದೆ. ಭೂಗತ ಜಲಮೂಲದ ಅಭಿವೃದ್ಧಿಗೂ ಖನಿಜ ನಿಕ್ಷೇಪಗಳ ಅನ್ವೇಷಣೆಗೂ, ಅವುಗಳ ಔದ್ಯಮಿಕ ಉಪಯುಕ್ತತೆಗೂ ಹೆಚ್ಚಿನ ಗಮನನೀಡಲಾಗುತ್ತಿದೆ.

ಚಿತ್ರದುರ್ಗದ ತಾಮ್ರ ಸಂಸ್ಥೆಯು ಪ್ರಗತಿ ಸಾಧಿಸಿದೆ. ತಾಮ್ರಾಂಶವು ಹೆಚ್ಚಾಗಿರುವ ವಸ್ತುಗಳು 1969ರ ಅಂತ್ಯದೊಳಗಾಗಿ ಉತ್ಪಾದನೆಯಾಗುವ ನಿರೀಕ್ಷೆ ಇದೆ.

ಖನಿಜಾಭಿವೃದ್ಧಿ ಮಂಡಲಿಯ ಕೆಲಸಗಳು ತೃಪ್ತಿಕರವಾಗಿ ಸಾಗುತ್ತಿರಲಿಲ್ಲ. ಆದುದರಿಂದ ಈ ಮಂಡಲಿಯನ್ನು ಸಮಾಪ್ತಿಗೊಳಿಸಲಾಯಿತು: ಅದರ ಕೆಲಸವನ್ನು ಈಗ ಮೈಸೂರ್ ಮಿನರಲ್ಸ್, ಲಿಮಿಟೆಡ್, ಈ ಸಂಸ್ಥೆಯು ವಹಿಸಿಕೊಂಡಿದೆ. ಇದು ಲಾಭದಾಯಕವಾದ ಮುಖ್ಯ ಖನಿಜಗಳ ಅದಿರುಗಳನ್ನು ತೆಗೆಸುವ ಕೆಲಸಗಳನ್ನು ಪುನಃ ಪ್ರಾರಂಭಿಸಿ, ಅವುಗಳ ಮಾರಾಟದಲ್ಲಿ ನಿರತವಾಗಿದೆ. ಈ ಸಂಸ್ಥೆಯು ಪಶ್ಚಿಮ ಕರಾವಳಿಯ ಕಾರವಾರ ಮತ್ತು ಬೇಲೆಕೇರಿ ಬಂದರುಗಳಿಂದ ಅದಿರು ಸಾಗಿಸುವ ಕೆಲಸವನ್ನು ಕೈಗೊಂಡಿದೆ. ಸೇಡಂನಲ್ಲಿ ಒಂದು ಮಿಲಿಯ ಟನ್ ಉತ್ಪಾದನ ಸಾಮರ್ಥ್ಯದ ಸಿಮೆಂಟ್ ಕಾರ್ಖಾನೆಯ ನಿರ್ಮಾಣ ಕಾರ್ಯವು ತೃಪ್ತಿಕರವಾಗಿ ಸಾಗಿದೆ. ವಾಡಿಯಲ್ಲಿ ಸ್ಥಾಪಿತವಾದ ಎ. ಸಿ. ಸಿ. ಕಾರ್ಖಾನೆಯಲ್ಲಿ ಬೇಗನೆ ಉತ್ಪಾದನೆ ಪ್ರಾರಂಭವಾಗುವ ನಿರೀಕ್ಷೆ ಇದೆ.

ಪಿಂಗಾಣಿ ಕಾರ್ಖಾನೆಯು ವಿವರಣ ಪತ್ರ (ಪ್ರಾಸ್ಪೆಕ್ಟಸ್) ವನ್ನು ಹೊರಡಿಸಿ ಸಾರ್ವಜನಿಕ ವಂತಿಕೆಗಳನ್ನು ಕೋರಿದೆ. ರಾಜ್ಯದ ಆರ್ಥಿಕಾಭಿವೃದ್ಧಿಯಲ್ಲಿ ಅದು ಪ್ರಗತಿಪರವಾದ ಪಾತ್ರವಹಿಸುವುದೆಂದು ನಿರೀಕ್ಷಿಸುತ್ತೇನೆ. ಮೈಸೂರು ಅಸಿಟೇಟ್ ಲಿಮಿಟೆಡ್ ಸಂಸ್ಥೆಯಲ್ಲಿ ಉತ್ಪಾದನೆ ಕಾರ್ಯವು

ಹಂತ ಹಂತವಾಗಿ ಬೇಗನೆ ಪ್ರಾರಂಭವಾಗುವ ನಿರೀಕ್ಷೆ ಇದೆ. ಕಬ್ಬಿನ ಅಭಾವದಿಂದಾಗಿ ಸಕ್ಕರೆಯ ಉತ್ಪಾದನೆಯು ಕುಂಠಿತವಾಗಿದೆ. ಹೆಚ್ಚಿನ ಸಕ್ಕರೆ ಕಾರ್ಖಾನೆಗಳು ಮುಂದಿನ ಬೆಳೆಯ ಕಾಲದಲ್ಲಿ ಪೂರ್ಣೋತ್ಪಾದನೆಗೆ ತೊಡಗುವುವು.

ಪ್ರಸಕ್ತ ವರ್ಷದ ಅಧಿಭಾಗದಲ್ಲಿ ಬಿದ್ದ ಮಳೆಯಿಂದ ನಮ್ಮ ಆರ್ಥಿಕ ಸ್ಥಿತಿಗೆ ಸಾಕಷ್ಟು ಉತ್ತೇಜನ ದೊರೆಯಿತು. ಅಕ್ಟೋಬರ್ 1967ರವರೆಗೆ ಬೆಳೆಗಳ ಸ್ಥಿತಿಯು ಆಶಾದಾಯಕವಾಗಿತ್ತು. ಆದರೆ ದುರದೃಷ್ಟದಿಂದ ಹಿಂಗಾರು ಮಳೆ ಬೀಳದೆ ಹೋಯಿತು. ಇದರಿಂದ, ಕೆಲವು ಪ್ರದೇಶಗಳಲ್ಲಿ ಪರಿಸ್ಥಿತಿ ಅಸಮಾಧಾನಕರವಾಗಿದ್ದಿತು. ಆದುದರಿಂದ ಸರ್ಕಾರದವರು ಪರಿಹಾರ ಕಾರ್ಯಗಳನ್ನು ಕೈಕೊಳ್ಳಬೇಕಾಯಿತು. ನಾನಾ ಪರಿಹಾರ ಕಾರ್ಯಗಳಿಗಾಗಿ ಇದುವರೆಗೆ ಸುಮಾರು 62 ಲಕ್ಷ ರೂಪಾಯಿ ಹಣವನ್ನು ಹೆಚ್ಚಿಗೆ ಅನುದಾನವಾಗಿ ಮಂಜೂರುಮಾಡಲಾಗಿದೆ. ಹೆಚ್ಚಿನ ಕೇಂದ್ರ ಸಹಾಯಕ್ಕಾಗಿ ಭಾರತ ಸರ್ಕಾರದವರನ್ನು ವಿನಂತಿಸಿಕೊಳ್ಳಲಾಗಿದೆ.

ಬೇರೆ ರಂಗಗಳ ಅಭಿವೃದ್ಧಿಯು ವ್ಯವಸಾಯ ಕ್ಷೇತ್ರವನ್ನೇ ಅವಲಂಬಿಸಿದೆ. ರಾಜ್ಯದ ಆದಾಯದ ಬಹುಭಾಗವು ವ್ಯವಸಾಯ ವಲಯದಿಂದಲೇ ಬರುವುದಾಗಿದೆ. ಆದುದರಿಂದ ಸರ್ಕಾರದವರು ವ್ಯವಸಾಯದಲ್ಲಿ ತ್ವರಿತಾಭಿವೃದ್ಧಿ ಸಾಧನೆಗೆ ಬಹುಮುಖವಾಗಿ ಯತ್ನಿಸಿದ್ದಾರೆ. ತೃತೀಯ ಯೋಜನೆಯಲ್ಲಿ ಕೈಕೊಂಡಿದ್ದ ಹಲವಾರು ಏರ್ಪಾಡುಗಳು ರಾಜ್ಯದ ಆರ್ಥಿಕ ಪ್ರಗತಿಯನ್ನು ಹೆಚ್ಚಿಸಲು ಅನುಕೂಲವಾದವು. ವ್ಯವಸಾಯಾಭಿವೃದ್ಧಿಗೆ ಪರಿಣಾಮಕಾರಿ ವಿಧಾನಗಳೂ, ಸಂಸ್ಥೆಗಳೂ ಕಾರ್ಯಕ್ರಮಗಳೂ ಸಿದ್ಧವಾಗಿವೆ. ಈ ಸಂಬಂಧವಾಗಿ ಹಾಕಿಕೊಂಡ ಕಾರ್ಯಕ್ರಮಗಳಲ್ಲಿ, ಮುಖ್ಯವಾಗಿ ಮಂಡ್ಯದಲ್ಲಿ ಕೈಕೊಂಡ 'ವ್ಯವಸಾಯ ಜಿಲ್ಲಾ ಕಾರ್ಯಕ್ರಮದ' ಜೊತೆಗೆ 10 ಜಿಲ್ಲೆಗಳಲ್ಲಿ ಪ್ರಾರಂಭಿಸಿದ ''ಹೆಚ್ಚು ಇಳುವರಿ ಬೆಳೆಯ'' ಕಾರ್ಯಕ್ರಮವನ್ನೂ ''ಸಾಂದ್ರ ವ್ಯವಸಾಯ ಕ್ಷೇತ್ರ ಕಾರ್ಯಕ್ರಮ'' ವನ್ನೂ ಉಲ್ಲೇಖಿಸಬಹುದು.

1967-68ರಲ್ಲಿ 1.40 ಲಕ್ಷ ಎಕರೆ ವಿಸ್ತೀರ್ಣದೊಳಗೆ ಮುಂಗಾರಿನಲ್ಲಿ ''ಹೆಚ್ಚು ಇಳುವರಿ ಬೆಳೆಯ ಕಾರ್ಯಕ್ರಮ'' ನಡೆದಿದೆ. ಬೇಸಿಗೆಯಲ್ಲಿ 2·4 ಲಕ್ಷ ಎಕರೆ ವಿಸ್ತೀರ್ಣದಲ್ಲಿ ಇದೇ ಕಾರ್ಯಕ್ರಮವನ್ನು ನಡೆಸುವ ಉದ್ದೇಶವಿದೆ. 1968-69ರಲ್ಲಿ 10.70 ಲಕ್ಷ ಎಕರೆಯಲ್ಲಿ ಈ ಕಾರ್ಯಕ್ರಮವು ನಡೆಯುವುದಾಗಿದೆ. 86·14 ಲಕ್ಷ ಎಕರೆ ವಿಸ್ತೀರ್ಣದಲ್ಲಿ ನಡೆಯತಕ್ಕ ''ಸಾಂದ್ರ ವ್ಯವಸಾಯ ಕ್ಷೇತ್ರ ಕಾರ್ಯಕ್ರಮದ'' ಮೇರೆಗೆ 1967-68ರಲ್ಲಿ 17 ಲಕ್ಷ ಎಕರೆ ಮುಂಗಾರಿಗೆ ಗೊತ್ತುಪಡಿಸಿದ ಗುರಿ. ಆದರೆ, ವಾಸ್ತವವಾಗಿ 18 ಲಕ್ಷ ಎಕರೆಯಲ್ಲಿ ಕೆಲಸ ನಡೆದಿದೆ. ಬೇಸಿಗೆಯಲ್ಲಿ 9 39 ಲಕ್ಷ ಎಕರೆಯಲ್ಲಿ ಈ ಕೆಲಸ ನಡೆಯುವುದು. 1968-69ರಲ್ಲಿ 42.05 ಲಕ್ಷ ಎಕರೆಯಲ್ಲಿ ಈ ಕಾರ್ಯಕ್ರಮವು ನಡೆಯಬೇಕಾಗಿದೆ. ''ಸಾಂದ್ರ ವ್ಯವಸಾಯ ಜಿಲ್ಲಾ ಕಾರ್ಯಕ್ರಮದಲ್ಲಿ'' 1966-67ರಲ್ಲಿ ಶೇಕಡ 93ರಷ್ಟು ಪ್ರದೇಶದಲ್ಲಿ ಕೆಲಸವು ಪೂರ್ತಿಯಾಗಿದೆ. ಪ್ರಸಕ್ತ ವರ್ಷದಲ್ಲಿ ಈ ಕಾರ್ಯಕ್ರಮವು ಸಮಗ್ರ ಪ್ರದೇಶದಲ್ಲಿ ನಡೆಯುವುದು.

ಬೃಹತ್ ಪ್ರಮಾಣದ ಮತ್ತು ಅಲ್ಪ ಪ್ರಮಾಣದ ನೀರಾವರಿ ಯೋಜನೆಗಳ ವಿಸ್ತರಣವು ಮುಂದುವರಿದಿದೆ. 1968-69ರಲ್ಲಿ 2.23 ಲಕ್ಷ ಎಕರೆಯಷ್ಟು ಪ್ರದೇಶಕ್ಕೆ ಹೊಸತಾಗಿ ನೀರಾವರಿ ವ್ಯವಸ್ಥೆ ಮಾಡುವ ಉದ್ದೇಶವಿದೆ. ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳ ತುಂಗಭದ್ರಾ ಪ್ರದೇಶಗಳನ್ನು '' ಸಾಂದ್ರ ಕ್ಷೇತ್ರಾಭಿವೃದ್ಧಿ ಕಾರ್ಯಕ್ರಮದ ಪ್ರದೇಶ ''ವನ್ನಾಗಿ ಪರಿವರ್ತಿಸಲು ಭಾರತ ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಪ್ರತ್ಯೇಕ ಸಂಪುಟದಲ್ಲಿ ವಿವರಿಸಿದಂತೆ ಚಿಕ್ಕಪುಟ್ಟ ನೀರಾವರಿಯ ಸಂಬಂಧವಾಗಿ ಕೆರೆ-ಬಾವಿಗಳ ನಿರ್ಮಾಣ, ಪಂಪುಸೆಟ್ಟುಗಳ ಪೂರೈಕೆ—ಈ ಕೆಲಸಗಳಲ್ಲಿ ಸಾಕಷ್ಟು ಪ್ರಗತಿಯಾಗಿದೆ. 39 ಲಕ್ಷ ಎಕರೆ ವಿಸ್ತೀರ್ಣದಲ್ಲಿ ಸುಧಾರಿತ ಕೃಷಿ ವಿಧಾನಗಳನ್ನು ಕೈಕೊಳ್ಳಲಾಗಿದೆ. 2·98 ಲಕ್ಷ ಎಕರೆ ವಿಸ್ತೀರ್ಣದಲ್ಲಿ ಜಪಾನೀ ವಿಧಾನದ ಬತ್ತ ಸಾಗುವಳಿಯನ್ನು ಕೈಕೊಳ್ಳಲಾಗಿದ್ದಿತು. ರಾಸಾಯನಿಕ ಗೊಬ್ಬರದ ದಾಸ್ತಾನು ಸ್ಥಿತಿ ಉತ್ತಮಗೊಂಡಿದ್ದು, ಮುಂದಿನ ಜೂನ್ ತಿಂಗಳೊಳಗಾಗಿ 2 ಲಕ್ಷ ಟನ್ನಿನಷ್ಟು ದಾಸ್ತಾನಾಗುವ ನೀರೀಕ್ಷೆ ಇದೆ. 1967–68ರಲ್ಲಿ 1·75 ಲಕ್ಷ ಟನ್ನಿನಷ್ಟು ನಗರ ಕಂಪೋಸ್ಟ್ ಗೊಬ್ಬರವೂ 30 ಲಕ್ಷ ಟನ್ನಿನಷ್ಟು ಗ್ರಾಮಾಂತರ ಕಂಪೋಸ್ಟ್ ಗೊಬ್ಬರವೂ ಉತ್ಪಾದನೆಯಾಗುವುದೆಂದು ಅಂದಾಜು ಮಾಡಲಾಗಿದೆ. ಹಸುರೆಲೆ ಗೊಬ್ಬರ ಹಾಕಿದ ಪ್ರದೇಶದ ವಿಸ್ತೀರ್ಣವು 2 ವರ್ಷಗಳಲ್ಲಿ 5 ಲಕ್ಷ ಎಕರೆಯಿಂದ 7·5 ಲಕ್ಷ ಎಕರೆಗೆ ಏರಿದೆ. 1968-69ರಲ್ಲಿ 4·5 ಲಕ್ಷ ಟನ್ನಿನಷ್ಟು ನಗರ ಕಂಪೋಸ್ಟ್ ಗೊಬ್ಬರವನ್ನು ಮತ್ತು 48 ಲಕ್ಷ ಟನ್ನಿನಷ್ಟು ಗ್ರಾಮಾಂತರ ಕಂಪೋಸ್ಟ್ ಗೊಬ್ಬರವನ್ನು ತಯಾರಿಸಬೇಕೆಂದೂ, ಹಾಗೂ 10 ಲಕ್ಷ ಎಕರೆ ವಿಸ್ತೀರ್ಣಕ್ಕೆ ಹಸುರೆಲೆ ಗೊಬ್ಬರ ಹಾಕಬೇಕೆಂದೂ ಕಾರ್ಯಕ್ರಮ ಹಾಕಿಕೊಂಡಿದೆ. ವ್ಯವಸಾಯ ಇಲಾಖೆಯು 1966-67ರಲ್ಲಿ 99 ಟ್ರಾಕ್ಟರುಗಳನ್ನೂ 1967-68ರಲ್ಲಿ 159 ಟ್ರಾಕ್ಟರುಗಳನ್ನೂ ಹಂಚಿದೆ. ಭೂಸಾರ ರಕ್ಷಣ ಯೋಜನೆಯ ಮೇರೆಗೆ 1966-67ರಲ್ಲಿ 2·86 ಲಕ್ಷ ಎಕರೆಯಲ್ಲೂ 1967—68 ರಲ್ಲಿ 1.93 ಲಕ್ಷ ಎಕರೆಯಲ್ಲೂ ಭೂಸಾರ ರಕ್ಷಣ ಕಾರ್ಯ ನಡೆದಿದೆ.

ಮುಂದಿನ ವರ್ಷದಲ್ಲಿ 1.60 ಲಕ್ಷ ಎಕರೆಯಲ್ಲಿ ಈ ಕೆಲಸ ನಡೆಸುವ ಉದ್ದೇಶವಿದೆ. ಸಸ್ಯಸಂರಕ್ಷಣ ಕಾರ್ಯಕ್ರಮವನ್ನು ಬೃಹತ್ ಪ್ರಮಾಣದಲ್ಲಿ ಕೈಕೊಳ್ಳಲಾಗಿದೆ. ಇಲ್ಲಿ ಹೆಗ್ಗಣ, ಮುಂತಾದ ದಂಶಕ ಪ್ರಾಣಿಗಳನ್ನು ನಾಶಮಾಡುವ ಕಾರ್ಯಕ್ರಮವನ್ನು 10 ಲಕ್ಷ ಎಕರೆ ಭೂ ಪ್ರದೇಶದಲ್ಲಿ ಕೈಕೊಳ್ಳುವ ನಿರೀಕ್ಷೆ ಇದೆ. ಇದುವರೆಗೆ 33 ಲಕ್ಷ ಎಕರೆ ಪ್ರದೇಶದಲ್ಲಿ ಸಸ್ಯಸಂರಕ್ಷಣ ಕಾರ್ಯಕ್ರಮವನ್ನು ಕೈಕೊಳ್ಳಲಾಗಿದೆ. 1968—69 ರಲ್ಲಿ ಈ ಕಾರ್ಯಕ್ರಮವನ್ನು 40 ಲಕ್ಷ ಎಕರೆ ಪ್ರದೇಶಕ್ಕೆ ವಿಸ್ತರಿಸುವ ಉದ್ದೇಶವಿದೆ.

ರಾಜ್ಯದಲ್ಲಿರುವ 87 ಬಿತ್ತನೆ ಬೀಜದ ಕ್ಷೇತ್ರಗಳು ಮೂಲ ಬೀಜಗಳನ್ನು ಉತ್ಪತ್ತಿ ಮಾಡುತ್ತವೆ. 'ಹೆಚ್ಚು ಇಳುವರಿ' ಬೀಜಗಳನ್ನು ಅನ್ಯ ರಾಜ್ಯಗಳಿಗೂ ಸರಬರಾಯಿ ಮಾಡಲಾಗುತ್ತಿದೆ. ವಾಣಿಜ್ಯ ಪೈರುಗಳ ಬೆಳೆಯಲ್ಲಿ ಪ್ರಗತಿ ಕಂಡುಬಂದಿತು. 1966 ರಿಂದ 1968 ರ ಅವಧಿಯಲ್ಲಿ ಹತ್ತಿಯ ಉತ್ಪಾದನೆಯು 5.01 ಲಕ್ಷ ಬೇಲುಗಳಿಂದ 5.38 ಲಕ್ಷ ಬೇಲುಗಳಿಗೂ, ಕಬ್ಬಿನ ಉತ್ಪಾದನೆಯು 6.23 ಲಕ್ಷ ಟನ್ನುಗಳಿಂದ 6.42 ಲಕ್ಷ ಟನ್ನುಗಳಿಗೂ ಎಣ್ಣೆಬೀಜಗಳ ಉತ್ಪಾದನೆಯು 7.70 ಲಕ್ಷ ಟನ್ನುಗಳಿಂದ 8.32 ಲಕ್ಷ ಟನ್ನುಗಳಿಗೂ ಹೆಚ್ಚಿದೆ.

ತೋಟಗಾರಿಕೆ ಇಲಾಖೆಯು ಬೇರೆ ಬೇರೆ ಬಗೆಯ ಹೂ ಹಣ್ಣಿನಗಿಡಗಳ ಅಭಿವೃದ್ಧಿ ಹಾಗೂ ವಿಸ್ತರಣ ಕಾರ್ಯದಲ್ಲಿ ಗಮನಾರ್ಹ ಪ್ರಗತಿ ಸಾಧಿಸಿದೆ. 1966—67 ರಲ್ಲಿ 10 ಲಕ್ಷ ಹಣ್ಣಿನ ಗಿಡಗಳನ್ನು ಒದಗಿಸಲಾಯಿತು. 1967—68 ರಲ್ಲಿ ಡಿಸೆಂಬರ್ 1967 ರ ಅಂತ್ಯದವರೆಗೆ 8 ಲಕ್ಷ ಗಿಡಗಳನ್ನು ಒದಗಿಸಲಾಗಿದೆ. ಪ್ರಸಕ್ತ ವರ್ಷದಲ್ಲಿ ಡಿಸೆಂಬರು 1967 ರ ಅಂತ್ಯದವರೆಗೆ 3 ಲಕ್ಷ ತೆಂಗಿನ ಸಸಿಗಳನ್ನೂ, 2 8 ಲಕ್ಷ ಅಡಿಕೆ ಸಸಿಗಳನ್ನೂ ಒದಗಿಸಲಾಗಿದೆ. ಇದರ ಜತೆಗೆ ಯಾಲಕ್ಕಿ, ಮೆಣಸು, ಗೋಡಂಬಿ (ಗೇರುಬೀಜ) ಇತ್ಯಾದಿಗಳ ಅಭಿವೃದ್ಧಿ ವೇಗವನ್ನೂ ಹೆಚ್ಚಿಸಲಾಗಿದೆ. ಕಂದಮೂಲಾದಿಗಳ ಸುಧಾರಿತ ಬೀಜಗಳನ್ನು ಒದಗಿಸಿ ಸಹಾಯಕ ಬೆಳೆಗಳನ್ನೂ ಕೈಕೊಳ್ಳಲಾಗಿದೆ.

ವ್ಯವಸಾಯಾಭಿವೃದ್ಧಿಯಲ್ಲಿ ಸಂಸ್ಥೆಗಳು ವಹಿಸಿದ ಪಾತ್ರವು ಗಮನಾರ್ಹವಾಗಿದೆ. ಟ್ರಾಕ್ಟರುಗಳು, ಪಂಪ್‌ಸೆಟ್ಟುಗಳು ಇತ್ಯಾದಿಯನ್ನು ಒದಗಿಸುವ ಸಲುವಾಗಿ ವ್ಯವಸಾಯೋದ್ಯಮ ನಿಗಮ ಸ್ಥಾಪಿತವಾಗಿದೆ. ಈ ನಿಗಮವು ಪ್ರಸಕ್ತ ವರ್ಷದಲ್ಲಿ 1 ಕೋಟಿ ರೂಪಾಯಿವರೆಗೆ ಸಾಲಗಳನ್ನು ಮಂಜೂರುಮಾಡಲು ಶಕ್ತವಾಗುವುದು. ವ್ಯವಸಾಯ ಪುನರ್ವಿತ್ತ ನಿಗಮವು ಘಟಪ್ರಭಾ, ಭದ್ರಾ ಮತ್ತು ತುಂಗಭದ್ರಾ ಯೋಜನಾ ಪ್ರದೇಶಗಳಲ್ಲಿ ಅಭಿವೃದ್ಧಿಯ ಸಲುವಾಗಿ ಯೋಜನೆಗಳನ್ನು ಮಂಜೂರುಮಾಡಿರುವುದಲ್ಲದೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೀನುಗಾರಿಕೆಯ ಅಭಿವೃದ್ಧಿಗಾಗಿ 1.25 ಕೋಟಿ ರೂಪಾಯಿ ವೆಚ್ಚದ ಕಾರ್ಯ ಯೋಜನೆಗಳನ್ನೂ ಅನುಮೋದಿಸಿದೆ. ಉತ್ತರ ಕನ್ನಡ ಜಿಲ್ಲೆಯಲ್ಲೂ ಅದೇ ಬಗೆಯ ಯೋಜನೆಗೆ ಈ ನಿಗಮವು ಹಣವೊದಗಿಸುವ ನಿರೀಕ್ಷೆಯಿದೆ. ಅಡಿಕೆ, ತೆಂಗು ಮುಂತಾದ ತೋಟಗಳ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ಈ ನಿಗಮವು ಅನುಮೋದಿಸಿದೆ. ಕೋಲಾರ ಜಿಲ್ಲೆಯಲ್ಲಿ ನೀರಾವರಿ ಬಾವಿಗಳನ್ನು ತೋಡಿಸುವ ಕಾರ್ಯಕ್ರಮಕ್ಕೆ ಪುನರ್ವಿತ್ತ ನಿಗಮವು ಒಪ್ಪಿಗೆ ನೀಡಿದೆ. ಭೂಸಾರ ರಕ್ಷಣೆಯ ಒಂದು ಬೃಹತ್ ಯೋಜನೆಯೂ ಪರಿಶೀಲನೆಯಲ್ಲಿದೆ. ದ್ರಾಕ್ಷಾ ವ್ಯವಸಾಯದ ಒಂದು ಯೋಜನೆಗೂ ಈ ನಿಗಮವು ಹಣವೊದಗಿಸಬೇಕೆಂಬ ಉದ್ದೇಶವಿದೆ. ಇದುವರೆಗೆ ಈ ನಿಗಮವು 15.10 ಕೋಟಿ ರೂಪಾಯಿ ವೆಚ್ಚದ ಕಾರ್ಯ ಯೋಜನೆಯನ್ನು ಮಂಜೂರುಮಾಡಿದೆ. ಇದಲ್ಲದೆ, 15.80 ಕೋಟಿ ರೂಪಾಯಿ ವೆಚ್ಚದ ಬೇರೆ ಕೆಲವಾರು ಯೋಜನೆಗಳು ಸಿದ್ಧವಾಗುತ್ತಿವೆ. ವ್ಯವಸಾಯಾಭಿವೃದ್ಧಿಗೆ ಸಹಕಾರಿ ಬ್ಯಾಂಕುಗಳ ಹಾಗೂ ಭೂ ಅಭಿವೃದ್ಧಿ ಬ್ಯಾಂಕುಗಳ ಸಂಪತ್ತಿ ಮೂಲಗಳನ್ನೂ ಬೃಹತ್ ಪ್ರಮಾಣದಲ್ಲಿ ಬಳಸಲಾಗುತ್ತಿದೆ. ವ್ಯವಸಾಯ ಕಾರ್ಯಕಲಾಪಗಳಿಗೆ ಹಣವೊದಗಿಸಲು ಕಮ್ಮರ್ಶಿಯಲ್ ಬ್ಯಾಂಕ್‌ಗಳೂ ಮುಂದೆ ಬಂದಿರುವುದು ನಿಜಕ್ಕೂ ಶುಭಸೂಚಕವಾಗಿದೆ.

ನಾನಾ ಸಂಶೋಧನ ಕೇಂದ್ರಗಳಲ್ಲಿ ದೊರೆಯುವ ಸಂಶೋಧನ ಸೌಕರ್ಯಗಳನ್ನು ವೃದ್ಧಿಪಡಿಸಲು ಕೃಷಿ ವಿಶ್ವವಿದ್ಯಾನಿಲಯವು ಕ್ರಮಕೈಕೊಂಡಿದೆ. ಈ ವಿಶ್ವವಿದ್ಯಾನಿಲಯವು ಭಾರತ ಕೃಷಿ ಸಂಶೋಧನ ಪರಿಷತ್ತಿನ ನೆರವು ಪಡೆದುಕೊಂಡು, ಬೇರೆ ಬೇರೆ ಪ್ರದೇಶಗಳಲ್ಲಿ ಕೃಷಿ ಸಂಬಂಧವಾದ ಸಕಲ ಸಮಸ್ಯೆಗಳಲ್ಲೂ ಸಂಶೋಧನಾಕಾರ್ಯಕ್ಕೆ ತೀವ್ರ ಗಮನ ನೀಡಲು ಉದ್ದೇಶಿಸಿದೆ. ಕೃಷಿ ರಂಗದಲ್ಲಿ ನಡೆದ ಅತ್ಯಾಧುನಿಕ ಸುಧಾರಣೆಗಳನ್ನು ರೈತವರ್ಗಕ್ಕೆ ತಿಳಿಸುವ ನಿಮಿತ್ತವಾಗಿ ಹಲವಾರು ಶಿಕ್ಷಣ ಶಿಬಿರಗಳನ್ನು ನಡೆಸಲಾಗಿದೆ. 1966—67 ರಲ್ಲಿ 1 ಲಕ್ಷ ರೈತರೂ, 2,000 ಸ್ತ್ರೀಯರೂ ಈ ಶಿಬಿರಗಳಲ್ಲಿ ತರಬೇತಿ ಪಡೆದಿದ್ದರು. 1967—68 ರಲ್ಲಿ 1.07 ಲಕ್ಷ ಜನ ಶಿಕ್ಷಣ ಪಡೆದಿದ್ದಾರೆ.

ವ್ಯವಸಾಯಾಭಿವೃದ್ಧಿಗೆ ರಾಜ್ಯದ ಸಂಚಿತ ನಿಧಿಯಿಂದ ಮಾತ್ರವಲ್ಲದೆ, ಅನ್ಯಮೂಲಗಳಿಂದಲೂ ಬಹುನಾಟ್ಟಿಗೆ ಹಣ ಬರುತ್ತಿದೆಯೆಂಬ ಅಂಶವು ಮಾನ್ಯ ಸದಸ್ಯರ ಗಮನಕ್ಕೆ ಬಂದಿರುವುದಾಗಿ ನಂಬಿದ್ದೇನೆ. ಅನಾವೃಷ್ಟಿಯಿಂದಲೂ ಇತರ ಕಾರಣಗಳಿಂದಲೂ ಹಾನಿಗೀಡಾದ ಕೃಷಿರಂಗವನ್ನು ಅಭಿ

ವೃದ್ಧಿಪಡಿಸಲು ಇವೆಲ್ಲ ವ್ಯವಸ್ಥೆಗಳಿಂದ ಅನುಕೂಲವಾಗಿವೆ. ಈ ರಂಗದ ಆದಾಯ ಹೆಚ್ಚದೆ ಹೋದರೆ, ರಾಜ್ಯದ ಆರ್ಥಿಕ ಸ್ಥಿತಿಯೂ ಸುಧಾರಿಸುವಂತಿಲ್ಲ. ಇದುವರೆಗೆ ವಿವರಿಸಿದ ವ್ಯವಸ್ಥೆಗಳಿಂದ ಕೃಷಿ ಮತ್ತು ಉದ್ಯಮರಂಗಗಳಲ್ಲಿ ಪರಿಣಾಮಕಾರಕ ಸಾಧನೆಗಳು ಕೈಗೂಡಬಲ್ಲವೆಂದು ಹಾರೈಸುತ್ತೇನೆ. 1969-70 ರ ಅಂತ್ಯದೊಳಗಾಗಿ ಆಹಾರೋತ್ಪಾದನೆಯಲ್ಲಿ ಸ್ವಯಂಪೂರ್ಣತೆಯನ್ನು ಸಾಧಿಸಲಾಗುವುದೆಂದು ನಂಬಿದ್ದೇನೆ.

ಈ ಸಂದರ್ಭದಲ್ಲಿ ನಾವು ಗಮನಿಸಬೇಕಾದ ಇನ್ನೊಂದು ಅಂಶವಿದೆ. ವ್ಯವಸಾಯಾದಾಯವು ಹೆಚ್ಚಿ, ರಾಷ್ಟ್ರಾದಾಯದ ಅಧಿಕಾಂಶವು ಅದರಿಂದಲೇ ಬರುವುದೇನೋ ನಿಜ. ಆದರೆ ತೆರಿಗೆಯಿಂದ ಬರುವ ಆದಾಯ ಪ್ರಮಾಣವನ್ನು ಒಟ್ಟು ಆದಾಯದೊಡನೆ ಹೋಲಿಸಿ ನೋಡಿದಾಗ, ಭೂಮಿಯ ಮೇಲಣ ಹಾಗೂ ವ್ಯವಸಾಯಾದಾಯದ ಮೇಲಣ ತೆರಿಗೆಯಿಂದ ಬರುವ ಆದಾಯವು ತಗ್ಗುತ್ತಾ, ಒಟ್ಟು ವ್ಯವಸಾಯಾದಾಯದ ಸೇಕಡ 2 ಕ್ಕಿಂತಲೂ ಕಡಿಮೆಯಾಗಿದೆ; ತೆರಿಗೆಯ ಆದಾಯವು ರಾಷ್ಟ್ರಾದಾಯದ ಸುಮಾರು ಸೇಕಡ 15 ರಷ್ಟಿದೆ. ಗ್ರಾಮಾಂತರ ವಲಯದಲ್ಲಿ ಬಹು ಪ್ರಮಾಣದಲ್ಲಿ ಹಣ ವಿನಿಯೋಗವಾಗುತ್ತಿರುವ ಕಾರಣ, ಈ ವ್ಯತ್ಯಾಸವು ಇನ್ನಷ್ಟು ಹೆಚ್ಚುತ್ತಾ ಹೋಗಿ ಅಸಮತೆಗೆ ಕಾರಣವಾಗುವುದು. ಆದುದರಿಂದ ಸೂಕ್ತವಾದ ತೆರಿಗೆ ಪದ್ಧತಿಯನ್ನು ಕೈಕೊಂಡು ಸಣ್ಣ ಉಳಿತಾಯಗಳ ಚಳುವಳಿಯನ್ನು ತೀವ್ರಗೊಳಿಸಿ ಗ್ರಾಮಾಂತರ ಪ್ರದೇಶಗಳಿಂದ ಸಂಪತ್ತಿಮೂಲಗಳನ್ನು ಒದಗಿಸಿಕೊಳ್ಳುವ ವಿಧಾನವನ್ನು ಯೋಚಿಸಲು ಇದೇ ಸೂಕ್ತ ಕಾಲ. ಸಂಪತ್ತಿ ಮೂಲವನ್ನು ಬಲಪಡಿಸಿಕೊಳ್ಳುವುದಕ್ಕೆ ಮಾತ್ರವಲ್ಲದೆ ಹಣದುಬ್ಬರವನ್ನು ತಡೆಗಟ್ಟುವುದಕೂ ಈ ಕಾರ್ಯಕ್ರಮವು ಅತ್ಯವಶ್ಯವಾಗಿದೆ.

ಇಲಾಖಾ ಕಾರ್ಯಕಲಾಪಗಳನ್ನು ವಿವರಿಸುವ ಕೈಪಿಡಿಯು ವೈದ್ಯಕೀಯ, ಸಾರ್ವಜನಿಕ ಆರೋಗ್ಯ, ಮುಂತಾದ ನಾನಾ ಇಲಾಖೆಗಳ ಕಾರ್ಯಕಲಾಪಗಳನ್ನೂ ಸಾಧನೆಗಳನ್ನೂ ತಿಳಿಸಿರುವ ಕಾರಣ, ಅವುಗಳನ್ನು ನಾನಿಲ್ಲಿ ವಿವರವಾಗಿ ಪ್ರಸ್ತಾಪಿಸುವುದಿಲ್ಲ. ಹಲವಾರು ಪಟ್ಟಣಗಳಿಗೆ ರಕ್ಷಿತ ನೀರು ಸರಬರಾಯನ್ನು ಪೂರೈಸುವುದಲ್ಲದೆ, ಗ್ರಾಮಗಳಲ್ಲೂ ಕುಡಿಯುವ ನೀರಿನ ಬಾವಿಗಳನ್ನು ಒದಗಿಸಲು ಸರ್ಕಾರದವರು ಧಾರಾಳವಾಗಿ ಹಣ ಒದಗಿಸುತ್ತಿದ್ದಾರೆ. ಇದಕ್ಕಾಗಿ ಪ್ರಸಕ್ತ ವರ್ಷ 67 ಲಕ್ಷ ರೂಪಾಯಿ ಒದಗಿಸಿದೆ. 3, 500 ಬಾವಿಗಳು ಇನ್ನೂ ಅಪೂರ್ಣ ಸ್ಥಿತಿಯಲ್ಲೇ ಉಳಿದಿವೆ; 2, 700 ಗ್ರಾಮಗಳಿಗೆ ಕುಡಿಯುವ ನೀರಿನ ಬಾವಿಗಳೇ ಇಲ್ಲ. ವರ್ಷಂಪ್ರತಿ ಒದಗಿಸುವ ಹಣ ವ್ಯವಸ್ಥೆಯಿಂದ ಕ್ಷಿಪ್ರದಲ್ಲೇ ಪ್ರತಿಯೊಂದು ಗ್ರಾಮಕ್ಕೂ ಕನಿಷ್ಠ ಪಕ್ಷ ಒಂದಾದರೂ ಕುಡಿಯುವ ನೀರಿನ ಬಾವಿಯನ್ನೊದಗಿಸಲು ಸಾಧ್ಯವಾದೀತು.

ಸರ್ಕಾರದ ಕಾರ್ಯನೀತಿಗೆ ಅನುಗುಣವಾಗಿ, ಆಹಾರಧಾನ್ಯಗಳ ಎತ್ತುವಳಿ ಮತ್ತು ಹಂಚಿಕೆಯ ಕೆಲಸದಲ್ಲಿ ಸಹಕಾರಿರಂಗವೂ ಭಾಗಿಯಾಗಿದೆ. ಎತ್ತುವಳಿಯಾದ ಹಾಗೂ ಆಯಾತವಾದ ಆಹಾರ ಧಾನ್ಯಗಳ ನೀಡಿಕೆ ಬೆಲೆಗಳೊಳಗೆ ಸಮತೆಯಿರುವಂತೆ ನೋಡಿಕೊಂಡು "ಲಾಭವೂ ಇಲ್ಲ ನಷ್ಟವೂ ಇಲ್ಲ" ಎಂಬ ತತ್ವಾನುಸಾರವಾಗಿ ಬೆಲೆಗಳನ್ನ ಗೊತ್ತುಮಾಡಲಾಗಿದೆ. ಆಹಾರ ಧಾನ್ಯಗಳ ಕಳ್ಳಸಾಗಣೆಯನ್ನು ತಡೆಗಟ್ಟುವ ಸಲುವಾಗಿ, ರಾಜ್ಯದ ಗಡಿಗಳಲ್ಲಿ ತಪಾಸಣಾಠಾಣಗಳನ್ನು ಬಲಪಡಿಸಲಾಗಿದೆ.

ವಿದ್ಯಾಭಿವೃದ್ಧಿಗಾಗಿ ವಹಿಸುವ ವ್ಯಯಪ್ರಮಾಣವು 1968-69ರಲ್ಲಿ 36·8 ಕೋಟಿ ರೂಪಾಯಿಗೆ ಮುಟ್ಟಿದೆ; ಎಂದರೆ 1965-66ರಲ್ಲಿ ತಗಲಿದ ವೆಚ್ಚಕಿಂತ ಸೇಕಡಾ 47ರಷ್ಟು ಹೆಚ್ಚಿದೆ. ರಾಜ್ಯದ ಉದ್ಯಮ ಸಂಸ್ಥೆಗಳ ಕಾರ್ಯನಿರ್ವಹಣ ವ್ಯಯವನ್ನು ಕಳೆದ ಮೇಲೆ, ರಾಜ್ಯದ ನಿವ್ವಳ ರಾಜಸ್ವದ ಸೇಕಡಾ 20ರಷ್ಟು ಹಣ ಈಗ ವಿದ್ಯಾಭಿವೃದ್ಧಿಗೇ ವೆಚ್ಚವಾಗುತ್ತಿದೆ. ಇದು ಮಾರಾಟ ತೆರಿಗೆಯಿಂದ ಬರುವ 23. 03 ಕೋಟಿ ರೂಪಾಯಿಗಳ ಆದಾಯವನ್ನು ಮೀರುತ್ತದೆ. 1965-66ರ ಅಂತ್ಯದಲ್ಲಿ 31,112 ಪ್ರಾಥಮಿಕ ಶಾಲೆಗಳಿದ್ದುವು. ಇವುಗಳಲ್ಲಿದ್ದ ವಿದ್ಯಾರ್ಥಿಗಳ ಸಂಖ್ಯೆ 36.10 ಲಕ್ಷ; ಅಧ್ಯಾಪಕರ ಸಂಖ್ಯೆ 90,181. 1966 ಮತ್ತು 1968-ಇವೆರಡು ವರ್ಷಗಳಲ್ಲಿ, ಇದುವರೆಗೆ ಸಾಧಿಸಿದ ವಿದ್ಯಾಭಿವೃದ್ಧಿಯ ಪ್ರಮಾಣವನ್ನು ಉಳಿಸಿಕೊಂಡು ಬರುವ ಕೆಲಸಕ್ಕೇ ಪ್ರಾಧಾನ್ಯ ನೀಡಲಾಗಿದ್ದಿತು. 1966-67ರಲ್ಲಿ 1.57 ಲಕ್ಷ ಮಕ್ಕಳೂ ಮತ್ತು 1967-68ರಲ್ಲಿ 2.75ಲಕ್ಷ ಮಕ್ಕಳೂ ಹೊಸದಾಗಿ ಶಾಲೆಗೆ ಸೇರಿದ್ದರು. 3 ರಿಂದ 5 ವರ್ಷದ ಮಕ್ಕಳಿಗೆ ಶಾಲಾ ಪ್ರಾರಂಭಕ್ಕೆ ಮುಂಚೆ ಆಹಾರ ನೀಡುವ ಕಾರ್ಯಕ್ರಮವು ಪ್ರಸಕ್ತ ವರ್ಷದಲ್ಲಿ ಪ್ರಾರಂಭವಾಯಿತು. ಇದರಿಂದ 4 ಲಕ್ಷ ಮಕ್ಕಳಿಗೆ ಆಹಾರ ದೊರೆಯುವಂತಾಯಿತು.

1965-66ರಲ್ಲಿ 1491 ಸೆಕೆಂಡರಿ ಶಾಲೆಗಳಿದ್ದುವು. ಅವುಗಳಲ್ಲಿದ್ದ ವಿದ್ಯಾರ್ಥಿಗಳ ಸಂಖ್ಯೆ 4·53ಲಕ್ಷ, ಅಧ್ಯಾಪಕರ ಸಂಖ್ಯೆ 17,252. 1966-67ರಲ್ಲಿ ಉಚಿತ ಸೆಕೆಂಡರಿ ವಿದ್ಯಾಭ್ಯಾಸ ಕಾರ್ಯಕ್ರಮ ಪ್ರಾರಂಭವಾಯಿತು. ಪ್ರಸಕ್ತ ವರ್ಷ ಪ್ರಾರಂಭವಾದ ಯೋಜನೆಯಂತೆ, ಸಹಾಯ ಪೋಷಿತ ಶಾಲೆಗಳ ಅಧ್ಯಾಪಕರು ಈಗ ನೇರವಾಗಿ ಸಂಬಳ ಪಡೆಯುತ್ತಿದ್ದಾರೆ.

ತಾಂತ್ರಿಕ ವಿದ್ಯಾರಂಗದ ಪ್ರಗತಿ ಗಮನಾರ್ಹವಾಗಿದೆ. ಈ ರಾಜ್ಯದಲ್ಲಿ 16 ಇಂಜಿನಿಯರಿಂಗ್ ಕಾಲೇಜುಗಳಿವೆ; 29 ಪಾಲಿಟೆಕ್ನಿಕ್ ಸಂಸ್ಥೆಗಳಿವೆ. ಡಿಪ್ಲೋಮಾ ಧಾರಕರ ನಿರುದ್ಯೋಗ ನಿವಾರಣಾರ್ಥವಾಗಿ ವಿವಿಧೀಕೃತ ಪಾಠವರ್ಗಗಳನ್ನು ಪ್ರಾರಂಭಿಸುವ ವಿಚಾರವು ಪರ್ಯಾಲೋಚನೆಯಲ್ಲಿದೆ. ಸಚಿವಾಲಯ ಕಾರ್ಯಪದ್ಧತಿಯಲ್ಲಿ ಶಿಕ್ಷಣ ಕೊಡುವ ಸಂಸ್ಥೆಯೊಂದನ್ನು ಮತ್ತು ಪಾಕಕಲಾ ಶಿಕ್ಷಣ ಸಂಸ್ಥೆಯೊಂದನ್ನು ಪ್ರಾರಂಭಿಸುವ ಉದ್ದೇಶವಿದೆ. ವಿಶ್ವವಿದ್ಯಾನಿಲಯಗಳು ಅಭಿವೃದ್ಧಿ ನಿಮಿತ್ತವಾದ ಅನುದಾನ (ಗ್ರಾಂಟು) ಗಳನ್ನು ಮಾತ್ರವಲ್ಲದೆ, ಹೆಚ್ಚಿಸಿದ ಏಕಗಂಟಿನ ಅನುದಾನಗಳನ್ನೂ ಪಡೆಯುತ್ತಿವೆ. ನಾಲ್ಕೂ ವಿಶ್ವವಿದ್ಯಾನಿಲಯಗಳಿಗೆ ಕೊಡುವ ಒಟ್ಟು ಪೋಷಣಾನುದಾನವು ಈಗ 1.72 ಕೋಟಿ ರೂಪಾಯಿ. ಇತರ ರಾಜ್ಯಗಳೊಡನೆ ಹೋಲಿಸಿದರೆ, ಮೈಸೂರಿನಲ್ಲಿ ವಿದ್ಯಾಭ್ಯಾಸದ ಸಲುವಾದ ನಿಮಿತ್ತ ತಗಲುವ ವೆಚ್ಚ ಕಡಿಮೆ. ಉಪಾಧ್ಯಾಯರುಗಳ ಸಂಬಳಗಳನ್ನು ಅನೇಕ ಸಲ ಹೆಚ್ಚಿಸಿದ್ದಾಗಿದೆ. ಕಾಲೇಜುಗಳಲ್ಲಿ ಯು. ಜಿ. ಸಿ. ವೇತನ ಶ್ರೇಣಿಗಳನ್ನು ಕಾರ್ಯಗತಗೊಳಿಸಲು ಆಯವ್ಯಯದಲ್ಲಿ ಏರ್ಪಾಡು ಮಾಡಲಾಗಿದೆ. ವಿಶ್ವವಿದ್ಯಾನಿಲಯಗಳ ಕಾರ್ಯಕ್ಷೇತ್ರವು ಹೆಚ್ಚಿ, ಅವು ಸರ್ಕಾರದ ನೆರವನ್ನು ಹೆಚ್ಚು ಹೆಚ್ಚಾಗಿ ಅವಲಂಬಿಸಿದಂತೆಲ್ಲಾ, ಈ ಪೋಷಣಾನುದಾನವೂ ಹೆಚ್ಚಬೇಕಾಗುವುದು. ಹೀಗಾಗಿ ಉಚ್ಚ ವಿದ್ಯಾಭ್ಯಾಸ ಸಂಬಂಧವಾಗಿ ಹೆಚ್ಚುತ್ತಿರುವ ವೆಚ್ಚವನ್ನು ವಹಿಸಿಕೊಳ್ಳಲು ಅನ್ಯಮೂಲಗಳನ್ನು ಹುಡುಕಬೇಕಾಗಿದೆ.

ರಾಜ್ಯದ 14 ಉದ್ಯಮ ಶಿಕ್ಷಣ ಸಂಸ್ಥೆಗಳಲ್ಲಿ, 1967–68 ರಲ್ಲಿ 992 ಹೆಚ್ಚಿನ ವಿದ್ಯಾರ್ಥಿಗಳಿಗೆ ಅವಕಾಶ ಒದಗಿಸಲಾಗಿದ್ದಿತು; ಪ್ರಸಕ್ತ ವರ್ಷದಲ್ಲಿ 792 ಹೆಚ್ಚು ವಿದ್ಯಾರ್ಥಿಗಳಿಗೆ ಸ್ಥಾನ ಒದಗಿಸಲಾಗಿದ್ದಿತು. ಈಗ ಶಿಕ್ಷಣ ಪಡೆಯುತ್ತಿರುವವರ ಒಟ್ಟು ಸಂಖ್ಯೆ 5.328. ಈ ನಾನಾ ಸಂಸ್ಥೆಗಳಲ್ಲಿ 1,682 ಜನ ಪೂರ್ಣಾವಧಿ ಅಭ್ಯಾಸಿಗಳಾಗಿಯೂ, 122 ಜನ ಅಲ್ಪಾವಧಿ ಅಭ್ಯಾಸಿಗಳಾಗಿಯೂ ತರಬೇತಿ ಪಡೆಯುತ್ತಿದ್ದಾರೆ. ಸಂಜೆ ತರಗತಿಯ ಯೋಜನೆಯೂ ಪ್ರಗತಿಪರವಾಗಿ ಸಾಗಿದೆ.

ಶಿವಮೊಗ್ಗ, ಬೆಂಗಳೂರು ಮತ್ತು ಕೋಲಾರ ಸ್ಥಳಗಳಲ್ಲಿ ರಾಷ್ಟ್ರೀಕರಣ ಯೋಜನೆಯ ನಿಮಿತ್ತವಾಗಿ ನಡೆಯತಕ್ಕ ಕಾರ್ಯಗಳಿಗಾಗಿ ರಸ್ತೆಸಾರಿಗೆ ನಿಗಮಕ್ಕೆ ಎರಡು ವರ್ಷದ ವೆಚ್ಚಕ್ಕೆಂದು 2 ಕೋಟಿ ರೂಪಾಯಿ ಒದಗಿಸಲಾಗಿದೆ. ಸರಕಾರದವರಲ್ಲಿ ನಿಕ್ಷಿಪ್ತವಾದ ಸಂಚಿತ ಇಳಿವರಿ ನಿಧಿಯಿಂದ ಈ ವ್ಯಯವನ್ನು ವಹಿಸಿಕೊಳ್ಳಲಾಗುವುದು.

ಬೇರೆ ಬೇರೆ ಹಿಂದುಳಿದ ವರ್ಗಗಳ ಸಾಮಾಜಿಕ ಸಂಘಟನೆಯನ್ನು ಸಾಧಿಸುವ ದಿಶೆಯಲ್ಲಿ ಗಮನಾರ್ಹವಾದ ಹೆಜ್ಜೆ ಇಡಲಾಗುತ್ತಿದೆ. ಸಮಾಜ ಕಲ್ಯಾಣ ಇಲಾಖೆಯ ಬೇರೆ ಬೇರೆ ಜಾತೀಯ ಹಾಸ್ಟೆಲುಗಳು ಜಾತ್ಯತೀತ ಹಾಸ್ಟೆಲುಗಳಾಗಿ ಪರಿವರ್ತಿತವಾಗಿವೆ. ಈ ವ್ಯವಸ್ಥೆಯಿಂದ ಜಾತೀಯ ದೃಷ್ಟಿಯನ್ನು ಕ್ರಮೇಣ ತ್ಯಜಿಸುವ ಪೀಳಿಗೆ ಬೆಳೆಯಲು ಅನುಕೂಲವಾಗುವುದೆಂಬ ಹಾರೈಕೆಯಿದೆ.

ಹಿಂದುಳಿದ ವರ್ಗಗಳ ಕಲ್ಯಾಣಾರ್ಥವಾದ ಆರ್ಥಿಕ ಕಾರ್ಯಕ್ರಮಗಳಲ್ಲಿ ಸಹಕಾರಿ ತತ್ವಕ್ಕೆ ಉತ್ತೇಜನ ಕೊಡಲಾಗಿದೆ. ಅನುಸೂಚಿತ ಜಾತಿಗಳಲ್ಲಿ ಭೂಮಿ ಇಲ್ಲದ ಗ್ರಾಮಾಂತರ ಕಾರ್ಮಿಕರಿಗಾಗಿ ಭೂ ಸಂಪಾದನೆ ಮಾಡುವ ಯೋಜನೆಯನ್ನೂ ಕಸಗುಡಿಸುವವರಿಗೆ ಹಾಗೂ ಜಾಡಮಾಲಿಗಳಿಗೆ ಮನೆ ಕಟ್ಟಿಕೊಡುವ ಯೋಜನೆಯನ್ನೂ ಸರ್ಕಾರದವರು ಮುಂದುವರಿಸಿದ್ದಾರೆ. ಅನುಸೂಚಿತ ಜಾತಿಗಳ ಸಹಕಾರಿ ಗೃಹ ನಿರ್ಮಾಣ ನಿಗಮಕ್ಕೆ ವಹಿಸಿಕೊಟ್ಟ ಹಣದ ಬಹುಭಾಗವನ್ನು ನಿಗಮವು ಈಗಾಗಲೇ ಹಂಚಿದೆ. ಅಂಗವಿಕಲರನ್ನು ಯಥೋಚಿತವಾಗಿ ಪುನಃ ಸಜ್ಜೀಕರಿಸಲು ಸರ್ಟಿಫೈಡ್ ಸ್ಕೂಲುಗಳಲ್ಲಿ ಮುದ್ರಣ, ಸೀಮೆಸುಣ್ಣದ ತಯಾರಿಕೆ, ಹೈನ ತಯಾರಿಕೆ, ಕೋಳಿ ಸಾಕಣೆ ಮುಂತಾದ ಹಲವಾರು ತರಬೇತಿ ಕಾರ್ಯಕ್ರಮಗಳು ಪ್ರಾರಂಭವಾಗಿವೆ.

ಗೃಹರಕ್ಷಕ ದಳದಲ್ಲಿ ಪ್ರಸಕ್ತ ವರ್ಷದ ಕೊನೆಗೆ 12,500 ಜನ ಹೋಮ್‌ಗಾರ್ಡ್‌ಗಳಿರಬೇಕೆಂದು ಗೊತ್ತುಪಡಿಸಲಾಗಿದೆ. ಈಗಾಗಲೇ ಈ ದಳಕ್ಕೆ 11,979 ಜನ ಸೇರಿದ್ದಾರೆ. 8,612 ಜನ ಹೋಮ್‌ಗಾರ್ಡುಗಳಿಗೆ ಈಗಾಗಲೇ ಮೂಲ ಮತ್ತು ಉಚ್ಚಶಿಕ್ಷಣವನ್ನು ಕೊಡಲಾಗಿದೆ. ತಾಲ್ಲೂಕು ಕೇಂದ್ರಗಳಲ್ಲೂ ಹೊಸ ಘಟಕಗಳ ಸ್ಥಾಪನೆಯಾಗುತ್ತಿದೆ. ಪೌರ ರಕ್ಷಣ ವ್ಯವಸ್ಥೆಯ ಅಂಗವಾಗಿ ಬೆಂಗಳೂರು ನಗರದಲ್ಲಿ ಅಗ್ನಿಶಾಮಕ ನೀರು ನಲ್ಲಿಗಳನ್ನು ಸ್ಥಾಪಿಸಲಾಗುತ್ತಿದೆ. 1968–69 ರಲ್ಲಿ, ಸಂಪರ್ಕ ವ್ಯವಸ್ಥೆಯನ್ನು ಪೂರ್ಣಗೊಳಿಸುವ ಸಲುವಾಗಿ ಮೂರು ಉಪ ನಿಯಂತ್ರಣ ಕೇಂದ್ರಗಳನ್ನು ಸ್ಥಾಪಿಸುವ ಉದ್ದೇಶವಿದೆ. ಅಗ್ನಿಶಾಮಕ ವ್ಯವಸ್ಥೆಯನ್ನೂ ವಿಸ್ತರಿಸಲಾಗುತ್ತಿದೆ. ಈಗ ರಾಜ್ಯದಲ್ಲಿ ಹನ್ನೊಂದು ಅಗ್ನಿಶಾಮಕ ನಿಲ್ದಾಣಗಳಿವೆ. ಬೆಂಗಳೂರು, ರಾಯಚೂರು ಮತ್ತು ಮೈಸೂರಿನಲ್ಲಿರುವ ಅಗ್ನಿಶಾಮಕ ನಿಲ್ದಾಣಗಳಿಗೆ ಸಿಬ್ಬಂದಿವರ್ಗವನ್ನೂ ಸಜ್ಜು ಸಲಕರಣೆಗಳನ್ನೂ ಒದಗಿಸಲಾಗುತ್ತಿದೆ. ಸ್ಥಾಪಿಸಬೇಕೆಂದಿದ್ದ ಮೂರು ಅಗ್ನಿಶಾಮಕ ನಿಲ್ದಾಣಗಳ ಪೈಕಿ ಒಂದು ನಿಲ್ದಾಣವು ಬೆಂಗಳೂರು ನಗರದಲ್ಲಿ ಕಳೆದ ವರ್ಷ ಕಾರ್ಯ ಪ್ರಾರಂಭ

ಮಾಡಿ; ಒಂದು ನಿಲ್ದಾಣವು ಕಲ್ಬುರ್ಗಿಯಲ್ಲಿ ಸ್ಥಾಪಿತವಾಯಿತು. ಬಳ್ಳಾರಿಯಲ್ಲೂ, ದಾವಣಗೆರೆಯಲ್ಲೂ ಅಗ್ನಿಶಾಮಕದಳದ ನಿಲ್ದಾಣದ ನಿರ್ಮಾಣ ಕಾರ್ಯವು ಮುಂದುವರಿಯುತ್ತಿದೆ.

ಇತ್ತೀಚೆಗೆ ದೇಶದ ಆರ್ಥಿಕ ಸ್ಥಿತಿಯ ಮೇಲೆ ದುಷ್ಪರಿಣಾಮವುಂಟುಮಾಡಿದ ಸನ್ನಿವೇಶಗಳನ್ನು ಈಗಾಗಲೇ ಹೇಳಿದ್ದೇನಷ್ಟೆ. ಎಡಬಿಡದೆ ಪ್ರಾಪ್ತವಾದ ಅನಾವೃಷ್ಟಿಯೂ ರೂಪಾಯಿಯ ಅಪಮೌಲ್ಯನವೂ ಮತ್ತು ಹಿಂಜರಿತವೂ ಅರ್ಥ ವ್ಯವಸ್ಥೆಯ ಅನೇಕ ವಲಯಗಳಿಗೆ ತೊಂದರೆ ಉಂಟುಮಾಡಿದವು. ಇದು ರಾಜ್ಯದ ಆದಾಯದಲ್ಲೂ ರಾಷ್ಟ್ರೀಯ ಆದಾಯದಲ್ಲೂ ಪ್ರತಿಬಿಂಬಿತವಾಗಿತ್ತು. ಇದರಿಂದ ನಾಲ್ಕನೆಯ ಪಾಂಚವಾರ್ಷಿಕ ಯೋಜನೆಯ ಪ್ರಾರೂಪವನ್ನು ಪುನಃ ಪರಿಶೀಲಿಸಬೇಕಾಯಿತು. ನಾಲ್ಕನೆಯ ಪಾಂಚವಾರ್ಷಿಕ ಯೋಜನೆಯನ್ನು ಪ್ರಾರಂಭಿಸುವ ಮುನ್ನ 1966-67 ರಿಂದ 1968-69ರ ವರೆಗಿನ ಮೂರು ವರ್ಷಗಳನ್ನು ವಾರ್ಷಿಕ ಯೋಜನಾ ವರ್ಷಗಳಾಗಿ ಪರಿಗಣಿಸಬೇಕೆಂದು ಯೋಜನಾ—ಆಯೋಗವು ಭಾವಿಸಿತು.

1967-68 ರ ಯೋಜನಾ ಕಾರ್ಯಕ್ರಮಕ್ಕೆ 60·25 ಕೋಟಿ ರೂಪಾಯಿ ವೆಚ್ಚವಾಗತಕ್ಕದ್ದೆಂದೂ, ಅದಕ್ಕೆ ಕೇಂದ್ರ ಸರಕಾರದಿಂದ 36.00 ಕೋಟಿ ರೂಪಾಯಿ ನೆರವು ಪಡೆಯತಕ್ಕದ್ದೆಂದೂ ರಾಜ್ಯವು 24·25 ಕೋಟಿ ರೂಪಾಯಿಯನ್ನು ಒದಗಿಸಿಕೊಳ್ಳಬೇಕೆಂದೂ ನಿರ್ಧಾರವಾದುದು ಮಾನ್ಯ ಸಭೆಗೆ ತಿಳಿದೇ ಇದೆ. ಯೋಜನಾ—ಆಯೋಗದೊಡನೆ ಸಮಾಲೋಚನೆ ನಡೆಸಿ ಅಣಿಗೊಳಿಸಿದ ಆರ್ಥಿಕ ಮೂಲಗಳನ್ನು ಮುಂದೆ ಹೇಳಿದೆ :—

		(ಕೋಟಿ ರೂಪಾಯಿ)
ಪ್ರಸಕ್ತ ವರಮಾನ ಶಿಲ್ಕು	...	3·6
ಹೆಚ್ಚಿಗೆ ವಿಧಿಸಿದ ತೆರಿಗೆ	...	9·5
ಮೈಸೂರು ರಾಜ್ಯದ ವಿದ್ಯುಚ್ಛಕ್ತಿ ಮಂಡಲಿಯ ಸಹಿತವಾಗಿ ಸಾರ್ವಜನಿಕರಿಂದ ಪಡೆದ ಸಾಲಗಳು	...	5·9
ಸಣ್ಣ ಉಳಿತಾಯ	...	2·5
ಅಸಂಚಿತ ಋಣ	...	1·5
ವಿವಿಧ ಬಗೆಯ ಬಂಡವಾಳದ ಹಣ	...	—6·7
ಸರ್ಕಾರಿ ಉದ್ಯಮ ಸಂಸ್ಥೆಗಳಿಂದ ಬಂದ ವಂತಿಗೆ	...	5·5
		21·8

		(ಕೋಟಿ ರೂಪಾಯಿ)
ವಜಾ— ತದರ್ಥ ಋಣದ ಮರು ಸಂದಾಯ	...	1·2
ವರ್ಷದ ಪ್ರಾರಂಭದಲ್ಲಿ ಬಾಕಿ ಇದ್ದ ಓವರ್ ಡ್ರಾಫ್ಟ್ ಹಣದ ತೀರಿಕೆ		11·4
		9·2

ಹೀಗೆ 60.25 ಕೋಟಿ ರೂಪಾಯಿ ವೆಚ್ಚದ ಯೋಜನೆಯನ್ನು ಕಾರ್ಯರೂಪಕ್ಕೆ ತರಲು 15 ಕೋಟಿ ರೂಪಾಯಿ ಕಡಿಮೆ ಬಿದ್ದಿತು. ಈಚೆಗೆ ಭಾರತ ಸರ್ಕಾರದವರು 9.9 ಕೋಟಿ ರೂಪಾಯಿ ಹಣವನ್ನು ತದರ್ಥ ಋಣವನ್ನಾಗಿ ಮಂಜೂರುಮಾಡಿದ್ದಾರೆ. ಇದರಲ್ಲಿ 3.05 ಕೋಟಿ ರೂಪಾಯಿ ಹಣವು ಪ್ರಸಕ್ತ ವರ್ಷದಲ್ಲಿ ಮರುಸಂದಾಯವಾಗಬೇಕು. ಈ ತದರ್ಥ ಋಣದಿಂದ ನಮ್ಮ ಆರ್ಥಿಕ ಮೂಲವು 6.9 ಕೋಟಿ ರೂಪಾಯಿಯಷ್ಟು ಹೆಚ್ಚಿತು. ಹೀಗಿದ್ದರೂ ಯೋಜನಾ ಕಾರ್ಯಕ್ರಮದ ವ್ಯಯ ಪ್ರಮಾಣವು ಈಗಾಗಲೇ ನಿಶ್ಚಿತವಾದಂತೆ 60.25 ಕೋಟಿ ರೂಪಾಯಿಯಾಗಿಯೇ ನಿಲ್ಲುವುದು. ಇದಕ್ಕಾಗಿ ವರ್ಷಾಂತ್ಯದಲ್ಲಿ ಸುಮಾರು 9 ಕೋಟಿ ರೂಪಾಯಿಯಷ್ಟು ಓವರ್ ಡ್ರಾಫ್ಟ್ ಪಡೆದುಕೊಳ್ಳುವ ಸಂಭವವಿದೆ. ಈ ಓವರ್‌ಡ್ರಾಫ್ಟ್ ಹಣದ ಮರುಸಂದಾಯಕ್ಕೆ ಭಾರತ ಸರ್ಕಾರದವರಿಂದ ಇನ್ನೊಂದು ತದರ್ಥ ಋಣವನ್ನು ಪಡೆದುಕೊಳ್ಳಬೇಕಾಗಬಹುದು.

ಮುಂದಿನ ವರ್ಷವು, ಚತುರ್ಥ ಪಾಂಚವಾರ್ಷಿಕ ಯೋಜನೆ ಪ್ರಾರಂಭವಾಗುವುದಕ್ಕೆ ಮುಂಚಿನ ಕೊನೆಯ ವಾರ್ಷಿಕ ಯೋಜನಾ ವರ್ಷವೆಂಬುದು ಮಾನ್ಯ ಸದಸ್ಯರಿಗೆ ತಿಳಿದಿದೆಯಷ್ಟೆ. ಚತುರ್ಥ ಪಾಂಚವಾರ್ಷಿಕ ಯೋಜನೆಯನ್ನು ರೂಪಿಸಲು ಕಾರ್ಯತಂಡಗಳನ್ನು ರಚಿಸುವ ಸಂಬಂಧದಲ್ಲಿ ಕ್ರಮಕೈಗೊಳ್ಳಲಾಗಿದೆ; ಕ್ಷಿಪ್ರದಲ್ಲಿಯೇ ಒಂದು ಯೋಜನಾಮಂಡಲಿಯನ್ನು ಸ್ಥಾಪಿಸುವುದಕ್ಕೆ ಕ್ರಮ ಕೈಕೊಳ್ಳಲಾಗುತ್ತಿದೆ.

1968-69ರ ವಾರ್ಷಿಕ ಯೋಜನೆಯನ್ನು ಸಿದ್ಧಪಡಿಸುವಾಗ ಅದಕ್ಕೆ ಹಣ ವೊದಗಿಸಿಕೊಳ್ಳುವ ವಿಚಾರದಲ್ಲಿ ತೀವ್ರ ಕಷ್ಟಗಳು ಇದಿರಾದವು. ರಾಜ್ಯವು ಬಹು ಪ್ರಯಾಸದಿಂದ ಗಳಿಸಿಕೊಂಡ ಸಂಪತ್ತಿ, ಸಾಧನವೂ, ಕೇಂದ್ರ ಸರಕಾರದಿಂದ ಬಂದ ಸಹಾಯ ಧನವೂ ಒಟ್ಟು ಸೇರಿ ಯೋಜನೆಗೆ ದೊರೆಯುವ ಹಣ ಕೇವಲ 51 ಕೋಟಿ ರೂಪಾಯಿ. ಯೋಜನಾ ಗಾತ್ರವನ್ನು ಹೀಗೆ ತಗ್ಗಿಸಿದ ಪಕ್ಷದಲ್ಲಿ, ಅದರಿಂದ ನಾನಾ ಅಭಿವೃದ್ಧಿ ರಂಗಗಳ ಪ್ರಗತಿಗೆ ತೀವ್ರ ಹಾನಿತಟ್ಟುವುದು. ಆದಕಾರಣ ಯೋಜನಾ ವ್ಯಯ ಪ್ರಮಾಣವು 60·25 ಕೋಟಿ ರೂಪಾಯಿಗಿಂತ ಕಡಿಮೆಯಾಗಕೂಡ ದೆಂದೂ ಅದನ್ನು ಮುಂದಿನ ವರ್ಷಕ್ಕೂ ಮುಂದುವರಿಸಿಕೊಂಡು ಹೋಗತಕ್ಕುದೆಂದೂ, ಎಂದರೆ ರಾಜ್ಯವು 23.35 ಕೋಟಿ ರೂಪಾಯಿ ಹಣವನ್ನು ಒದಗಿಸಿಕೊಂಡು, ಕೇಂದ್ರ ಸರಕಾರದಿಂದ ಬರುವ 36.90 ಕೋಟಿ ರೂಪಾಯಿ ಸಹಾಯ ಧನವನ್ನು ಸೇರಿಸಿಕೊಂಡು ಅಪೇಕ್ಷಿತವಾದ ಯೋಜನಾ ವ್ಯಯ ಪ್ರಮಾಣವನ್ನು ಒದಗಿಸಿಕೊಳ್ಳಬೇಕೆಂದೂ ಸರಕಾರದವರು ನಿರ್ಧರಿಸಿದರು.

ಕೇಂದ್ರ ಸರಕಾರದಿಂದ ಪುರಸ್ಕೃತವಾದ ಕಾರ್ಯ ಯೋಜನೆಗಳಲ್ಲಿ ರಾಜ್ಯದ ಅಂಶವನ್ನೂ ಸೇರಿಸಿಕೊಂಡು ರಾಜ್ಯದ ಯೋಜನಾ ಕಾರ್ಯಕ್ರಮಗಳಿಗೆ ಆಯಾ ಯೋಜನಾ ಕಾರ್ಯಕ್ಕೆ ತಕ್ಕಂತೆ ಹಂಚಿಕೆ ಮಾಡಿರುವ ಹಣದ ವಿವರವು ಮುಂದೆ ಹೇಳಿದಂತೆ ಇದೆ.

		(ಲಕ್ಷ ರೂಪಾಯಿ)
1	ವ್ಯವಸಾಯ	1,500.00 (ಇದರಲ್ಲಿ 921 ಲಕ್ಷ ರೂಪಾಯಿ ಹಣವನ್ನು ಮೈಸೂರು ವಿದ್ಯುಚ್ಛಕ್ತಿ ಮಂಡಲಿಯವರು ತಮ್ಮ ಸಂಪತ್ತಿ ಮೂಲದಿಂದಲೇ ಒದಗಿಸಬೇಕು.)
2	ನೀರಾವರಿ ಮತ್ತು ವಿದ್ಯುಚ್ಛಕ್ತಿ	2,78,000
3	ಸಾಮುದಾಯಿಕ ಅಭಿವೃದ್ಧಿ ಮತ್ತು ಸಹಕಾರ	—275.00+1600 (ಗ್ರಾಮಾಂತರ ಪ್ರದೇಶದ ಆಳು ಬಲ)
4	ಸಾಗಣೆ ಮತ್ತು ಸಂಪರ್ಕ ಸಾಧನಗಳು	306.00
5	ಉದ್ಯಮ ಮತ್ತು ಗಣಿ ಕೆಲಸ	317.00
6	ಸಮಾಜ ಸೇವೆಗಳು	822.00
7	ಸಂಕೀರ್ಣ	25.00
	ಒಟ್ಟು	6,025.00+ರೂ. 16 ಲಕ್ಷ

ಕೇಂದ್ರ ಪುರಸ್ಕೃತ ಯೋಜನಾ ಕಾರ್ಯಗಳಿಗೆ 1,009 ಲಕ್ಷ ರೂಪಾಯಿ ಸಹಾಯ ಧನ ದೊರೆಯುವುದೆಂದು ಆಯವ್ಯಯ ಪತ್ರದಲ್ಲಿ ಊಹಿಸಲಾಗಿದೆ. ಕೇಂದ್ರ ಪುರಸ್ಕೃತ ಯೋಜನಾ ಕಾರ್ಯಗಳಿಗೆ ಧನ ವ್ಯವಸ್ಥೆ ಮಾಡಲು ಈ ಸಲ ಅನುಸರಿಸಿದ ಕ್ರಮ ಹಿಂದಿನ ವರ್ಷದ ಕ್ರಮಕ್ಕಿಂತ ಬೇರೆಯಾಗಿದೆ. ಪ್ರಸಕ್ತ ವರ್ಷದಲ್ಲಿ ಬರುವ ಕೇಂದ್ರ ಸಹಾಯ ಧನದ ಆಧಾರದ ಮೇಲೆ ಈ ಸಲ ಅವುಗಳಿಗೆ ಹಣ ಒದಗಿಸಲಾಗಿದೆ. ಕೇಂದ್ರ ಪುರಸ್ಕೃತ ಯೋಜನಾ ಕಾರ್ಯಗಳಿಗೆ ಕೇಂದ್ರ ಸರಕಾರದವರು ಹೆಚ್ಚಿಗೆ ಹಣ ಮಂಜೂರು ಮಾಡಿದ ಪಕ್ಷದಲ್ಲಿ, ಅವುಗಳಿಗೆ ವಹಿಸತಕ್ಕ ಹೆಚ್ಚಿನ ವೆಚ್ಚಕ್ಕೆ ಪೂರಕ ಅನುದಾನಗಳಿಗಾಗಿ ವಿಧಾನ ಮಂಡಲವನ್ನು ವಿನಂತಿಸಲಾಗುಗದು.

ಹಿಂದಿನ ವರ್ಷದ ಆಯವ್ಯಯದ ಭಾಷಣದಲ್ಲಿ ಭೂಕಂದಾಯದ ಮತ್ತು ಪಾನನಿರೋಧದ ರದ್ದಿಯಾತಿಯ ವಿಚಾರವನ್ನು ಪ್ರಸ್ತಾಪಿಸಿದ್ದೆನಷ್ಟೆ. 1967ನೆಯ ಇಸವಿ ಮೈಸೂರು ಪಾನನಿರೋಧ ಸಂಬಂಧವಾದ (ತಿದ್ದುಪಡಿಯ) ಅಧಿನಿಯಮವು 17-8-1967 ರಿಂದ ಸಲುವಳಿಗೆ ಬಂದಿತು. 1965ನೆಯ ಇಸವಿಯ ಮೈಸೂರು ಉತ್ಪಾದನ ಶುಲ್ಕ (ಅಬ್ಕಾರಿ) ಸಂಬಂಧವಾದ ಅಧಿನಿಯಮವು ಕೆಲ ಕೆಲವು ಸ್ಥಳಗಳ ಹೊರತು ರಾಜ್ಯದ ಉಳಿದೆಲ್ಲ ಭಾಗಗಳಲ್ಲೂ ಸಮಾಚರಣೆಗೆ ಬಂದಿತು. ಪಾನ ನಿರೋಧವನ್ನು ಶಿಥಿಲಗೊಳಿಸಿದ ಕಾರಣ, ಪ್ರಸಕ್ತ ವರ್ಷ 1.91 ಕೋಟಿ ರೂಪಾಯಿ ಹೆಚ್ಚಿದ ಆದಾಯ ಬರುವುದೆಂದೂ ಮುಂದಿನ ವರ್ಷ ಉತ್ಪಾದನಾ ಶುಲ್ಕದಿಂದ (ಅಬ್ಕಾರಿಯಿಂದ) ಬರುವ ಆದಾಯವು 11 ಕೋಟಿ ರೂಪಾಯಿಗೇರುವುದೆಂದೂ ತಿಳಿಸಲು ನನಗೆ ಸಂತಸವಾಗಿದೆ. ಮದ್ಯ ಪಾನದ ದುಷ್ಪರಿಣಾಮಗಳನ್ನು ಕುರಿತು ಸಾರ್ವಜನಿಕರಿಗೆ ತಿಳಿವಳಿಕೆ ನೀಡುವ ಉದ್ದೇಶದಿಂದ ಸಮಸ್ತ ಜಿಲ್ಲೆಗಳಲ್ಲಿ ಪಾನ ನಿರೋಧ ಪ್ರಚಾರ ಸಮಿತಿಗಳನ್ನು ಏರ್ಪಡಿಸಲಾಗುತ್ತಿದೆಯೆಂಬ ಸಂಗತಿಯನ್ನು ತಿಳಿಯಲು ಮಾನ್ಯ ಸದಸ್ಯರಿಗೆ ಸಂತೋಷವಾದೀತೆಂದು ಭಾವಿಸುತ್ತೇನೆ.

ಭೂ ಕಂದಾಯದ ಬದಲಾಗಿ ಅನ್ಯಮೂಲಗಳಿಂದ ಹಣವೊದಗಿಸಿಕೊಳ್ಳುವ ವಿಚಾರವನ್ನು ರಾಜ್ಯ ಸರ್ಕಾರದವರು ಅತ್ಯಂತ ಎಚ್ಚರಿಕೆಯಿಂದ ಪರಿಶೀಲಿಸಿದ್ದಾರೆ. ತೆರಿಗೆ ಕೊಡುವ ಸಾಮರ್ಥ್ಯಕ್ಕೆ ತಕ್ಕಂತೆ ಕರನಿರ್ಧಾರಣವಾಗಲೆಂಬ ದೃಷ್ಟಿಯಿಂದ, ಎಲ್ಲ ಬೆಳೆಗಳ ಮೇಲೂ ವ್ಯವಸಾಯದ ಆದಾಯ ತೆರಿಗೆ ವಿಧಿಸುವ ಯೋಜನೆಯನ್ನು ಪ್ರಾರಂಭಿಸಲು ಸರ್ಕಾರದವರು ಉದ್ದೇಶಿಸಿದ್ದರು. ಆದರೆ ವ್ಯವಸಾಯಾದಾಯದ ಮೇಲಣ ಜಟಿಲವಾದ ಕರವಿಧಿಗೆ ಒಳಪಡುವುದಕ್ಕಿಂತ, ಹೆಚ್ಚಿನ ಭೂಕಂದಾಯ ಸಲ್ಲಿಸುವುದೇ ಲೇಸೆಂದು ಗ್ರಾಮಾಂತರ ಜನಸಮುದಾಯದ ಸಾಮಾನ್ಯಾಭಿಪ್ರಾಯವಾಗಿತ್ತು. ವ್ಯವಸಾಯದ ಆದಾಯದ ಮೇಲೆ ಏಕರೂಪದ ಆದಾಯ ತೆರಿಗೆಯನ್ನು ಎಲ್ಲ ರಾಜ್ಯಗಳಲ್ಲೂ ಜಾರಿಗೆ ತರಬೇಕೆಂದು ಯೋಜನಾ ಆಯೋಗದವರು ನೀಡಿದ ಸೂಚನೆಯನ್ನು ಮುಖ್ಯ ಮಂತ್ರಿಗಳ ಸಭೆಯು ಚರ್ಚಿಸಿ, ಅದಕ್ಕೆ ಈಗ ಕಾಲ ಪಕ್ವವಾಗಿಲ್ಲವೆಂಬ ತೀರ್ಮಾನಕ್ಕೆ ಬಂದಿದ್ದಿತು. ಹೀಗಾಗಿ ಈ ವಿಚಾರದಲ್ಲಿ ಸಾರ್ವಜನಿಕರೂ ತಜ್ಞರೂ ನೀಡಿದ ಅಭಿಪ್ರಾಯವನ್ನು ಪರಿಶೀಲಿಸಿ, ಭೂ ಕಂದಾಯದ ಬದಲಾಗಿ ಅನ್ಯಮೂಲಗಳಿಂದ ಆದಾಯವನ್ನು ತುಂಬಿಕೊಳ್ಳುವ ವಿಚಾರವನ್ನು ಕೈಬಿಡಬೇಕೆಂದೂ ವ್ಯವಸಾಯಾದಾಯದ ಮೇಲಣ ತೆರಿಗೆಯನ್ನು ಸುಗಮಗೊಳಿಸಿ, ಅದನ್ನು ವಿಶಾಲ ತಳಹದಿಯ ಮೇಲೆ ಜಾರಿಗೆ ತರಲು ಸಾಧ್ಯವಾಗುವಂತೆ ನಮ್ಮ ವ್ಯವಸಾಯಿಕ ಅರ್ಥ ವ್ಯವಸ್ಥೆ ಅನುವಾಗುವವರೆಗೆ ಭೂಕಂದಾಯವನ್ನು ತೆಗೆದುಹಾಕಕೂಡದೆಂದು ಸರ್ಕಾರದವರು ತೀರ್ಮಾನಿಸಿದ್ದಾರೆ. ಹೆಚ್ಚಿದ ಹೊಣೆಗಳ ನಿರ್ವಹಣೆಗಾಗಿಯೇ ನಮ್ಮ ಸಂಪತ್ತಿ ಮೂಲಗಳೆಲ್ಲವೂ ವಿನಿಯೋಗವಾಗಿರುವುದರಿಂದ, ಮುಂದಿನ ಅಭಿವೃದ್ಧಿ ಯೋಜನೆಗಳಿಗೆ ನಮ್ಮಲ್ಲಿ ಹಣವಿಲ್ಲವಾಗಿದೆ. ಆದುದರಿಂದ, ಜನರಿಗೆ ಹೆಚ್ಚಿನ ತೊಂದರೆಯುಂಟಾಗದಂತೆ ಬೇರೆ ಮೂಲಗಳಿಂದ ಹಣವೊದಗಿಸಿಕೊಳ್ಳಲು ಸಾಧ್ಯವಾಗುವವರೆಗೆ, ಈಗಿನ ಆದಾಯ ಮೂಲವನ್ನು ಕೈಬಿಡುವುದು ಸುಲಭವಲ್ಲ.

ಕಂದಾಯ ವಸೂಲಿಯು ಉತ್ತಮಗೊಂಡಿದೆಯೆಂಬ ವಿಚಾರವನ್ನು ಸಭೆಗೆ ತಿಳಿಸಲು ನನಗೆ ಸಂತೋಷವಾಗಿದೆ. ಸಂದರ್ಭಾನುಸಾರವಾಗಿ ಹೆಚ್ಚು ಕಡಿಮೆಯಾಗಬಲ್ಲ ಏಕ ಮಾತ್ರ ಕರಾಧಾನ ವ್ಯವಸ್ಥೆಯಾದ ಮಾರಾಟ ತೆರಿಗೆಯು ರಾಜ್ಯ ಸೂಚಿಯಲ್ಲಿರುವ ತೆರಿಗೆಗಳಲ್ಲಿ ಅಗ್ರಸ್ಥಾನ ಪಡೆದಿದೆ. ಮಾರಾಟ ತೆರಿಗೆಯಿಂದ 1956-57 ರಲ್ಲಿ ಬಂದ ಒಟ್ಟು ಹಣ 9 ಕೋಟಿ ರೂಪಾಯಿ; ಅದು 1965-66 ರಲ್ಲಿ 19 ಕೋಟಿ ರೂಪಾಯಿಗೇರಿದ್ದಿತು; 1967-68 ರಲ್ಲಿ ಈ ತೆರಿಗೆಯಿಂದ 27 ಕೋಟಿ ರೂಪಾಯಿ ಬರುವ ನಿರೀಕ್ಷೆಯಿದೆ. ಬೆಲೆಯೇರಿಕೆ ಈ ಹೆಚ್ಚಳಕ್ಕೆ ಕೊಂಚಮಟ್ಟಿಗೆ ಕಾರಣವೆಂಬುದೇನೋ ನಿಜ; ಆದರೆ ತೆರಿಗೆ ತಪ್ಪಿಸಿಕೊಳ್ಳುವ ಪ್ರವೃತ್ತಿಯನ್ನು ತಡೆಗಟ್ಟಲು ಇಲಾಖೆಯವರು ಕೈಕೊಂಡ ಪರಿಣಾಮಕಾರಿ ಕ್ರಮಗಳೂ ಆಡಳಿತ ವ್ಯವಸ್ಥೆಯನ್ನು ಬಲಪಡಿಸಿದುದೂ ಈ ಹೆಚ್ಚಳಕ್ಕೆ ಕಾರಣವಾಗಿದೆ. ಮೈಸೂರು ವ್ಯವಸಾಯದ ಆದಾಯ ತೆರಿಗೆಯ ಅಧಿನಿಯಮದ ಮೇರೆಗೆ ಕೆಲವು ವರ್ಷಗಳ ಹಿಂದೆ 50 ಲಕ್ಷ ರೂಪಾಯಿ ಆದಾಯ ಬರುತ್ತಿದ್ದಿತು; ಈ ಮೊತ್ತ ಈಗ 1.50 ಕೋಟಿ ರೂಪಾಯಿಗೇರಿದೆ. ಕರನಿರ್ಧಾರಣದಲ್ಲೂ ಕರವಸೂಲಿಯಲ್ಲೂ ಗಮನಾರ್ಹವಾದ ಸುಧಾರಣೆಯಾಗಿರುವುದೇ ಅದಕ್ಕೆ ಕಾರಣ. ಮೈಸೂರು ಮನೋರಂಜನ ತೆರಿಗೆಯ ಅಧಿನಿಯಮದ ಮೇರೆಗೆ 1959-60 ರಲ್ಲಿ 60 ಲಕ್ಷ ರೂಪಾಯಿ ಬಂದಿದ್ದಿತು. ಆದರೆ ಈಗ ಅದು 180.50 ಲಕ್ಷ ರೂಪಾಯಿಗೇರಿದೆ.

ಈಗ ಅನೇಕ ವರ್ಷಗಳಿಂದ ಸಣ್ಣ ಉಳಿತಾಯವು ರಾಜ್ಯದ ಸಂಪತ್ತಿ ಮೂಲಗಳಲ್ಲಿ ಒಂದಾಗಿದೆ. ಪ್ರಸಕ್ತ ವರ್ಷದಲ್ಲಿ ರಾಜ್ಯ ಸರ್ಕಾರದವರು 5.58 ಕೋಟಿ ರೂಪಾಯಿಯಷ್ಟು ನಿವ್ವಳ ಹಣವನ್ನು ಸಣ್ಣ ಉಳಿತಾಯಗಳ ಮೂಲಕ ಒದಗಿಸಿಕೊಳ್ಳಬೇಕೆಂದು ನಿರ್ಧರಿಸಿದ್ದರು. ಆದರೆ ವಾಸ್ತವವಾಗಿ ಡಿಸೆಂಬರ್ 1967ರವರೆಗೆ ಸಂಗ್ರಹವಾದ ಒಟ್ಟು ಮೊತ್ತ 9.46 ಕೋಟಿ ರೂಪಾಯಿ ; ನಿವ್ವಳ ಮೊತ್ತ 2 03 ಕೋಟಿ ರೂಪಾಯಿ. ಸಣ್ಣ ಉಳಿತಾಯಗಳನ್ನು ಸಂಗ್ರಹಿಸಿ ಸಿದ್ಧವಾಗಿಟ್ಟುಕೊಳ್ಳುವ ಕೆಲಸವನ್ನು ತೀವ್ರತರವಾಗಿ ಮುಂದುವರಿಸಲು ಸರ್ಕಾರದವರು ಬಯಸುತ್ತಾರೆ. 1968-69ನೆಯ ವರ್ಷದಲ್ಲಿ ನಿವ್ವಳ 6 ಕೋಟಿ ರೂಪಾಯಿಯನ್ನು ಸಂಗ್ರಹಿಸಬೇಕೆಂಬುದು ಸರ್ಕಾರದ ಉದ್ದೇಶವಾಗಿದೆ. ಇದಕ್ಕಾಗಿ ರಾಜ್ಯದಲ್ಲಿ ಸಂಚಾರ ಕೈಕೊಂಡು, ಇಲಾಖಾಧಿಕಾರಿಗಳ ಮತ್ತು ಸ್ಥಳೀಯ ಸಂಸ್ಥೆಗಳ ನೆರವಿನಿಂದ ವಿಶೇಷವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಜನರ ಸಂಪರ್ಕ ಬೆಳೆಸಿಕೊಂಡು, ಗ್ರಾಮಾಂತರ ಪ್ರದೇಶದಲ್ಲಿ ಸಣ್ಣ ಉಳಿತಾಯದ ಹಣವನ್ನು ಪರಿಣಾಮಕಾರಿಯಾಗಿ ಗಳಿಸುವ ಕೆಲಸಕ್ಕಂದು ನಮ್ಮ ಅರ್ಥಶಾಖೆಯ ಸಣ್ಣ ಉಳಿತಾಯಗಳ ಸಂಚಾಲನಾಲಯದ ನಿಯಂತ್ರಣದಲ್ಲಿ ಸಣ್ಣ ಉಳಿತಾಯಗಳ ಸಹ-ಸಂಚಾಲಕರೊಬ್ಬರನ್ನು ನೇಮಕ ಮಾಡಲು ಸೂಕ್ತ ಕ್ರಮ ಕೈಗೊಳ್ಳುತ್ತಿದ್ದೇನೆ. ನಾನು ಹಿಂದೆಯೇ ಈ ಮಾನ್ಯ ಸಭೆಗೆ ವಚನ ನೀಡಿದಂತೆ ಮೈಸೂರಿನಲ್ಲಿ ಚಲಚ್ಚಿತ್ರೋತ್ಪಾದನೆಗೆ ಸಹಾಯಧನ ನೀಡುವುದನ್ನು ಮುಂದುವರಿಸಲಾಗಿದೆ. ಅತ್ಯುತ್ತಮ ಚಲಚ್ಚಿತ್ರಗಳಿಗೆ ಬಹುಮಾನಗಳನ್ನೂ ನೀಡಲಾಗುತ್ತಿದೆ. ಚಲಚ್ಚಿತ್ರೋತ್ಪಾದನೆಯನ್ನು ಪ್ರಾರಂಭಿಸುವ ಒಂದು ಕಂಪೆನಿಯನ್ನು ಕ್ಷಿಪ್ರವಾಗಿಯೇ ರಿಜಿಸ್ಟರು ಮಾಡಿಸುವ ಉದ್ದೇಶವಿದೆ. ಸರ್ಕಾರದವರು ಈ ಸಂಸ್ಥೆಗಾಗಿ ವಿನಿಯೋಗಿಸಲಿರುವ ಹಣವನ್ನು ಆಯವ್ಯಯ ಪತ್ರದಲ್ಲಿ ಸೇರಿಸಲಾಗಿದೆ.

ಮೊದಲನೇ ದಶಕದಲ್ಲಿ, ನವ ಮೈಸೂರು ರಾಜ್ಯವು 7 ವರ್ಷಗಳವರೆಗೆ ರಾಜಸ್ವದ ಹೆಚ್ಚಳವನ್ನೂ, 3 ವರ್ಷಗಳ ಕಾಲ ರಾಜಸ್ವದ ಕೊರತೆಯನ್ನೂ, 4 ವರ್ಷಗಳ ಕಾಲ ಒಟ್ಟು ಹೆಚ್ಚಳಗಳನ್ನೂ, 6 ವರ್ಷಗಳ ಕಾಲ ಒಟ್ಟು ಕೊರತೆಗಳನ್ನೂ ಅನುಭವಿಸಿತ್ತು. ರಾಜ್ಯದ ಬಂಡವಾಳ ಸ್ವತ್ತು 1957-58ರ ಅಂತ್ಯದಲ್ಲಿ 115.91 ಕೋಟಿ ರೂಪಾಯಿಯಷ್ಟಿತು; ಇದು 1967-68ರ ಅಂತ್ಯದಲ್ಲಿ 434.96 ಕೋಟಿ ರೂಪಾಯಿಗೆ ಏರಿದ್ದಿತು— ಎಂದರೆ ಸೇಕಡಾ 275ರಷ್ಟು ಹೆಚ್ಚಿದಂತಾಯಿತು; ಎಂದರೆ ತಲಾ ಒಬ್ಬನ ಬಂಡವಾಳ ಸ್ವತ್ತು 52.33 ರೂಪಾಯಿಯಿಂದ 162.48 ರೂಪಾಯಿಗೇರಿ, ಸೇಕಡಾ 211 ರಷ್ಟು ಹೆಚ್ಚಿದಂತಾಯಿತು. ರಾಜ್ಯ ಸರ್ಕಾರದ ಬಾಕಿ ಉಳಿದ ಸಾಲವು 101.76 ಕೋಟಿ ರೂಪಾಯಿಂದ 369.45 ಕೋಟಿ ರೂಪಾಯಿಗೇರಿ, ಸೇಕಡಾ 263ರಷ್ಟು ಹೆಚ್ಚಿದಂತಾಯಿತು—ಎಂದರೆ ತಲಾ ಒಬ್ಬನ ಬಾಕಿ ಉಳಿದ ಸಾಲವು 45 94
ರೂಪಾಯಿಯಿಂದ 138.01 ರೂಪಾಯಿಗೇರಿ, ಸೇಕಡಾ 200ರಷ್ಟು ಹೆಚ್ಚಿದಂತಾಯಿತು ಕೊಟ್ಟ ಸಾಲಗಳ ಮರುಸಂದಾಯದಿಂದ ಸರ್ಕಾರಕ್ಕೆ ಬರತಕ್ಕ ಹಣ 15·98 ಕೋಟಿ ರೂಪಾಯಿಯಿಂದ 142·84 ಕೋಟಿ ರೂಪಾಯಿಗೇರಿ ಸೇಕಡಾ 794 ರಷ್ಟು ಹೆಚ್ಚಿದಂತಾಯಿತು.

1957-58 ರಲ್ಲಿ 58·15 ಕೋಟಿ ರೂಪಾಯಿಯಷ್ಟಿದ್ದ ರಾಜ್ಯಾದಾಯವು 1968-69 ರಲ್ಲಿ 194·74 ಕೋಟಿ ರೂಪಾಯಿಗೇರಿ, ಸೇಕಡಾ 235 ರಷ್ಟು ಹೆಚ್ಚುವುದೆಂದು ಎಂದರೆ ತಲಾ ಒಬ್ಬನ ಆದಾಯವು 26·25 ರೂಪಾಯಿಯಿಂದ 72·75 ರೂಪಾಯಿಗೇರಿ, ಸೇಕಡಾ 177 ರಷ್ಟು ಹೆಚ್ಚುವುದೆಂದೂ ತೆರಿಗೆ ಆದಾಯವು 24·03 ಕೋಟಿ ರೂಪಾಯಿಂದ 97·35 ಕೋಟಿ ರೂಪಾಯಿಗೇರಿ, ಸೇಕಡಾ 305 ರಷ್ಟು ಹೆಚ್ಚುವುದೆಂದೂ ಅಥವಾ ತಲಾ ಒಬ್ಬನಿಗೆ 10·85 ರೂಪಾಯಿಯಿಂದ 36·36 ರೂಪಾಯಿಗೇರಿ, ಸೇಕಡಾ 235 ರಷ್ಟು ಹೆಚ್ಚುವುದೆಂದೂ; ರಾಜ್ಯ ತೆರಿಗೆಗಳಿಂದ ಬರತಕ್ಕ ಆದಾಯವು 17·61 ಕೋಟಿ ರೂಪಾಯಿಯಿಂದ 74·83 ಕೋಟಿ ರೂಪಾಯಿಗೇರಿ ಸೇಕಡಾ 325 ರಷ್ಟು ಹೆಚ್ಚುವುದೆಂದೂ ಅಥವಾ ತಲಾ ಒಬ್ಬನಿಗೆ 7·95 ರೂಪಾಯಿಯಿಂದ 27·95 ರೂಪಾಯಿಗೇರಿ ಸೇಕಡಾ 252 ರಷ್ಟು ಹೆಚ್ಚುವುದೆಂದೂ ಊಹಿಸಲಾಗಿತ್ತು. ರಾಜ್ಯ ತೆರಿಗೆಗಳ ಮೂಲಕ 1957-58 ರಲ್ಲಿ ತಲಾ ಒಬ್ಬನಿಂದ ತಲಾ ಒಬ್ಬನ ಆದಾಯದ ಸೇಕಡಾ 3·12 ರಷ್ಟು ಮತ್ತು 1964-65ರಲ್ಲಿ ತಲಾ ಒಬ್ಬನಿಂದ ಆದಾಯದ ಸೇಕಡಾ 4·38 ರಷ್ಟು ರಾಜ್ಯಾದಾಯ ಬಂದಿತ್ತು.

ರಾಜಸ್ವ ಮತ್ತು ಬಂಡವಾಳ ಲೆಕ್ಕಗಳ ಸಂಬಂಧವಾದ ವ್ಯಯವು 1957-58ರಲ್ಲಿ 69·91 ಕೋಟಿ ರೂಪಾಯಿಯಷ್ಟಿತ್ತು, ಇದು 1968-69 ರಲ್ಲಿ 221·81 ಕೋಟಿ ರೂಪಾಯಿಗೇರಿ ಸೇಕಡಾ 217·3 ರಷ್ಟು ಹೆಚ್ಚಿತು. ಎಂದರೆ ತಲಾ ಒಬ್ಬನ ಲೆಕ್ಕದಲ್ಲಿ 31·56 ರೂಪಾಯಿಯಿಂದ 82·86 ರೂಪಾಯಿಗೇರಿ ಸೇಕಡಾ 163 ರಷ್ಟು ಹೆಚ್ಚಿದಂತಾಯಿತು. ಅಭಿವೃದ್ಧಿ ಸಂಬಂಧವಾದ ವ್ಯಯವು 52·06 ಕೋಟಿ ರೂಪಾಯಿಯಿಂದ 155·63 ಕೋಟಿ ರೂಪಾಯಿಗೇರಿ, ಸೇಕಡಾ 199 ರಷ್ಟು ಏರಿತು. ಎಂದರೆ ತಲಾ ಒಬ್ಬನ ಲೆಕ್ಕದಲ್ಲಿ 23·50 ರೂಪಾಯಿಯಿಂದ 58·14 ರೂಪಾಯಿಗೇರಿ, ಸೇಕಡಾ 147 ರಷ್ಟು ಹೆಚ್ಚಿದಂತಾಯಿತು; ಮತ್ತು ಅಭಿವೃದ್ಧಿ ಕಾರ್ಯಕಲಾಪಗಳಿಗೆ ಸಂಬಂಧಪಟ್ಟದ್ದಲ್ಲದ ವ್ಯಯವು 17·85 ಕೋಟಿ ರೂಪಾಯಿಯಿಂದ 66·18 ಕೋಟಿ ರೂಪಾಯಿಗೇರಿ ಸೇಕಡಾ 271 ರಷ್ಟು ಹೆಚ್ಚಿತು; ಎಂದರೆ ತಲಾ ಒಬ್ಬನ ಲೆಕ್ಕದಲ್ಲಿ 8·06 ರೂಪಾಯಿಯಿಂದ 24·72 ರೂಪಾಯಿಗೇರಿ, ಸೇಕಡಾ 207 ರಷ್ಟು ಹೆಚ್ಚಿದಂತಾಯಿತು.

1957-58 ರಿಂದ 1964–65ರ ವರೆಗಿನ ಅವಧಿಯಲ್ಲಿ ರಾಜ್ಯದ ಆದಾಯವನ್ನೂ ರಾಷ್ಟ್ರೀಯ ಆದಾಯವನ್ನೂ ಸೂಚಿಸುವ ಅಂದಾಜುಗಳ ಪ್ರಕಾರ, ರಾಜ್ಯದಲ್ಲಿ ಪ್ರಸಕ್ತ ಬೆಲೆಗಳ ಮೇರೆಗೆ ಆದಾಯೋತ್ಪತ್ತಿಯ ವಾರ್ಷಿಕ ಪ್ರಮಾಣವು ಸರಾಸರಿ ಸೇಕಡಾ 12; ಒಟ್ಟು ದೇಶದ ಆದಾಯೋತ್ಪತ್ತಿಯ ಬೆಳವಣಿಗೆಯ ವಾರ್ಷಿಕ ಪ್ರಮಾಣವು ಸೇಕಡಾ 9·6. ರಾಜ್ಯದ ಜನಸಂಖ್ಯೆಯು ಪ್ರತಿವರ್ಷ ಸೇಕಡಾ 2.157 ರಷ್ಟು ಹೆಚ್ಚಿದೆಯೆಂದೂ ರಾಷ್ಟ್ರದ ಜನಸಂಖ್ಯೆಯು 2·164 ರಷ್ಟು ಹೆಚ್ಚಿದೆಯೆಂದೂ ಊಹಿಸಲಾಗಿದೆ. ಈ ಅವಧಿಯೊಳಗೆ ರಾಜ್ಯದಲ್ಲಿ ತಲಾ ಒಬ್ಬನ ಆದಾಯವು 1956-57 ರಲ್ಲಿದ್ದ 232·4 ರೂಪಾಯಿಯಿಂದ 1964-65 ರಲ್ಲಿ 391·7 ಕ್ಕೇರಿ ವರ್ಷಕ್ಕೆ ಸರಾಸರಿ ಸೇಕಡಾ 8·56 ರಷ್ಟು ಹೆಚ್ಚಿತು; ಒಟ್ಟು ದೇಶದಲ್ಲಿ ತಲಾ ಒಬ್ಬನ ಆದಾಯವು 283·3 ರೂಪಾಯಿಯಿಂದ 421.5 ರೂಪಾಯಿಗೇರಿ, ಸರಾಸರಿ ವರ್ಷಕ್ಕೆ ಸೇಕಡಾ 6·1 ರಷ್ಟು ಹೆಚ್ಚಿತು.

1956–57ರಲ್ಲಿ ರಾಜ್ಯದ ಆದಾಯದ ಸೇಕಡ 61·6 ರಷ್ಟು ಮೊತ್ತವು ಮತ್ತು ರಾಷ್ಟ್ರಾದಾಯದ ಸೇಕಡಾ 48·8 ರಷ್ಟು ಮೊತ್ತವು (ಪಶುಸಂಗೋಪನೆ, ಅರಣ್ಯಶಾಸ್ತ್ರ ಮತ್ತು ಮೀನುಗಾರಿಕೆ ಇವುಗಳೂ ಸೇರಿದಂತೆ) ಕೃಷಿ ರಂಗದಿಂದ ಬಂದಿರುವುದಾಗಿದೆ; ಅದರಂತೆ, 1964–65 ರಲ್ಲೂ ರಾಜ್ಯದ ಆದಾಯದ ಸೇಕಡಾ 59·9 ರಷ್ಟು ಮತ್ತು ರಾಷ್ಟ್ರಾದಾಯದ ಸೇಕಡಾ 51·3 ರಷ್ಟು ಮೊತ್ತವು ಕೃಷಿ ರಂಗದಿಂದಲೇ ಬಂದಿರುವುದಾಗಿದೆ. ರಾಜ್ಯದ ಆದಾಯಕ್ಕೆ 1956–57 ರಲ್ಲಿ

ವ್ಯವಸಾಯ ರಂಗದಿಂದ ಬಂದ ಕೊಡುಗೆ 305 ಕೋಟಿ ರೂಪಾಯಿ; ಇದು 1964-65ರಲ್ಲಿ 587 ಕೋಟಿ ರೂಪಾಯಿಗೇರಿ, ವರ್ಷಕ್ಕೆ ಸರಾಸರಿ ಸೇಕಡಾ 11·6 ರಷ್ಟು ಹೆಚ್ಚಿತು ; ಅದರಂತೆ ರಾಷ್ಟ್ರಾದಾಯಕ್ಕೆ ಕೃಷಿರಂಗದಿಂದ ಬಂದ ಕೊಡುಗೆಯು ವರ್ಷಕ್ಕೆ ಸರಾಸರಿ ಸೇಕಡಾ 10·76 ರಷ್ಟು ಹೆಚ್ಚಿತು, ರಾಜ್ಯದ ಆದಾಯಕ್ಕೆ ಬೇರೆಲ್ಲ ರಂಗಗಳಿಂದ ಬಂದು ಸೇರಿದ ಅಂಶವು 1956-57 ರಲ್ಲಿ 194 ಕೋಟಿ ರೂಪಾಯಿ. ಇದು 1964-65 ರಲ್ಲಿ 393 ಕೋಟಿ ರೂಪಾಯಿಗೇರಿ, ವರ್ಷಕ್ಕೆ ಸರಾಸರಿ ಸೇಕಡಾ 12·75 ರಷ್ಟು ಹೆಚ್ಚಿತು; ರಾಷ್ಟ್ರಾದಾಯದಲ್ಲಿ ಈ ಬಗೆಯಾಗಿ ಕಂಡುಬಂದ ಹೆಚ್ಚಳದ ಪ್ರಮಾಣವು ವರ್ಷಕ್ಕೆ ಸರಾಸರಿ ಸೇಕಡ 8.52 ರಷ್ಟಿದ್ದಿತು.

ಲೆಕ್ಕಗಳು 1966-67

1966-67ರ ಪರಿಷ್ಕೃತ ಅಂದಾಜಿನಲ್ಲಿ 5.26 ಕೋಟಿ ರೂಪಾಯಿಯಷ್ಟು ರಾಜಸ್ವದ ಉಳಿತಾಯವನ್ನು ನಿರೀಕ್ಷಿಸಲಾಗಿತ್ತು. ಆದರೆ ವಾಸ್ತವವಾಗಿ ದೊರೆತ ಉಳಿತಾಯವು 4.96 ಕೋಟಿ ರೂಪಾಯಿ ಮಾತ್ರ ಎಂದರೆ, ಉಳಿತಾಯದಲ್ಲಿ 3.30 ಕೋಟಿ ರೂಪಾಯಿಯಷ್ಟು ಕಡಿಮೆ ಕಂಡುಬಂದಿತು. ರಾಜಸ್ವದಲ್ಲಿ 4·04 ಕೋಟಿ ರೂಪಾಯಿ ಇಳಿತವಾದುದೂ ಮತ್ತು ವ್ಯಯದಲ್ಲಿ 3·74 ಕೋಟಿ ರೂಪಾಯಿ ಕಡಿತವಾದುದೂ ಉಳಿತಾಯದ ಇಳಿತಕ್ಕೆ ಕಾರಣವಾಗಿದ್ದವು.

ವರ್ಷದ ಪರಿಷ್ಕೃತ ಅಂದಾಜುಗಳಲ್ಲಿ 32·19 ಕೋಟಿ ರೂಪಾಯಿಯಷ್ಟು ಬಂಡವಾಳ ವೆಚ್ಚವನ್ನು ನಿರೀಕ್ಷಿಸಲಾಗಿತ್ತು. ಆದರೆ ವಾಸ್ತವವಾಗಿ 38·25 ಕೋಟಿ ರೂಪಾಯಿಯಷ್ಟು ವ್ಯಯವಾಗಿತ್ತು. ವಿದ್ಯುದ್ಯೋಜನೆಗಳು, ಲೋಕೋಪಯೋಗಿ ಕಾರ್ಯಗಳು ಮತ್ತು ಉದ್ಯಮಗಳು—ಈ ಶೀರ್ಷಿಕೆಗಳಲ್ಲಿ ಹೆಚ್ಚಳಗಳು ಮುಖ್ಯವಾಗಿ ಕಂಡುಬರುತ್ತದೆ. ಸರ್ಕಾರಿ ವ್ಯಾಪಾರ ವಹಿವಾಟಿನಲ್ಲೂ 1·25 ಕೋಟಿ ರೂಪಾಯಿ ಹೋಗಿತ್ತು.

ವರ್ಷದ ಪ್ರಾರಂಭದಲ್ಲಿ 0·33 ಕೋಟಿ ರೂಪಾಯಿಯಷ್ಟು ನಗದು ಶಿಲ್ಕು ಇದ್ದಿತು. ಅರ್ಥೋಪಾಯ ಅಗ್ರಿಮ ಧನ ಮತ್ತು ಓವರ್ ಡ್ರಾಫ್ಟ್ ಹಣ ಇವೆರಡೂ ಸೇರಿ, 40·48 ಕೋಟಿ ರೂಪಾಯಿ ಅದ್ದಿತು. ವರ್ಷಾಂತ್ಯದಲ್ಲಿ ಇದ್ದ ನಗದು ಶಿಲ್ಕು ಹಣ—2·96 ಕೋಟಿ ರೂಪಾಯಿ, ಅರ್ಥೋಪಾಯ ಅಗ್ರಿಮಧನವು ಮತ್ತು ಓವರ್ ಡ್ರಾಫ್ಟ್ ಹಣವು ಸಾಲಪತ್ರಗಳ ಮಾರಾಟ, ಕೇಂದ್ರದಿಂದ ಮಂಜೂರ್ಮಾಡಲಾದ ತದರ್ಥ ಸಾಲ, ಇವುಗಳನ್ನು ಲೆಕ್ಕಕ್ಕೆ ತೆಗೆದುಕೊಂಡ ಅನಂತರ, ನೀರಿಕ್ಷಿತವಾದಂತೆ 11·80 ಕೋಟಿ ರೂಪಾಯಿಗೆ ಇಳಿಯಿತು.

ಪರಿಷ್ಕೃತ ಅಂದಾಜುಗಳು 1967-68

1967-68ರ ಆಯವ್ಯಯ ಪತ್ರದಲ್ಲಿ 185·60 ಕೋಟಿ ರೂಪಾಯಿ ರಾಜಸ್ವಕ್ಕೂ 177·01 ಕೋಟಿ ರೂಪಾಯಿ ರಾಜಸ್ವ ವ್ಯಯಕ್ಕೂ ಅವಕಾಶ ಮಾಡಲಾಗಿದ್ದಿತು. ಅದರಿಂದ 8.59 ಕೋಟಿ ರೂಪಾಯಿ ಉಳಿತಾಯವಾಗುವಂತೆ ತೋರಿಬಂದಿತು. ಪರಿಷ್ಕೃತ ಅಂದಾಜುಗಳು ಈಗ 176·62 ಕೋಟಿ ರೂಪಾಯಿಯಷ್ಟು ಒಟ್ಟು ರಾಜಸ್ವಕ್ಕೂ 165·76 ಕೋಟಿ ರೂಪಾಯಿಯಷ್ಟು ರಾಜಸ್ವ ವ್ಯಯಕ್ಕೂ ಅವಕಾಶ ಮಾಡಲಾಗಿದೆ. ಇದರಿಂದ 10·86 ಕೋಟಿ ರೂಪಾಯಿ ಉಳಿತಾಯವಾಗುವುದು.

ರಾಜಸ್ವದಲ್ಲಿ 8·98 ಕೋಟಿ ರೂಪಾಯಿಯಷ್ಟು ಕಡಮೆಯಾಗಲು ಆಯವ್ಯಯದ ನಾನಾ ವ್ಯತ್ಯಾಸಗಳೇ ಕಾರಣ. ರಾಜಸ್ವದ ಮುಖ್ಯ ಶೀರ್ಷಿಕೆಗಳು 3·88 ಕೋಟಿ ರೂಪಾಯಿಯಷ್ಟು ಹೆಚ್ಚಳ ತೋರಿಸುತ್ತವೆ. ಮುಖ್ಯವಾಗಿ (ಆದಾಯ ತೆರಿಗೆಯ ಬಾಕಿ ವಸೂಲಿಯಿಂದಲೂ ಮತ್ತು ವ್ಯವಸಾಯಾದಾಯದ ತೆರಿಗೆಯ ಹೆಚ್ಚಳದಿಂದಲೂ) 'ಆದಾಯ ತೆರಿಗೆಗಳು' ಎಂಬುದರಲ್ಲಿ 2·59 ಕೋಟಿ ರೂಪಾಯಿ ಹೆಚ್ಚಳಕ್ಕೆ; 'ಮುದ್ರಾಂಕಗಳು' ಎಂಬುದರ ಕೆಳಗೆ 0·55 ಕೋಟಿ ರೂಪಾಯಿಯೂ ; 'ರಾಜ್ಯದ ಉತ್ಪಾದನ ಶುಲ್ಕಗಳು' ಎಂಬುದರ ಕೆಳಗೆ 1.67 ಕೋಟಿ ರೂಪಾಯಿಯೂ ; 'ಇತರ ತೆರಿಗೆಗಳು ಮತ್ತು ಶುಲ್ಕಗಳು' ಎಂಬುದರ ಕೆಳಗೆ 0·37 ಕೋಟಿ ರೂಪಾಯಿಯೂ ; (ಬಾಕಿ ಶುಲ್ಕದ ವಸೂಲಿಯಿಂದ) 'ಆಸ್ತಿ ಶುಲ್ಕ' ಎಂಬುದರ ಕೆಳಗೆ 0·35 ಕೋಟಿ ರೂಪಾಯಿಯೂ ಹೆಚ್ಚಳವಾಗಿ ಬಂದಿದ್ದು, 'ಭೂ ಕಂದಾಯ' ಎಂಬುದರ ಕೆಳಗಿನ 1·60 ಕೋಟಿ ರೂಪಾಯಿಯು (ಸಕ್ಕರೆ ಕಾರ್ಖಾನೆಗಳಿಂದ ಬರತಕ್ಕ ಮಾರಾಟ ತೆರಿಗೆ ಬಾಕಿಉಳಿದ ಕಾರಣ) 'ಮಾರಾಟ ತೆರಿಗೆ' ಎಂಬುದರ ಕೆಳಗೆ 0·14 ಕೋಟಿ ರೂಪಾಯಿ ಕೊರತೆ ಕಂಡು ಬಂದು, ಇದರ ಶೀರ್ಷಿಕೆಗಳಲ್ಲಿಯ ಬದಲಾವಣೆಗಳು ಪರಸ್ಪರವಾಗಿ ಸರಿಹೊಂದಿಕೊಂಡ ಕಾರಣದಿಂದ ಉಳಿಯುವ ಹೆಚ್ಚಳವೇ ಮುಖ್ಯ ಕಾರಣ. 'ವಿಶೇಷ ಬಾಬುಗಳು' ಎಂಬುದರ ಕೆಳಗೆ 1·71 ಕೋಟಿ ರೂಪಾಯಿ ಹೆಚ್ಚಳ

ವಿದೆ; 'ವಿವಿಧ ಬಾಬುಗಳು' ಎಂಬುದರ ಕೆಳಗೆ 0·33 ಕೋಟಿ ರೂಪಾಯಿ ಹೆಚ್ಚಳವಿದೆ; 'ವಿದ್ಯಾಭ್ಯಾಸ' ಎಂಬುದರ ಕೆಳಗೆ 0·89 ಕೋಟಿ ರೂಪಾಯಿ ಹೆಚ್ಚಳವಿದೆ. ಮೈಸೂರು ರಾಜ್ಯದ ರಸ್ತೆ ಸಾರಿಗೆ ನಿಗಮಕ್ಕೆ ವರ್ಗಾಯಿಸಿದ ಜಮೀನಿನ ಮಾರಾಟ ಮೌಲ್ಯ, ಸಹಾಯ ಪೋಷಿತ ಶಾಲೆಗಳ ಅಧ್ಯಾಪಕರ ಪೂರ್ಣ ಸಂಬಳವನ್ನೂ ಸರ್ಕಾರದವರೇ ಪಾವತಿಮಾಡುವ ಹೊಸ ಪದ್ಧತಿಯ ಪ್ರಕಾರ ಸರ್ಕಾರಕ್ಕೆ ಜಮೆ ಕಟ್ಟಿದ ಹಣ, ಇತ್ಯಾದಿ ಹೊಂದಾಣಿಕೆಗಳಿಂದಲೇ ಮುಖ್ಯವಾಗಿ ಹೆಚ್ಚಳ ಬಂದಿರುವುದಾಗಿದೆ. ಆದರೆ ಕೇಂದ್ರ ಪುರಸ್ಕೃತ ಯೋಜನಾ ಕಾರ್ಯಗಳಿಗೆ ನಿರೀಕ್ಷಿತವಾದ ಬೃಹತ್ ಪ್ರಮಾಣದ ನೆರವು ಬಾರದಿದ್ದ ಕಾರಣ, ಕೇಂದ್ರದಿಂದ ಬರುವ ಸಹಾಯಾನುದಾನದಲ್ಲಿ ಉಂಟಾದ 7·30 ಕೋಟಿ ರೂಪಾಯಿ; ಒಕ್ಕೂಟದ ಉತ್ಪಾದನ ಶುಲ್ಕಗಳ ಪೈಕಿ ರಾಜ್ಯದ ಅಂಶದಲ್ಲಿ ಬಂದ ಹಣ ಕಡಮೆಯಾಗಿರುವುದರಿಂದ 0·53 ಕೋಟಿ ರೂಪಾಯಿ; ನೀರಾವರಿ, ನೌಕಾಸಂಚಾರ, ಒಡ್ಡು ಹಾಕುವುದು ಮತ್ತು ಚರಂಡಿ ಕಾಮಗಾರಿ (ವಾಣಿಜ್ಯ) ಎಂಬುದರ ಕೆಳಗೆ ನೀರು ಸರದಿ ಮತ್ತು ಅಭಿವೃದ್ಧಿ ಶುಲ್ಕದ ವಸೂಲಿಯಾಗದುದರಿಂದ ಆ ಬಾಬಿನ ಕೆಳಗೆ 1·28 ಕೋಟಿ ರೂಪಾಯಿ; ನೆರೆ ಹೊರೆಯ ರಾಜ್ಯಗಳಿಗೆ ವಿದ್ಯುಚ್ಛಕ್ತಿಯನ್ನು ಕಡಮೆ ಬೆಲೆಗೆ ಮಾರಾಟ ಮಾಡಿದುದರಿಂದ 'ವಿದ್ಯುಚ್ಛಕ್ತಿ ಯೋಜನೆಗಳು' ಎಂಬುದರ ಕೆಳಗೆ 2·80 ಕೋಟಿ ರೂಪಾಯಿ; ಖನಿಜಾಭಿವೃದ್ಧಿ ಮಂಡಲಿಯ ಮತ್ತು ಪಿಂಗಾಣಿ ಕಾರ್ಖಾನೆಗಳ ವ್ಯವಹಾರಗಳನ್ನು ಸ್ವಲ್ಪಮಟ್ಟಿಗೆ ಅಥವಾ ಪೂರ್ತಿಯಾಗಿ ಹೊಸ ಕಂಪೆನಿಗಳು ವಹಿಸಿಕೊಂಡಿರುವುದರಿಂದ ಆ ಮಂಡಲಿಯಿಂದ ಮತ್ತು ಕಾರ್ಖಾನೆಯಿಂದ ಬಂದ ಹಣ ಕಡಮೆಯಾದುದರಿಂದ 'ಉದ್ಯಮಗಳು' ಎಂಬುದರ ಕೆಳಗೆ 3·74 ಕೋಟಿ ರೂಪಾಯಿ ಕೊರತೆಯುಂಟಾದ ಕಾರಣ, ಈ ಹೆಚ್ಚಳಗಳು ಅಲ್ಲಲ್ಲಿಗೆ ಸರಿಹೋಗಿ ಏನು ಉಳಿಯದಂತಾಗಿದೆ. ಉಳಿದ ವ್ಯತ್ಯಾಸಗಳು ಹಲವಾರು ಶೀರ್ಷಿಕೆಗಳಲ್ಲಿ ಹರಡಿಕೊಂಡಿವೆ. ಅವುಗಳ ವಿಚಾರದಲ್ಲಿ ಹೆಚ್ಚಾಗಿ ಹೇಳಬೇಕಾದುದೇನೂ ಇಲ್ಲ.

ರಾಜಸ್ವದಿಂದ ಮಾಡಲಾಗುವ ವ್ಯಯವು ಆಯವ್ಯಯ ಪತ್ರದಲ್ಲಿ ಅವಕಾಶ ಮಾಡಿದುದಕ್ಕಿಂತ 11.25 ಕೋಟಿ ರೂಪಾಯಿ ಕಡಿಮೆಯಾಗುವ ನಿರೀಕ್ಷೆಯಿದೆ; ಉಳಿತಾಯಗಳು ಮುಖ್ಯವಾಗಿ ಈ ಕೆಳಗಿನ ಬಾಬುಗಳಲ್ಲಿ ಕಂಡುಬರುತ್ತವೆ:—

'ಭೂ ಕಂದಾಯ'—0·45 ಕೋಟಿ ರೂಪಾಯಿ; ಸಾಲದ ಮೇಲಣ ಬಡ್ಡಿ ಮತ್ತು ಇತರ ಬಾಧ್ಯತೆಗಳು—0.60 ಕೋಟಿ ರೂಪಾಯಿ; 'ಪೋಲೀಸ್' 0·56 ಕೋಟಿ ರೂಪಾಯಿ; 'ಸರಬರಾಜುಗಳು ಮತ್ತು ವಿಲೇವಾರಿಗಳು'—0·52 ಕೋಟಿ ರೂಪಾಯಿ; 'ವಿದ್ಯಾಭ್ಯಾಸ'—1·48 ಕೋಟಿ ರೂಪಾಯಿ; 'ವೈದ್ಯಕೀಯ'—0·36 ಕೋಟಿ ರೂಪಾಯಿ; 'ಜನಾರೋಗ್ಯ ರಕ್ಷಣೆ'—0·38 ಕೋಟಿ ರೂಪಾಯಿ; 'ವ್ಯವಸಾಯ'—1·52 ಕೋಟಿ ರೂಪಾಯಿ; 'ಉದ್ಯಮಗಳು'—1·70 ಕೋಟಿ ರೂಪಾಯಿ, 'ಸಾಮುದಾಯಿಕ ಅಭಿವೃದ್ಧಿ ಕಾರ್ಯಕ್ರಮ ಮತ್ತು ರಾಷ್ಟ್ರೀಯ ವಿಸ್ತರಣ ಸೇವೆ'—1·11 ಕೋಟಿ ರೂಪಾಯಿ; 'ಕಾರ್ಮಿಕ ಮತ್ತು ಉದ್ಯೋಗ'—0·57 ಕೋಟಿ ರೂಪಾಯಿ; 'ನೀರಾವರಿ ನೌಕಾ ಸಂಚಾರ, ಒಡ್ಡು ಹಾಕುವುದು, ಚರಂಡಿ ಕಾಮಗಾರಿಗಳು (ವಾಣಿಜ್ಯೇತರ) 0·62 ಕೋಟಿ ರೂಪಾಯಿ; 'ಲೋಕೋಪಯೋಗಿ ಕಾಮಗಾರಿಗಳು'—0·79 ಕೋಟಿ ರೂಪಾಯಿ; 'ವಿಶ್ರಾಂತಿ ವೇತನ ಮತ್ತು ಇತರ ವಿಶ್ರಾಂತಿ ಸೌಕರ್ಯಗಳು'—0·27 ಕೋಟಿ ರೂಪಾಯಿ; 'ವಿವಿಧಬಾಬುಗಳು'—0·35 ಕೋಟಿ ರೂಪಾಯಿ. ಆದರೂ 'ಕ್ಷಾಮ ಪರಿಹಾರ'ದ ಕೆಳಗೆ 0·55 ಕೋಟಿ ರೂಪಾಯಿ; ಮತ್ತು 'ರಾಜ್ಯ ಉತ್ಪಾದನ ಶುಲ್ಕ'ದ ಕೆಳಗೆ 0·22 ಕೋಟಿ ರೂಪಾಯಿ ಹೆಚ್ಚಳ ಕಂಡುಬಂದಿತು. ಇತರ ಶೀರ್ಷಿಕೆಗಳಲ್ಲಿರುವ ವ್ಯತ್ಯಾಸಗಳು ಅಷ್ಟೊಂದು ಮುಖ್ಯವಾದುವಲ್ಲ. ಭೂ ಕಂದಾಯ, ಪೋಲೀಸ್ ಮತ್ತು ವಿವಿಧ ಬಾಬುಗಳು, ಇವುಗಳಂಥ ಅಭಿವೃದ್ಧಿ ಕಾರ್ಯ ಸಂಬಂಧವಾದವುಗಳಲ್ಲದ ಶೀರ್ಷಿಕೆಗಳಲ್ಲಿ ಕಂಡುಬರುವ ಉಳಿತಾಯಗಳಿಗೆ ಮಿತವ್ಯಯ ಸಾಧನೆಗಾಗಿ ಕೈಕೊಂಡ ಏರ್ಪಾಡುಗಳೇ ಮುಖ್ಯ ಕಾರಣ. ವಿದ್ಯಾಭ್ಯಾಸ, ವೈದ್ಯಕೀಯ, ಜನಾರೋಗ್ಯ ರಕ್ಷಣೆ, ಸಾಮುದಾಯಿಕ ಅಭಿವೃದ್ಧಿ ಯೋಜನೆ ಹಾಗೂ ರಾಷ್ಟ್ರೀಯ ವಿಸ್ತರಣ ಸೇವೆ, ವ್ಯವಸಾಯ ಮತ್ತು ನೀರಾವರಿ, ನೌಕಾ ಸಂಚಾರ, ಒಡ್ಡು ಹಾಕುವುದು ಮತ್ತು ಚರಂಡಿ ಕಾಮಗಾರಿ ಇವೇ ಮೊದಲಾದ ಅಭಿವೃದ್ಧಿ ಕಾರ್ಯಗಳ ಶೀರ್ಷಿಕೆಗಳಲ್ಲಿ ಕಂಡುಬರುವ ಉಳಿತಾಯಕ್ಕೆ ಯೋಜನಾ ಗರಿಷ್ಠ ಪರಿಮಿತಿಯ ಬೃಹತ್ ಪ್ರಮಾಣದ ಕೇಂದ್ರ ಸಹಾಯ ಬಾರದ ಕಾರಣ ಕೇಂದ್ರ ಪುರಸ್ಕೃತ ಯೋಜನೆಗಳ ಬಾಬಿನಲ್ಲಿ ಉಂಟಾದ ಉಳಿತಾಯದ ನಡುವಣ ಮರುಹೊಂದಾವಣೆಯೇ ಮುಖ್ಯ ಕಾರಣ; ಆದುದರಿಂದ ವ್ಯಯವನ್ನು ತಗ್ಗಿಸಲಾಗಿದ್ದಿತು. ಉದ್ಯಮಗಳ ಸಂಬಂಧವಾಗಿ ಕಂಡುಬಂದ ಇಳಿತಗಳಿಗೆ ಹಿಂದೆ ಸೂಚಿತವಾದ ಕಂಪೆನಿಗಳ ರಚನೆಯೇ ಕಾರಣ.

ಪ್ರಸಕ್ತ ವರ್ಷದ ಪ್ರಾರಂಭದಲ್ಲಿ—2·95 ಕೋಟಿ ರೂಪಾಯಿ ನಗದು ಶಿಲ್ಕು, ಅರ್ಥೋಪಾಯ ಅಗ್ರಿಮಧನವೂ ಮತ್ತು ಭಾರತದ ರಿಜರ್ವ್ ಬ್ಯಾಂಕಿನಿಂದ ಪಡೆದುಕೊಂಡ 11·80 ಕೋಟಿ ರೂಪಾಯಿ

ಓವರ್ ಡ್ರಾಫ್ಟ್ ಹಣವೂ ಇದ್ದವು. ವರ್ಷದ ವಹಿವಾಟುಗಳಿಂದ ಒಟ್ಟು 9·84 ಕೋಟಿ ರೂಪಾಯಿ ಕೊರತೆಯುಂಟಾಗುವ ನಿರೀಕ್ಷೆ ಇದೆ. ಒಟ್ಟು 91·33 ಕೋಟಿ ರೂಪಾಯಿ ಹಣ ವ್ಯಯವಾಗುವುದು. ಈ ವ್ಯಯವು 40·18 ಕೋಟಿಯಷ್ಟು ಬಂಡವಾಳ ವ್ಯಯ, ಪ್ರಸಕ್ತ ವರ್ಷದಲ್ಲಿ ಭಾರತದ ರಿಜರ್ವ್ ಬ್ಯಾಂಕಿಗೆ ಓವರಡ್ರಾಫ್ಟ ಹಣದ ಮರುಸಂದಾಯದ ನಿಮಿತ್ತವಾಗಿ ಸಲ್ಲಿಸತಕ್ಕ 11·40 ಕೋಟಿ ರೂಪಾಯಿ ಸಹಿತವಾಗಿ ಸಾಲದ ಮರುಸಂದಾಯ ಸಂಬಂಧವಾಗಿ 40·04 ಕೋಟಿ ರೂಪಾಯಿ, ಅಂತರ ರಾಜ್ಯ ಋಣದ ಮರು ಸಂದಾಯದ ನಿಮಿತ್ತವಾಗಿ 1·91 ಕೋಟಿ ರೂಪಾಯಿ ಮತ್ತು 'ಸಾಲಗಳು ಮತ್ತು ಮುಂಗಡಗಳು' ಎಂಬುದರ ಕೆಳಗೆ 8·71 ಕೋಟಿ ರೂಪಾಯಿಯಷ್ಟು ನಿವ್ವಳ ವೆಚ್ಚ—ಇವುಗಳಿಂದ ಕೂಡಿದೆ. 81 ಕೋಟಿ ರೂಪಾಯಿ ಒಟ್ಟು ಜಮೆ, 10·86 ಕೋಟಿ ರೂಪಾಯಿ ರಾಜಸ್ವದ ಹೆಚ್ಚಳ, ಸಾದಿಲ್ವಾರು ನಿಧಿಗೆ ತುಂಬುವ 2·15 ಕೋಟಿ ರೂಪಾಯಿ, ಸಾರ್ವಜನಿಕರಿಂದ ಸಾಲ ಕೊಳ್ಳುವ 6·55 ಕೋಟಿ ರೂಪಾಯಿ, ಕೇಂದ್ರದಿಂದ ಸಾಲವಾಗಿ ಪಡೆಯುವ 44·69 ಕೋಟಿ ರೂಪಾಯಿ, ಇತರ ಸಾಲಗಳಿಂದ 2·20 ಕೋಟಿ ರೂಪಾಯಿ, ಅನಿಯಮಿತ ಋಣದ ಕೆಳಗಿನ ನಿವ್ವಳ ಜಮೆಯಿಂದ 1·70 ಕೋಟಿ ರೂಪಾಯಿ ಮತ್ತು 'ಸಾಲ ಮತ್ತು ಠೇವಣಿ' ಶೀರ್ಷಿಕೆಗಳಿಂದ 12·85 ಕೋಟಿ ರೂಪಾಯಿ—ಇವುಗಳಿಂದ ಈ ವ್ಯಯವನ್ನು ಸ್ವಲ್ಪಮಟ್ಟಿಗೆ ತುಂಬಿಕೊಳ್ಳಲಾಗುವುದು. ಆದರೆ ಕೇಂದ್ರದಿಂದ ಬರುವ 11·4 ಕೋಟಿ ರೂಪಾಯಿ ತದರ್ಥ ಋಣವನ್ನು ಲೆಕ್ಕಕ್ಕೆ ತೆಗೆದುಕೊಂಡ ಮೇಲೆ 9·84 ಕೋಟಿ ರೂಪಾಯಿ ಒಟ್ಟು ಕೊರತೆ ಉಳಿಯುವುದು. ಇದರಿಂದ ಪ್ರಾರಂಭದಲ್ಲಿದ್ದ —2·95 ಕೋಟಿ ರೂಪಾಯಿ ನಗದು ಶಿಲ್ಕು ಮತ್ತಷ್ಟು ಕಡಮೆಯಾಗಿ ಪ್ರಸಕ್ತ ವರ್ಷದ ಅಂತ್ಯಕ್ಕೆ —12·79 ಕೋಟಿ ರೂಪಾಯಿಗಿಳಿಯುವುದು. ಇದರಲ್ಲಿ 3·95 ಕೋಟಿ ರೂಪಾಯಿ ಹಣವನ್ನು ಸಾಲಪತ್ರಗಳಿಂದಲೂ ವಾಡಿಕೆಯ ಅರ್ಥೋಪಾಯ ಅಗ್ರಿಮಧನದಿಂದಲೂ ತುಂಬಲಾಗುವುದು. ಆಧಾರವನ್ನೊದಗಿಸದ ಉಳಿದ ಸುಮಾರು 9 ಕೋಟಿ ರೂಪಾಯಿಯನ್ನು ಕೇಂದ್ರದಿಂದ ಇನ್ನೊಂದು ತದರ್ಥ ಋಣವನ್ನು ಪಡೆದು ತೀರಿಸಬೇಕಾಗುವುದು. ಯೋಜನಾ ಆಯೋಗದವರು ಪ್ರಸಕ್ತ ವರ್ಷದ ಸಂಪತ್ತಿ ಮೂಲಗಳನ್ನು ನಿರ್ಧರಿಸುವ ಕಾಲಕ್ಕೆ 60·25 ಕೋಟಿ ರೂಪಾಯಿಯ ಯೋಜನಾ ಕಾರ್ಯಕ್ರಮವನ್ನು ಈಡೇರಿಸಲು 15 ಕೋಟಿ ರೂಪಾಯಿಯಷ್ಟು ಓವರ ಡ್ರಾಫ್ಟ್ ಬೇಕಾಗುವುದೆಂದು ನಿರೀಕ್ಷಿಸಲಾಗಿತ್ತು. ಯೋಜನಾ ಪ್ರಮಾಣವನ್ನು ತೀವ್ರವಾಗಿ ತಗ್ಗಿಸಬೇಕೆಂದು ಆ ಕಾಲದಲ್ಲಿ ಸೂಚಿಸಲಾಗಿತ್ತು. ತತ್ಪೂರ್ವದ ವರ್ಷಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಅಸಮತೆ ಹೆಚ್ಚಾಗಿದ್ದ ಕಾರಣ, ಮತ್ತು ರಾಜ್ಯದ ಬಹುಭಾಗದಲ್ಲಿ ಸದಾ ಅಭಾವ ಪರಿಸ್ಥಿತಿ ಇದ್ದ ಕಾರಣ ರಾಜ್ಯ ಸರಕಾರದವರು, ಯೋಜನಾ ಆಯೋಗದವರ ಸೂಚನೆಗೆ ಸಮ್ಮತಿ ನೀಡಿರಲಿಲ್ಲ. ಪಾನ ನಿರೋಧವನ್ನು ಶಿಥಿಲಗೊಳಿಸಿದ ಶಾಸನವು ಕಾರ್ಯರೂಪಕ್ಕೆ ಬರಲು ವಿಳಂಬವಾದುದರಿಂದ ಉತ್ಪಾದನ ಶುಲ್ಕದ (ಅಬ್ಕಾರಿ) ಮೇರೆಗೆ ಬರತಕ್ಕ ಹಣ ಕಡಿಮೆಯಾದುದರಿಂದಲೂ ನೀರು ಸರದಿಯ ವಸೂಲಿಯು ಕಡಮೆಯಾದ ಕಾರಣದಿಂದಲೂ ಆಹಾರೋತ್ಪಾದನ ಕಾರ್ಯಕಲಾಪಗಳಿಗಾಗಿ ಸಹಕಾರಿ ಸಂಸ್ಥೆಗಳಿಗೆ ಅಂಶದಾನ ನೀಡಿದ ಕಾರಣದಿಂದಲೂ, ಹಲವಾರು ಉದ್ಯಮ ಸಂಸ್ಥೆಗಳಿಗೆ ಸಾಲಕೊಟ್ಟುದರಿಂದಲೂ, ಮಂಗಳೂರು, ಶಿವಮೊಗ್ಗ ಕೋಲಾರ ಮೊದಲಾದ ಸ್ಥಳಗಳಲ್ಲಿ ವಾಹನ ಮಾರ್ಗಗಳ ರಾಷ್ಟ್ರೀಕರಣ ನಿಮಿತ್ತ ನಿರೀಕ್ಷಿತವಾದ 1 ಕೋಟಿ ರೂಪಾಯಿ ವೆಚ್ಚದಿಂದಲೂ ಕೊರತೆಯು ಮತ್ತಷ್ಟು ಹೆಚ್ಚಿತು. ಮಿತವ್ಯಯ ಸಾಧಿಸುವುದಕ್ಕಾಗಿ ಕೈಕೊಂಡ ಏರ್ಪಾಡುಗಳಿಂದಾಗಿ ಸಾಕಷ್ಟು ಉಳಿತಾಯ ಲಭಿಸಿದೆ. ಆದರೆ ಮೇಲೆ ಹೇಳಿದ ಮತ್ತು ಇತರ ಬಾಬುಗಳ ವೆಚ್ಚಗಳು ಹೆಚ್ಚಾದುದರಿಂದ ಮತ್ತು ಬೆಲೆ ಹೆಚ್ಚಳದಿಂದಾಗಿ ನಾನಾ ಇಲಾಖೆಗಳಲ್ಲಿ ವೆಚ್ಚ ಹೆಚ್ಚಿದ ಕಾರಣ, ಆ ಉಳಿತಾಯವೆಲ್ಲ ಅಲ್ಲಲ್ಲಿಗೆ ಸರಿಹೋಯಿತು. ಆದುದರಿಂದ ನಾನು ಅನ್ಯತ್ರ ಸೂಚಿಸಿದಂತೆ, ಮುಂದೆ ಕೆಲಕಾಲದವರೆಗಾದರೂ ನಾವು ಓವರ್‌ಡ್ರಾಫ್ಟ್‌ಗಳನ್ನು ಅವಲಂಬಿಸದೆ ಅನ್ಯಮಾರ್ಗವಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ.

ಈ ವರ್ಷ 35·89 ಕೋಟಿ ರೂಪಾಯಿ ಬಂಡವಾಳ ವ್ಯಯ ಬರುವುದೆಂದು ಆಯವ್ಯಯ ಪತ್ರದಲ್ಲಿ ಅಂದಾಜು ಮಾಡಲಾಗಿತ್ತು. ಆದರೆ ವಾಸ್ತವವಾಗಿ ಸಂಭವಿಸಿದ ಬಂಡವಾಳ ವ್ಯಯ 40·18 ಕೋಟಿ ರೂಪಾಯಿ. ಮೈಸೂರು ರಾಜ್ಯದ ರಸ್ತೆ ಸಾರಿಗೆ ನಿಗಮಕ್ಕೆ ವರ್ಗಾಯಿಸಿದ ಜಮೀನಿನ ಮೌಲ್ಯ ನಿಮಿತ್ತವಾಗಿ ಉದ್ಯಮಾಭಿವೃದ್ಧಿಗೆಂದು ವಹಿಸಿದ ಬಂಡವಾಳ ವ್ಯಯ ಪ್ರಮಾಣದಲ್ಲಿ 1·54 ಕೋಟಿ ರೂಪಾಯಿ, ಆಯವ್ಯಯ ಪತ್ರವನ್ನು ಮಂಡಿಸಿದ ತರುವಾಯ ಯೋಜನಾವ್ಯಯ ಪ್ರಮಾಣದ ಮರುಹೊಂದಾಣಿಕೆ ಮಾಡಿದ ಕಾರಣ ನೀರಾವರಿ ಮತ್ತು ನೌಕಾ ಸಂಚಾರದ (ವಾಣಿಜ್ಯ) ಸಂಬಂಧವಾಗಿ ಬಂಡವಾಳ ವ್ಯಯ ಪ್ರಮಾಣದಲ್ಲಿ 3·73 ಕೋಟಿ ರೂಪಾಯಿ, 'ಜನಾರೋಗ್ಯ ಸುಧಾರಣೆ' ಎಂಬುದರ ಕೆಳಗೆ 'ಲೋಕೋಪಯೋಗಿ ಕಾಮಗಾರಿಗಳು' ಎಂಬುದರ ಕೆಳಗಿನ ಕೊರತೆಗಳಿಂದ ಸರಿದೂಗಿಸಲಾದ 0 19 ಕೋಟಿ ರೂಪಾಯಿ, ವಿದ್ಯುಚ್ಛಕ್ತಿ ಯೋಜನೆಗಳಿಗೆ 0·51 ಕೋಟಿ ರೂಪಾಯಿ, ಬಂದರುಗಳ ಸಲುವಾಗಿ 0·12 ಕೋಟಿ ರೂಪಾಯಿ,

ನೀರಾವರಿ ಮತ್ತು ನೌಕಾಸಂಚಾರ (ವಾಣಿಜ್ಯ) 0·14 ಕೋಟಿ ರೂಪಾಯಿ, ಭೂ ಧಾರಕರಿಗೆ ಪರಿಹಾರ ದ್ರವ್ಯಕ್ಕಾಗಿ 0·08 ಕೋಟಿ ರೂಪಾಯಿ ಹೆಚ್ಚಿದುದರಿಂದಲೂ ಬೇರೆ ಶೀರ್ಷಿಕೆಗಳಲ್ಲಿ ಚಿಕ್ಕ ಪುಟ್ಟ ವ್ಯತ್ಯಾಸಗಳಾದುದರಿಂದಲೂ ಬಂಡವಾಳ ವ್ಯಯ ಪ್ರಮಾಣದಲ್ಲಿ 4·29 ಕೋಟಿ ರೂಪಾಯಿ ಹೆಚ್ಚಾಗಿದೆ.

ಸರ್ಕಾರದವರು ದಿನಾಂಕ 11ನೇ ಜುಲೈ 1967ರ ಆದೇಶದಲ್ಲಿ 2·65 ಕೋಟಿ ರೂಪಾಯಿಯ ವರೆಗೆ ಮಿತವ್ಯಯಾರ್ಥವಾಗಿ ವೆಚ್ಚದ ಕಡಿತವನ್ನು ಸೂಚಿಸಿದ್ದುದು ಸಭೆಗೆ ತಿಳಿದಿದೆಯಷ್ಟೆ. ಪರಿಷ್ಕೃತ ಅಂದಾಜುಗಳಲ್ಲಿ ಕಂಡುಬರುವ ಇಳಿತಗಳಿಗೆ ಕಾರಣಗಳನ್ನು ಕೊಡುವಾಗ ನಿರೀಕ್ಷಿತವಾದ ಈ ಕಡಿತದ ಬಹುಭಾಗವು ಈ ಅಂದಾಜುಗಳಲ್ಲಿ ವ್ಯಕ್ತವಾಗಿದೆಯೆಂದು ಈಗಾಗಲೆ ಹೇಳಿದ್ದೇನಷ್ಟೆ. ಕೇವಲ ಅಸಾಧಾರಣ ಸಂದರ್ಭಗಳಲ್ಲಿ ಹೊರತು ಹುದ್ದೆಗಳನ್ನು ತುಂಬಲು ಸರ್ಕಾರದವರು ಅನುಮತಿ ನಿರಾಕರಿಸಿದ್ದರು. ಇದರಿಂದ ಅನೇಕ ಹುದ್ದೆಗಳನ್ನು ತುಂಬಡೆ ತಡೆಹಿಡಿಯಲಾಗಿತ್ತು. ಕಾಮಗಾರಿ ಮತ್ತು ಇತರ ಸಂಬಂಧವಾದ ವ್ಯಯವನ್ನೂ ತಗ್ಗಿಸಲಾಗಿತ್ತು. ಅಲ್ಲದೆ ಆಡಳಿತ ಸಂಬಂಧವಾದ ವ್ಯಯ ಅನವಶ್ಯವಾಗಿ ಬೆಳೆಯದಂತೆಯೂ ನಾನು ಎಚ್ಚರವಹಿಸಿದ್ದೇನೆ. ನಾನಾ ಇಲಾಖೆಗಳಲ್ಲಿ ಸೂಕ್ತ ಕಾರ್ಯ ಪ್ರಮಾಣವನ್ನು ಗೊತ್ತುಪಡಿಸಿ ಸಿಬ್ಬಂದಿ ಪ್ರಮಾಣವನ್ನು ವ್ಯವಸ್ಥಿತ ಗೊಳಿಸುವ ವಿಚಾರವನ್ನು ವೇತನಾಯೋಗದವರು ಪರಿಶೀಲಿಸುತ್ತಿದ್ದಾರೆ. ಜನೋಪಯುಕ್ತತೆಯನ್ನೂ ಮಿತವ್ಯಯವನ್ನೂ ಗಮನದಲ್ಲಿಟ್ಟುಕೊಂಡು ಲೋಕೋಪಯೋಗಿ ಕಾಮಕಾರಿಗಳ ನಿರ್ಮಿತವಾದ ವ್ಯಯವನ್ನು ತಗ್ಗಿಸುವ ಶಕ್ಯತೆಯನ್ನೂ ಆಯೋಗದವರು ಪರಿಶೀಲಿಸುವರೆಂದು ಹಾರೈಸುತ್ತೇನೆ. ದಕ್ಷತೆಗೆ ಭಂಗಬಾರದಂತೆ ಸರ್ಕಾರಿ ವ್ಯಯದಲ್ಲಿ ಗಮನಾರ್ಹವಾದ ಮಿತವ್ಯಯೋಪಾಯವನ್ನು ಸೂಚಿಸುವರೆಂದು ಆಶಿಸುತ್ತೇನೆ. ಈ ನಡುವೆ ವೆಚ್ಚವನ್ನು ಹಿಡಿತದಲ್ಲಿಟ್ಟುಕೊಳ್ಳಲು ಸಾಧ್ಯವಿದ್ದ ಎಲ್ಲ ಏರ್ಪಾಡುಗಳನ್ನು ಸರ್ಕಾರದವರು ಕೈಕೊಳ್ಳುವರು.

ಆಯವ್ಯಯ ಪತ್ರ 1968-69

ಈಗಿನ ತೆರಿಗೆಯ ವ್ಯವಸ್ಥೆಯಲ್ಲಿ ಮುಂದಿನ ವರ್ಷ 194·74 ಕೋಟಿ ರೂಪಾಯಿ ಆದಾಯ ಬರುವುದೆಂದೂ ರಾಜಸ್ವ ಲೆಕ್ಕದಲ್ಲಿ 182·76 ಕೋಟಿ ರೂಪಾಯಿ ವೆಚ್ಚವಾಗುವುದೆಂದೂ, ಇದರಿಂದ 11·98 ಕೋಟಿ ರೂಪಾಯಿ ಉಳಿತಾಯವಾದೀತೆಂದೂ ನಿರೀಕ್ಷಿಸಲಾಗಿದೆ.

ತೆರಿಗೆ ವಸೂಲಿ ವ್ಯವಸ್ಥೆಯನ್ನು ಬಲಪಡಿಸುವುದರಿಂದ ತೆರಿಗೆಯ ವಸೂಲಿಯೂ ಬಾಕಿ ನಿಂತ ತೆರಿಗೆ ವಸೂಲಿಯೂ ಉತ್ತಮಗೊಳ್ಳುವುದೆಂದು ರಾಜಸ್ವದ ಅಂದಾಜುಗಳಿಂದ ತಿಳಿದುಬರುವುದು. ಭೂ ಕಂದಾಯ, ರಾಜ್ಯದ ಉತ್ಪಾದನಾ ಶುಲ್ಕ (ಅಬ್ಕಾರಿ), ಮಾರಾಟ ತೆರಿಗೆ, ವಾಹನ ತೆರಿಗೆ, ಇತರ ತೆರಿಗೆ ಮತ್ತು ಶುಲ್ಕಗಳು, ಮುದ್ರಾಂಕ, ವಿದ್ಯಾಭ್ಯಾಸ, ಜನಾರೋಗ್ಯ ರಕ್ಷಣೆ, ಪಶು ಸಂಗೋಪನೆ ಉದ್ಯಮಗಳು (ವಾಣಿಜ್ಯ ಮತ್ತು ವಾಣಿಜ್ಯೇತರ) ನೀರಾವರಿ, ವಿದ್ಯುಚ್ಛಕ್ತಿ ಕಾರ್ಯಗಳು ಮತ್ತು ಅರಣ್ಯಗಳು ಇವೆಲ್ಲವೂ ಮುಂದಿನ ವರ್ಷ ಹೆಚ್ಚಿನ ಆದಾಯ ತರುವ ನಿರೀಕ್ಷೆಯಿದೆ. ಈಗಿನ ರಾಜಸ್ವ ಶೀರ್ಷಿಕೆಗಳ ಕೆಳಗೆ ಬರುವ ಹುಟ್ಟುವಳಿಯನ್ನು ಹೆಚ್ಚಿಸುವ ವಿಚಾರವನ್ನು ಸಾವಧಾನವಾಗಿ ಪರಿಶೀಲಿಸಲಾಗುತ್ತಿದೆ. ಮಾರಾಟ ತೆರಿಗೆಯು ರಾಜ್ಯಾದಾಯದ ಬೃಹತ್ತಮ ಮೂಲವಾಗಿದೆ. ಈ ತೆರಿಗೆಯನ್ನು ವಸೂಲು ಮಾಡುವ ಇಲಾಖೆಯೆಂದರೆ ವಾಣಿಜ್ಯ ತೆರಿಗೆ ಇಲಾಖೆ. ವ್ಯಾಪಾರಿಗಳು ತೆರಿಗೆ ತಪ್ಪಿಸಿಕೊಳ್ಳುವುದನ್ನು ತಡೆಯುವುದಕ್ಕೂ ಮತ್ತು ಬಾಕಿ ನಿಂತ ತೆರಿಗೆಯನ್ನು ವಸೂಲು ಮಾಡುವುದಕ್ಕೂ ಈ ಇಲಾಖೆಯನ್ನು ಬಲಪಡಿಸಲಾಯಿತು. ಮುಂದಿನ ವರ್ಷ ಮಾರಾಟ ತೆರಿಗೆಯಿಂದ 32·1 ಕೋಟಿ ರೂಪಾಯಿ ಬರುವ ನಿರೀಕ್ಷೆಯಿದೆ. ವ್ಯಾಪಾರದ ಮೊತ್ತವು ಹೆಚ್ಚಿದ ಪಕ್ಷದಲ್ಲಿ ಮಾರಾಟ ತೆರಿಗೆಯಿಂದ ಬರುವ ಆದಾಯವೂ ಹೆಚ್ಚಬಹುದಾಗಿದೆ. ರಾಜ್ಯ ವಿದ್ಯುಚ್ಛಕ್ತಿ ಮಂಡಲಿಗೆ ಶರಾವತೀ ಮತ್ತು ಭದ್ರಾ ಯೋಜನೆಗಳಿಂದ ವಿದ್ಯುಚ್ಛಕ್ತಿಯನ್ನು ಮಾರಾಟಮಾಡಿ ಬಂದ 8·53 ಕೋಟಿ ರೂಪಾಯಿಯನ್ನು ಆಯವ್ಯಯ ಪತ್ರದಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ.

ಮುಂದಿನ ವರ್ಷದ ರಾಜಸ್ವ ವ್ಯಯವು ಪ್ರಸಕ್ತ ವರ್ಷದ ಪರಿಷ್ಕೃತ ಅಂದಾಜು ವ್ಯಯಕ್ಕಿಂತ 18·12 ಕೋಟಿ ರೂಪಾಯಿ ಹೆಚ್ಚುವಂತೆ ಕಂಡುಬರುವುದು. ರಾಜಸ್ವದ ಅಂದಾಜುಗಳಲ್ಲಿ (ನಿವ್ವಳ) 15·10 ಕೋಟಿ ರೂಪಾಯಿಯಷ್ಟು ರಾಜ್ಯಯೋಜನಾವ್ಯಯವೂ ಕೇಂದ್ರ ಪುರಸ್ಕೃತ ಯೋಜನೆಗಳ ಸಂಬಂಧವಾದ (ನಿವ್ವಳ) 8·65 ಕೋಟಿ ರೂಪಾಯಿಯಷ್ಟು ವ್ಯಯ ಪ್ರಮಾಣವೂ ಸೇರಿವೆ. ವಿಶ್ವ ವಿದ್ಯಾನಿಲಯಗಳಿಗೆ ಅನುದಾನಗಳು, ಬಾಕಿನಿಂತ ಸಾಲಗಳ ಮೇಲಣ ಬಡ್ಡಿ, ಆಡಳಿತ ವ್ಯಯದಲ್ಲಿ ವಾಡಿಕೆಯಾಗಿ ಉಂಟಾಗುವ ಹೆಚ್ಚಳ—ಈ ಸಲುವಾಗಿ ಸೂಕ್ತ ಹಣ ವ್ಯವಸ್ಥೆಯನ್ನೂ ಮಾಡಲಾಗಿದೆ.

ಕೇಂದ್ರ ಪುರಸ್ಕೃತ ಯೋಜನೆಗಳ ಮೇಲಣ ವ್ಯಯವು ಕೇಂದ್ರ ಸಹಾಯದ ಪ್ರಮಾಣವನ್ನು ಅವಲಂಬಿಸಿರುವುದಾಗಿದೆ. ಈ ಹಿಂದೆ ವಾಸ್ತವವಾಗಿ ಬಂದ ಕೇಂದ್ರ ಸಹಾಯ ಪ್ರಮಾಣವನ್ನೂ ಸಾರ್ವಜನಿಕ ಲೆಕ್ಕಪತ್ರ ಸಮಿತಿಯವರು ಮಾಡಿದ ಟೀಕೆಗಳನ್ನೂ ಗಮನದಲ್ಲಿರಿಸಿ, ಈ ಯೋಜನೆಗಳಿಗೆ ಒದಗಿಸುವ ಹಣವನ್ನು ಸ್ವಲ್ಪ ಕಡಿಮೆ ಮಾಡಲಾಗಿದೆ. 'ಸಾಲವನ್ನು ತಗ್ಗಿಸುವ ಅಥವಾ ತಪ್ಪಿಸುವ ಸಲುವಾದ ಧನವಿನಿಯೋಗ' ಎಂಬ ಶೀರ್ಷಿಕೆಯಿಂದ 6·80 ಕೋಟಿ ರೂಪಾಯಿ ಹಣವನ್ನು ಹಿಂದಿನ ಎರಡು ವರ್ಷಗಳಲ್ಲಿ ಮಂಜೂರಾಗಿದ್ದ ತದರ್ಥ ಋಣದ ಮರುಸಂದಾಯಕ್ಕಾಗಿ ಬಳಸಲಾಗುವುದು. ಮತ್ತು ಉಳಿದ ಹಣವನ್ನು ಯೋಜನಾವ್ಯಯಕ್ಕೆ ಹಣವೊದಗಿಸುವ ಸಂಪತ್ತಿಮೂಲವೆಂದು ಪರಿಗಣಿಸಲಾಗುವುದು. 182.76 ಕೋಟಿ ರೂಪಾಯಿಯಲ್ಲಿ 4·97 ಕೋಟಿ ರೂಪಾಯಿಯು ತೆರಿಗೆ ವಸೂಲಿಗೂ 33·86 ಕೋಟಿ ರೂಪಾಯಿಯು ಸಾಲ ತೀರಿಕೆಗೂ (ಇದರಲ್ಲಿ ಕೇಂದ್ರವು ನೀಡಿದ ತದರ್ಥ ಋಣದ ಮರುಸಂದಾಯಕ್ಕಾಗಿ 6·80 ಕೋಟಿ ರೂಪಾಯಿ ಸೇರಿದೆ) 16·34 ಕೋಟಿ ರೂಪಾಯಿ ಆಡಳಿತ ವೆಚ್ಚಕ್ಕೆ, 83·35 ಕೋಟಿ ರೂಪಾಯಿ ಸಾಮಾಜಿಕ ಮತ್ತು ಅಭಿವೃದ್ಧಿ ಸೇವೆಗಳಿಗೂ (ಇದರಲ್ಲಿ 36·08 ರೂಪಾಯಿ ವಿದ್ಯಾಭ್ಯಾಸಕ್ಕೂ 12·28 ಕೋಟಿ ರೂಪಾಯಿ ವೈದ್ಯಕೀಯ ಮತ್ತು ಆರೋಗ್ಯಕ್ಕೂ ಹೋಗುವುದು), 26.02 ಕೋಟಿ ರೂಪಾಯಿ ಲೋಕೋಪಯೋಗಿ ಕಾಮಗಾರಿ, ವಿದ್ಯುಚ್ಛಕ್ತಿ ಮತ್ತು ನೀರಾವರಿಗೂ, 3·27 ಕೋಟಿ ರೂಪಾಯಿ ವಿಶ್ರಾಂತಿ ವೇತನ ಮತ್ತು ಇತರ ವಿಶ್ರಾಂತಿ ಸೌಕರ್ಯಗಳಿಗೂ ಮತ್ತು ರಾಜಧನ ಮತ್ತು ಪ್ರಾದೇಶಿಕ ಹಾಗೂ ರಾಜಕೀಯ ವಿಶ್ರಾಂತಿ ವೇತನಗಳಿಗೂ ಮತ್ತು 6·70 ಕೋಟಿ ರೂಪಾಯಿ ಅರಣ್ಯಗಳಿಗೂ ಹೋಗುವುದಾಗಿದೆ. 182·76 ಕೋಟಿ ರೂಪಾಯಿ ಒಟ್ಟು ರಾಜಸ್ವ ವ್ಯಯದ ಪೈಕಿ (ನಿವ್ವಳ) 23·75 ಕೋಟಿ ರೂಪಾಯಿಯು ಯೋಜನಾವ್ಯಯದ ಭಾಗವಾಗಿದೆ. ಇದರಲ್ಲಿ ಕೇಂದ್ರ ಪುರಸ್ಕೃತ ಯೋಜನೆಗಳ ವ್ಯಯವೂ ಸೇರುವುದು. ಇದರಿಂದ 159·01 ಕೋಟಿ ರೂಪಾಯಿ ಹಣವು ಯೋಜನೇತರ ಹಣವಾಗಿ ಉಳಿಯುವುದು.

ಬಂಡವಾಳ ವ್ಯಯ ಪ್ರಮಾಣಕ್ಕೆಂದು 38·61 ಕೋಟಿ ರೂಪಾಯಿಯನ್ನು ಸೇರಿಸಲಾಗಿದೆ. ಇದರಲ್ಲಿ 21·92 ಕೋಟಿ ರೂಪಾಯಿಯು ನೀರಾವರಿ ಮತ್ತು ವಿದ್ಯುಚ್ಛಕ್ತಿಗೂ, 8·49 ಕೋಟಿ ರೂಪಾಯಿ ರಸ್ತೆ ಮತ್ತು ಕಟ್ಟಡಗಳಿಗೂ, 7·61 ಕೋಟಿ ರೂಪಾಯಿಯು ಉದ್ಯಮಗಳಿಗೂ (ಇದರಲ್ಲಿ ಸಹಾಯ ಪೋಷಿತ ಸಂಸ್ಥೆಗಳ ಮತ್ತು ಸಹಕಾರಿ ಸಂಸ್ಥೆಗಳ ಷೇರು ಬಂಡವಾಳದಲ್ಲಿ ಮಾಡುವ ವಿನಿಯೋಗವು ಸೇರಿದೆ), 1·12 ಕೋಟಿ ರೂಪಾಯಿ ಹಣವು ಜನಾರೋಗ್ಯ ಸುಧಾರಣೆಗೂ ಹೋಗುವುದು. ಉಳಿದ ಹಣವು ಬಂದರುಗಳು, ಪರಿಹಾರ ದ್ರವ್ಯ ಮತ್ತು ಬೇರೆ ವಿವಿಧ ಬಾಬುಗಳಿಗೆ ವ್ಯಯವಾಗುವುದು. ಆಹಾರ ಪೂರೈಕೆಯ ಕಾರ್ಯಗಳಿಂದ ಬಂದ ಆದಾಯದಿಂದ ಈ ವ್ಯಯವನ್ನು ತುಂಬಿಕೊಳ್ಳಲಾಗುತ್ತದೆ. 38·61 ಕೋಟಿ ರೂಪಾಯಿಯಷ್ಟು ಒಟ್ಟು ಬಂಡವಾಳ ವ್ಯಯದಲ್ಲಿ 33·57 ಕೋಟಿ ರೂಪಾಯಿಯಷ್ಟು ವ್ಯಯ ಪ್ರಮಾಣವು ಕೇಂದ್ರ ಪುರಸ್ಕೃತ ಯೋಜನೆಗಳ ಸಹಿತವಾದ ಯೋಜನಾ ವ್ಯಯದ ಭಾಗವಾಗುವುದು. ಇದರಿಂದ ಯೋಜನೇತರ ವ್ಯಯಕ್ಕೆ 5·04 ಕೋಟಿ ರೂಪಾಯಿ ಉಳಿಯುವುದು. ಇದರಲ್ಲಿ ಮೈಸೂರು ವಿದ್ಯುಚ್ಛಕ್ತಿ ಮಂಡಲಿಯು ವಹಿಸಿದ 9.21 ಕೋಟಿ ರೂಪಾಯಿ ಬಂಡವಾಳ ವ್ಯಯವು ಸೇರುವುದಿಲ್ಲ. ಇದೂ ಸಹ ಯೋಜನಾವ್ಯಯದ ಭಾಗವಾಗುವುದು. ಲೋಕೋಪಯೋಗಿ ಇಲಾಖೆಯಲ್ಲಿ ಈಗಾಗಲೇ ಕೈಕೊಂಡಿರುವ ಚಿಕ್ಕಪುಟ್ಟ ಕಾಮಗಾರಿಗಳು ತ್ವರಿತವಾಗಿ ಮುಗಿಯುವಂತೆ, ಆಯವ್ಯಯ ಪತ್ರದಲ್ಲಿ ಈ ಕಾಮಗಾರಿಗಳಿಗೂ ಸಾಕಷ್ಟು ಹಣ ಒದಗಿಸಲಾಗಿದೆ. 'ಸಂಪರ್ಕ ಸಾಧನಗಳು' ಎಂಬ ಶೀರ್ಷಿಕೆಯ ಕೆಳಗೆ ಈಗ ನಡೆಯುತ್ತಿರುವ ಎಲ್ಲ ಕಾಮಗಾರಿಗಳಿಗೂ 'ಆರ್ಥಿಕ ಮಹತ್ವದ ರಸ್ತೆಗಳ' ಸಂಬಂಧವಾದ ಕಾರ್ಯಗಳಿಗೂ ಸಾಕಷ್ಟು ಹಣ ಒದಗಿಸಲಾಗಿದೆ; ಮತ್ತು ಹೊಸ ಕಾಮಗಾರಿಗಳಿಗೂ ಹಣ ಒದಗಿಸಲಾಗಿದೆ. 'ಕಟ್ಟಡಗಳು' ಎಂಬುದರ ಕೆಳಗೆ ಆಯಾ ಇಲಾಖೆಗಳ ಯೋಜನಾ ಕಾರ್ಯಗಳಿಗೆ ಸಂಬಂಧಪಟ್ಟ ಕಾಮಗಾರಿಗಳ ಸಲುವಾಗಿ ಹಣ ಒದಗಿಸಲಾಗಿದೆ. ಯೋಜನೇತರ ರಂಗದಲ್ಲಿ ಸರ್ಕಾರಿ ನೌಕರರಿಗೆ ಮನೆ ಕಟ್ಟಿಸಿಕೊಡುವ ಸಲುವಾಗಿ 0·20 ಕೋಟಿ ರೂಪಾಯಿ, ಬಾಡಿಗೆ ಮನೆ ಕಟ್ಟಿಸುವುದಕ್ಕಾಗಿ 0·20 ಕೋಟಿ ರೂಪಾಯಿ, ಮೈಸೂರು ಭವನದ ಸಲುವಾಗಿ 0·01 ಕೋಟಿ ರೂಪಾಯಿ, ಕೋರ್ಟು ಕಟ್ಟಡಗಳಿಗೆ 0·17 ಕೋಟಿ ರೂಪಾಯಿ, ಸೈನಿಕ ಶಾಲೆಗೆ 0·15 ಕೋಟಿ ರೂಪಾಯಿ, ವಾಣಿಜ್ಯ ತೆರಿಗೆ ಇಲಾಖೆ ಕಟ್ಟಡಗಳಿಗೆ 0·15 ಕೋಟಿ ರೂಪಾಯಿ, ಸೂಪರ್ ಮಾರ್ಕೆಟಿಗೆ 0·05 ಕೋಟಿ ರೂಪಾಯಿ, ಅಗ್ನಿಶಾಮಕ ಸಂಸ್ಥೆಗೆ 0·10 ಕೋಟಿ ರೂಪಾಯಿ, ಆಹಾರದ ಗೋಡೌನುಗಳಿಗೆ 0·12 ಕೋಟಿ ರೂಪಾಯಿ ಒದಗಿಸಲಾಗಿದೆ.

ಸಾಲಗಳು ಮತ್ತು ಮುಂಗಡಗಳ ಸಂಬಂಧದಲ್ಲಿ ಇತ್ತೀಚಿನ ವರ್ಷಗಳಲ್ಲಿ ವಸೂಲಾತಿಗಳಿಗೂ ಮೀರಿ ಸುಮಾರು 1 ಕೋಟಿ ರೂಪಾಯಿಯಷ್ಟು ಹೆಚ್ಚು ಹಣ ವಸೂಲಾಗಿರುವುದನ್ನು ಲೆಕ್ಕಕ್ಕೆ ತೆಗೆದು

ಕೊಂಡಿದೆ. ಬಾಕಿ ಉಳಿದ ಶಿಲ್ಕನ್ನು ಗಮನಿಸಿದಲ್ಲಿ, ಮಳೆ ಬೆಳೆಗಳ ಸ್ಥಿತಿಯು ಚೆನ್ನಾಗಿರುವಾಗ ಕಟ್ಟುನಿಟ್ಟಾದ ಕ್ರಮಗಳನ್ನು ಕೈಕೊಂಡರೆ ವಸೂಲಿಗಳು ಇನ್ನಷ್ಟು ಉತ್ತಮಗೊಳ್ಳಬಹುದೆಂದು ಹಾರೈಸಬಹುದಾಗಿದೆ.

ಸಾಲಗಳ ಮತ್ತು ಮುಂಗಡಗಳ ಬಟವಾಡೆಗೆ ಆಯವ್ಯಯ ಪತ್ರದಲ್ಲಿ ಒದಗಿಸಿದ ಹಣ 15·38 ಕೋಟಿ ರೂಪಾಯಿ. ತಕ್ಕಾವಿ ಮತ್ತು ಭೂ ಸುಧಾರಣಾ ಸಾಲಗಳಂಥ ವಾಡಿಕೆಯ ಸಾಲಗಳ ಜತೆಗೆ ಹೆಚ್ಚಿಗೆಯಾಗಿ ಯೋಜನಾವ್ಯಯದ ಭಾಗವಾಗಿ 3·79 ಕೋಟಿ ರೂಪಾಯಿಯನ್ನೂ, ಸರ್ಕಾರಿ ನೌಕರರಿಗೆ ಸಾಲಗಳನ್ನು ನೀಡುವುದಕ್ಕಾಗಿ 1·28 ಕೋಟಿ ರೂಪಾಯಿಯನ್ನೂ ಅಕ್ಕಸಾಲಿಗರ ಪುನಸ್ಸಜ್ಜೀಕರಣಕ್ಕಾಗಿ 0·05 ಕೋಟಿ ರೂಪಾಯಿಯನ್ನೂ, ಜೀವ ವಿಮಾ ನಿಗಮದಿಂದ ಪಡೆದ ಸಾಲಗಳ ಮೂಲಕ ನಡೆಯುವ ಗೃಹ ನಿರ್ಮಾಣ ಕಾರ್ಯಗಳಿಗಾಗಿ 1·00 ಕೋಟಿ ರೂಪಾಯಿಯನ್ನೂ, ರಾಷ್ಟ್ರೀಯ ಸಾಲ ರೂಪದ ವಿದ್ಯಾರ್ಥಿ ವೇತನಗಳ ಸಲುವಾಗಿ 0·43 ಕೋಟಿ ರೂಪಾಯಿಯನ್ನೂ, ಉದ್ಯಮಗಳಿಗೆ ನೀಡುವ ಸರ್ಕಾರಿ ಸಹಾಯದ ಅಧಿನಿಯಮದ ಮೇರೆಗೆ 0·25 ಕೋಟಿ ರೂಪಾಯಿಯನ್ನೂ, ಆಯವ್ಯಯ ಪತ್ರದಲ್ಲಿ ಸೇರಿಸಲಾಗಿದೆ. ನೀರಾವರಿ ಬಾವಿಗಳ ಸಲುವಾಗಿಯೂ ಪಂಪುಸೆಟ್ಟುಗಳ ಸಲುವಾಗಿಯೂ ಕೊಡುವ ಸಾಲಗಳು, ಬೆಂಗಳೂರು ನೀರು ಸರಬರಾಯಿ ಮತ್ತು ಚರಂಡಿ ವ್ಯವಸ್ಥಾಮಂಡಲಿಗೆ ಕೊಡುವ ಸಾಲ, ನಗರ ನೀರು ಸರಬರಾಜಿನ ಬೇರೆ ಯೋಜನೆಗಳಿಗೆ ಕೊಡುವ ಸಾಲ ಮತ್ತು ಭೂ ಸಾರ ರಕ್ಷಣೆ, ಸಾಮುದಾಯಿಕ ಅಭಿವೃದ್ಧಿ, ಇತ್ಯಾದಿಗಳಿಗೆ ಕೊಡುವ ಸಾಲ—ಇವು ಸೇರುತ್ತವೆ.

ಈ ಸಭೆಯ ಮುಂದೆ ಮಂಡಿಸಲಾದ ಅಂದಾಜುಗಳ ಮೇರೆಗೆ ಮುಂಬರುವ ವರ್ಷದ ವ್ಯವಹಾರಗಳ ಸ್ಥೂಲರೂಪವನ್ನು ಪರಿಶೀಲಿಸಿದರೆ, ಈ ವರ್ಷವು 13·28 ಕೋಟಿ ರೂಪಾಯಿ ಖೋತಾ ಶಿಲ್ಕಿನಿಂದ ಆರಂಭವಾಗುವುದೆಂದು ಹೇಳಬಹುದು. ಭಾರತ ಸರ್ಕಾರದಿಂದ ಮಂಜೂರಾದ ತದರ್ಥ ಸಾಲದ ಸಂಬಂಧದಲ್ಲಿ ಮರುಸಂದಾಯ ಮಾಡುವ 6·80 ಕೋಟಿ ರೂಪಾಯಿಯೂ ಸೇರಿ ಸಾಲಗಳ ಮರುಸಂದಾಯಕ್ಕೆ ಪ್ರಸಕ್ತ ವರ್ಷದಲ್ಲಿ 32·11 ಕೋಟಿ ರೂಪಾಯಿ ವೆಚ್ಚವಾಗುವುದು; ಅಂತರ ರಾಜ್ಯ ಒಡಂಬಡಿಕೆಯ ಮೇರೆಗೆ 0·57 ಕೋಟಿ ರೂಪಾಯಿ, ಬಂಡವಾಳ ವೆಚ್ಚ ನಿಮಿತ್ತವಾಗಿ 39·05 ಕೋಟಿ ರೂಪಾಯಿ ಮತ್ತು ಸಾಲಗಳು ಮತ್ತು ಮುಂಗಡಗಳ ನಿಮಿತ್ತವಾಗಿ ಹೋಗುವ 3·01 ಕೋಟಿ ರೂಪಾಯಿ ಇವೆಲ್ಲ ಸೇರಿ ಒಟ್ಟು 74·81 ಕೋಟಿ ರೂಪಾಯಿ ಆಗುವುದು. ಈ ವ್ಯಯವನ್ನು, 11·98 ಕೋಟಿ ರೂಪಾಯಿ ರಾಜಸ್ವದ ಹೆಚ್ಚಳದಿಂದ, 6 ಕೋಟಿ ರೂಪಾಯಿ ಸಾರ್ವಜನಿಕ ಸಾಲದಿಂದ, 36·04 ಕೋಟಿ ರೂಪಾಯಿ ಕೇಂದ್ರ ಸರ್ಕಾರದ ಸಾಲದಿಂದ ಮತ್ತು 2·45 ಕೋಟಿ ರೂಪಾಯಿ ಇತರ ಮೂಲಗಳಿಂದ, ಅಸಂಚಿತ ಋಣದನ್ವಯ 1·61 ಕೋಟಿ ರೂಪಾಯಿ ನಿವ್ವಳ ಆದಾಯದಿಂದ ಮತ್ತು 14·68 ಕೋಟಿ ರೂಪಾಯಿ ಸಾಲ ಮತ್ತು ಠೇವಣಿಗಳ ಬಾಬುಗಳಿಂದ—ಹೀಗೆ ಒಟ್ಟು 72·76 ಕೋಟಿ ರೂಪಾಯಿ ಆದಾಯದಿಂದ ತುಂಬಿಕೊಳ್ಳಲಾಗುವುದು. ಇದು ಸದ್ಯದ ತೆರಿಗೆಯ ಮಟ್ಟಕ್ಕೆ ಅನುಗುಣವಾಗಿದೆ. ಮೈಸೂರು ನೀರಾವರಿ ಅಧಿನಿಯಮದ ಮೇರೆಗೆ ವಿಧಿಸುವ ನಿರ್ವಹಣ ಉಪತೆರಿಗೆಯ ಸುಮಾರು 2.5 ಕೋಟಿ ರೂಪಾಯಿಯಷ್ಟು ಹೆಚ್ಚು ಆದಾಯವನ್ನು ಒದಗಿಸಬಹುದು. ಆದರೆ ಇದನ್ನು ಆಯವ್ಯಯದಲ್ಲಿ ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ಇದನ್ನು ಪರಿಗಣಿಸಿದರೆ 89 ಲಕ್ಷ ರೂಪಾಯಿಯ ಒಟ್ಟು ಉಳಿತಾಯವು ದೊರೆಯಬಹುದಾಗಿದೆ.

ಸಾಲದ ಪರಿಸ್ಥಿತಿ

ಭಾರತ ಸರ್ಕಾರಕ್ಕೆ ಸಲ್ಲತಕ್ಕ ಹಣ, ಸಾರ್ವಜನಿಕ ಸಾಲಗಳು ಮತ್ತು ಇತರ ಸಾಲಗಳ ಸಹಿತವಾಗಿ ಒಟ್ಟು ಸಾಲಗಳು 1968-69ರ ಅಂತ್ಯದಲ್ಲಿ 342·80 ಕೋಟಿ ರೂಪಾಯಿಯಷ್ಟಾಗುವುದು. ಇದರಲ್ಲಿ, ಅಸಂಚಿತ ಋಣದ ಸಂಬಂಧವಾದ ಬಾಕಿ ಹಣ ಮತ್ತು 26.64 ಕೋಟಿ ರೂಪಾಯಿಯಷ್ಟು ಠೇವಣಿ ಇವೆರಡೂ ಮೊತ್ತಗಳು ಸೇರಿಲ್ಲ. ಹಿಂದಿನ ಸ್ಥಿತಿಯನ್ನು ಉದಾಹರಣೆಗೆ ಸುಮಾರು 20 ವರ್ಷಗಳ ಹಿಂದಿನ ಸ್ಥಿತಿಯನ್ನು ಪರಿಶೀಲಿಸಿದರೆ, ಇಂದಿನ ಸಾಲದ ಸ್ಥಿತಿಯು ನಮ್ಮನ್ನು ತತ್ತರಗೊಳಿಸುವುದು. ಆದರೆ ಸರ್ಕಾರದ ಆಯವ್ಯಯ ಪತ್ರವನ್ನು ಪರಿಶೀಲಿಸಿದರೆ, ಸುಮಾರು 427 ಕೋಟಿ ರೂಪಾಯಿಯ ಮೌಲ್ಯದ ನಮ್ಮ ಆಸ್ತಿಪಾಸ್ತಿಗಳು ಈ ಸಾಲದ ಭಾರವನ್ನು ಎಷ್ಟೋ ಕಡಿಮೆ ಮಾಡಿವೆ. ಇದೂ ಅಲ್ಲದೆ ಬಂಡವಾಳ ಲೆಕ್ಕಕ್ಕೆ ಸೇರದ ಇನ್ನೂ ಎಷ್ಟೋ ಸೊತ್ತುಗಳನ್ನು ಸರ್ಕಾರದವರು ಹೊಂದಿದ್ದಾರೆ. ಸಾಲಕ್ಕೆ ಅನುಗುಣವಾಗಿ ಹಣಕ್ಕೆ ಪರಿವರ್ತಿಸಲಾಗುವಂಥ ಸ್ವತ್ತುಗಳೂ ಇರಬೇಕೆಂದಾದರೆ, ಅಭಿವೃದ್ಧಿ ಕಾರ್ಯಗಳಾವುವೂ ನಡೆಯುವಂತಿಲ್ಲ. ಕಲ್ಯಾಣ

ರಾಜ್ಯದ ಸರ್ಕಾರವು ಇಂದಿನ ಮತ್ತು ಮುಂದಿನ ಪೀಳಿಗೆಯ ಪ್ರಯೋಜನಾರ್ಥವಾಗಿ ವಿನಿಯೋಗಕ್ಕೆಂದು ಹಣ ಸಾಲ ಕೊಳ್ಳುವುದು. ಕಾಲಕ್ರಮದಲ್ಲಿ ನಮ್ಮ ಆಸ್ತಿಪಾಸ್ತಿಗಳು ಪ್ರತ್ಯಕ್ಷ ಹಾಗೂ ಪರೋಕ್ಷ ಲಾಭಗಳನ್ನು ನೀಡಿ ನಮ್ಮ ಆರ್ಥಿಕ ಸ್ಥಿತಿಯು ಉತ್ತರೋತ್ತರ ಅಭಿವೃದ್ಧಿಯನ್ನು ಹೊಂದುವಂತಾಗುವುದು. ನಮ್ಮ ಭವ್ಯಭವಿಷ್ಯವು ನಮ್ಮ ವಿದ್ಯುದ್ಯೋಜನೆಗಳಲ್ಲೂ ನೀರಾವರಿ ಮತ್ತು ಇತರ ಕೃಷಿ ರಂಗಗಳಲ್ಲೂ ತನ್ನ ಉಜ್ವಲ ಕಾಂತಿಯನ್ನು ಈಗಾಗಲೇ ಪಸರಿಸತೊಡಗಿದೆ. ಈಗ ಅಭಿವೃದ್ಧಿಹೊಂದುತ್ತ ಹಿಂಜರಿತದ ಪರಿಣಾಮವನ್ನು ಅತಿಕ್ರಮಿಸಿ ಮುನ್ನಡೆಯುತ್ತಿರುವ ನೂತನೋದ್ಯಮಗಳ ಪ್ರಚೋದನೆಯಿಂದ ಈ ಕಾಂತಿ ಇನ್ನಷ್ಟು ಜಾಜ್ವಲ್ಯಮಾನವಾಗುವುದು.

ನಮ್ಮ ಆರ್ಥಿಕ ಸ್ಥಿತಿ ಹದಗೆಟ್ಟು, ರಾಜ್ಯದ ಆಯವ್ಯಯದಲ್ಲಿ ತೀವ್ರ ಅಸಮತೆಯುಂಟಾಗಿರುವದಕ್ಕೆ ಸರ್ಕಾರಿ ನೌಕರರ ಮತ್ತು ಇತರರ ವೇತನಗಳನ್ನು ಪದೇ ಪದೇ ಹೆಚ್ಚಿಸಿರುವುದೇ ಮುಖ್ಯ ಕಾರಣ. ತೃತೀಯ ಯೋಜನಾವಧಿಯಲ್ಲಿ ವೇತನಗಳ ಹೆಚ್ಚಳಗಳಿಗೆ ನಮ್ಮ ಅಲ್ಪ ಸಂಪತ್ತಿಯಿಂದ ಸುಮಾರು 30 ಕೋಟಿ ರೂಪಾಯಿ ವ್ಯಯವಾಗಿದ್ದಿತೆಂದೂ 1966-67 ರಲ್ಲಿ ತಾತ್ಕಾಲಿಕವಾಗಿ ಒಮ್ಮೆ ವೇತನಾಯೋಗದ ಮಧ್ಯಕಾಲೀನ ವರದಿಯಲ್ಲಿದ್ದ ಸಲಹೆಗಳ ಮೇರೆಗೆ ಮತ್ತೊಮ್ಮೆ ಹೀಗೆ ಎರಡು ಬಾರಿ ತುಟ್ಟಿಭತ್ಯ ನೀಡಿದುದರಿಂದ, ವರ್ಷಕ್ಕೆ ಆರು ಕೋಟಿ ರೂಪಾಯಿ ವ್ಯಯವಾಯಿತೆಂದೂ ನನ್ನ ಹಿಂದಿನ ಆಯವ್ಯಯ ಭಾಷಣದಲ್ಲಿ ತಿಳಿಸಿದ್ದೆನಷ್ಟೇ. ತರುವಾಯ, ಗಜೇಂದ್ರಗಡಕರ್ ಆಯೋಗದ ವರದಿಯಿಂದ ಉದ್ಭವಿಸಿದ ಘಟನೆಗಳೂ ಮೈಸೂರು ವೇತನಾಯೋಗದ ಎರಡನೆಯ ತಾತ್ಕಾಲಿಕ ವರದಿಯಿಂದ ಉದ್ಭವಿಸಿದ ಘಟನೆಗಳು ಈ ಸಭೆಯ ಗಮನಕ್ಕೆ ಬಂದಿವೆ. ವೇತನ ಆಯೋಗದ ಎರಡನೆಯ ವರದಿಯು ದಿನಾಂಕ 1-11-1967 ರಿಂದ ಈ ಕೆಳಗಿನ ದರಗಳ ಮೇರೆಗೆ ಹೆಚ್ಚಿನ ತುಟ್ಟಿ ಭತ್ಯಗಳನ್ನು ಸೂಚಿಸಿದ್ದಿತು :—

ವೇತನ ಶ್ರೇಣಿ ರೂಪಾಯಿ	ಆಗಿನ ತುಟ್ಟಿಭತ್ಯ ದರ ರೂಪಾಯಿ	ಸೂಚಿತ ದರ ರೂಪಾಯಿ
90 ಕ್ಕಿಂತ ಕಡಿಮೆ	47	59
90—109	65	75
110—149	70	84
150—209	90	106
210—399	110	128
400—449	120	140

450 ಮತ್ತು ಮೇಲ್ಪಟ್ಟು—ಹೆಚ್ಚಳವಿಲ್ಲ. ತಿಂಗಳಿಗೆ ರೂ. 470ರವರೆಗೆ ವೇತನ ಪಡೆಯುವವರ ಮಟ್ಟಿಗೆ ಹೊಂದಾಣಿಕೆ ಮಾಡಲಾಗುವುದು.

ಈ ಸೂಚನೆಗಳಿಂದ ವರ್ಷಕ್ಕೆ ಸುಮಾರು 4.50 ಕೋಟಿಯಿಂದ 5 ಕೋಟಿಯವರೆಗೆ ವೆಚ್ಚ ವಹಿಸಿಕೊಳ್ಳಬೇಕಾಗುವುದು. ವರದಿಯನ್ನು ಸರ್ಕಾರದವರು ತೀವ್ರವಾಗಿ ಪರ್ಯಾಲೋಚಿಸಿದ್ದರು. ಆ ತರುವಾಯ ವೇತನಾಯೋಗವು ಇನ್ನು ಎರಡು ವರದಿಗಳನ್ನು ಸಲ್ಲಿಸಿದ್ದಿತು. ಅವುಗಳಲ್ಲಿ ಒಂದು ವರದಿ ತುಟ್ಟಿಭತ್ಯವನ್ನು ಇನ್ನಷ್ಟು ಹೆಚ್ಚಿಸುವಂತೆ ಸೂಚಿಸಿದ್ದಿತು ; ಇನ್ನೊಂದು ವರದಿಯು ಪೆನ್‌ಷನ್‌ದಾರರಿಗೆ ನೆರವು ನೀಡುವ ಬಗ್ಗೆ ಪ್ರಸ್ತಾಪಿಸಿದ್ದಿತು. ಬಳಕೆ ವಸ್ತುಗಳ ಬೆಲೆ ತೀವ್ರವಾಗಿ ಏರಿದ್ದ ಕಾರಣ ಕೇಂದ್ರ ಸರ್ಕಾರದವರು ತಮ್ಮ ನೌಕರರಿಗೆ 1967ರಲ್ಲಿ ಮೂರು ಸಲ ಅಂದರೆ ದಿನಾಂಕ 1-2-1967 ರಿಂದ, ದಿನಾಂಕ 1-6-1967 ರಿಂದ ಮತ್ತು 1-11-1967ರಿಂದ ಹೀಗೆ ಮೂರು ಸಲ ತುಟ್ಟಿ ಭತ್ಯವನ್ನು ಹೆಚ್ಚಿಸಿದ್ದರು. 1949ನೇ ಇಸವಿಯನ್ನು ಮೂಲವರ್ಷವಾಗಿ ಇಟ್ಟುಕೊಂಡು ಪರಿಶೀಲಿಸಿದ ಜೀವನ ವೆಚ್ಚದ ಅಖಿಲ ಭಾರತದ ಸೂಚ್ಯಂಕವು ಜನವರಿ 1967ರಲ್ಲಿ 197ಕ್ಕೂ, ಏಪ್ರಿಲ್ 1967ರಲ್ಲಿ 202ಕ್ಕೂ ಬಂದಿದ್ದಿತು. ಸೂಚ್ಯಂಕವು ಜುಲೈ 1967ರಲ್ಲಿ 213ಕ್ಕೇರಿತು. ಅಕ್ಟೋಬರ್ 1967ರಲ್ಲಿ 217 ಕ್ಕೇರಿತ್ತು. ಜನವರಿ 1967 ರಿಂದ ಅಕ್ಟೋಬರ್ 1967ರವರೆಗಿನ ಅವಧಿಯಲ್ಲಿ ಬಳಕೆ ವಸ್ತುಗಳ ಬೆಲೆ ಶೇಕಡ 10ಕ್ಕೂ ಹೆಚ್ಚಿದ್ದಿತು. ಈ ಅವಧಿಯಲ್ಲಿ ಮೈಸೂರು ರಾಜ್ಯದಲ್ಲೂ ಜೀವನ ಮಟ್ಟವು ಗಮನಾರ್ಹವಾಗಿ ಹೆಚ್ಚಿತು. ಅಂದಿನ ತುಟ್ಟಿ ಭತ್ಯದ ದರವು 175ಕ್ಕೆ ಬಂದಿದ್ದ ಸರಾಸರಿ ವಾರ್ಷಿಕ ಜೀವನ ವೆಚ್ಚದ ಸೂಚ್ಯಂಕಕ್ಕೆ ಸರಿಹೋಗುತ್ತಿದ್ದಿತು. ವೇತನಾಯೋಗವು ಎರಡನೇ ವರದಿ ಕಳಿಸಿದ ಕಾಲಕ್ಕೆ ಸೂಚ್ಯಂಕವು 195ಕ್ಕೆ ತಲುಪಿದ್ದಿತು. ಈಗಲಾದರೋ

ಅದು ಇನ್ನಷ್ಟು ಮೇಲಕ್ಕೇರಿದೆ. ಇವೆಲ್ಲ ಅಂಶಗಳನ್ನು ಪರಿಶೀಲಿಸಿ ಮತ್ತು ಗಜೇಂದ್ರಗಡಕರ್ ಆಯೋಗದ ಸಿಫಾರಸುಗಳನ್ನು ಗಮನದಲ್ಲಿಟ್ಟುಕೊಂಡು, ವೇತನಾಯೋಗವು ದಿನಾಂಕ 1-4-1968 ರಿಂದ ತುಟ್ಟಿಭತ್ಯವನ್ನು ಈ ಮುಂದೆ ಹೇಳುವ ಪ್ರಕಾರ ಹೆಚ್ಚಿಸುವಂತೆ ಸಿಫಾರಸು ಮಾಡಿದೆ. ಇದರಿಂದ ರಾಜ್ಯಕ್ಕೆ ವರ್ಷ ಒಂದಕ್ಕೆ 2·50 ಕೋಟಿಯಿಂದ 3 ಕೋಟಿ ರೂಪಾಯಿ ವರೆಗೆ ವೆಚ್ಚ ತಗಲುವುದು.

ವೇತನಶ್ರೇಣಿ ರೂ	ಎರಡನೇ ವರದಿಯ ಪ್ರಕಾರ ತುಟ್ಟಿಭತ್ಯ ರೂ.	ಮೂರನೇ ವರದಿಯ ಪ್ರಕಾರ ತುಟ್ಟಿಭತ್ಯ ರೂ.
90ಕ್ಕಿಂತ ಕಡಿಮೆ	59	65
90—109	75	80
110—149	84	91
150—209	106	114
210—399	128	137
400—449	140	150

450 ಮತ್ತು ಅದಕ್ಕೆ ಮೇಲ್ಪಟ್ಟು ಏನೂ ಇಲ್ಲ.

ಸರ್ಕಾರದವರು ಈ ವರದಿಗಳನ್ನು ಪರ್ಯಾಲೋಚಿಸಿ ಗಜೇಂದ್ರಗಡಕರ್ ಆಯೋಗದ ಸಿಫಾರಸುಗಳನ್ನು ಗಮನದಲ್ಲಿಟ್ಟುಕೊಂಡು ದಿನಾಂಕ 1-3-1968 ರಿಂದ (ಏಪ್ರಿಲ್‌ನಲ್ಲಿ ಸಂದಾಯ ವಾಗುವ ಮಾರ್ಚ ತಿಂಗಳ ಸಂಬಳದಲ್ಲಿ) ಈ ಮುಂದೆ ಹೇಳುವ ದರಗಳಲ್ಲಿ ತುಟ್ಟಿಭತ್ಯವನ್ನು ಕೊಡಲು ನಿರ್ಧರಿಸಿದ್ದಾರೆ. ಇದರಿಂದ ಸರಕಾರಕ್ಕೆ ವರ್ಷ ಒಂದಕ್ಕೆ ಸುಮಾರು 7.50 ಕೋಟಿ ರೂಪಾಯಿ ಯಿಂದ 8 ಕೋಟಿ ರೂಪಾಯಿ ವೆಚ್ಚ ತಗುಲುವುದು. ಈ ಹಣವನ್ನು ಅಂಶತಃ ನಗದಾಗಿಯೂ ಅಂಶತಃ ಸಂಚಿತ ಠೇವಣಾತಿ, ಸೇವಿಂಗ್ಸ್ ಸರ್ಟಿಫಿಕೇಟು ಮತ್ತು ಭವಿಷ್ಯನಿಧಿ (ಪ್ರಾವಿಡೆಂಟ್ ಫಂಡ್) ಉಳಿತಾಯ ರೂಪದಲ್ಲೂ ಸಲ್ಲಿಸಲಾಗುವುದು. ಇದಕ್ಕೆ ಸಂಬಂಧಿಸಿದ ವಿವರಗಳನ್ನು ಕಾಲ ಕ್ರಮದಲ್ಲಿ ತಿಳಿಸಲಾಗುವುದು.

ವೇತನಶ್ರೇಣಿ ರೂ.	ಸರ್ಕಾರದವರು ನೀಡುವ ತುಟ್ಟಿಭತ್ಯ ರೂ.	ನಗದು ರೂಪದ ಹೆಚ್ಚಳ ರೂ.	ಉಳಿತಾಯದ ರೂಪದಲ್ಲಿ ಸಂದಾಯ ರೂ.
90ಕ್ಕಿಂತ ಕಡಿಮೆ	65	12	6
90—109	80	10	5
110—149	91	14	7
150—209	114	16	8
210—399	137	18	9
400—449	150	20	10
450 ಮತ್ತು ಅದಕ್ಕೆ ಮೇಲ್ಪಟ್ಟು	470 ರೂ. ವರೆಗೆ ಸಂಬಳ ಪಡೆಯುವವರ ಮಟ್ಟಿಗೆ ಹೊಂದಾಣಿಕೆ ಮಾಡಲಾಗುವುದು.		

ಈ ದರಗಳು ಸರ್ಕಾರದ ಸಹಾಯ ಪೋಷಿತ ಸಂಸ್ಥೆಗಳು, ಸ್ಥಳೀಯ ಸಂಘಗಳು ಮತ್ತು ಸರ್ಕಾರಿ ಉದ್ಯಮ ಸಂಸ್ಥೆಗಳ ನೌಕರರಿಗೆ ಅನ್ವಯಿಸುವುವು.

ಪೆನ್‌ಷನ್‌ದಾರರಿಗೆ ನೆರವು.—ಜೀವನ ವೆಚ್ಚವು ಹೆಚ್ಚಿದುದರಿಂದ ಪೆನ್‌ಷನ್‌ದಾರರ ಸ್ಥಿತಿಯು ಕಷ್ಟದಾಯಕವಾಗಿದೆ. ಈ ಸಂಬಂಧವಾಗಿ ಪೆನ್‌ಷನ್‌ದಾರರಿಂದಲೂ ಅವರ ಸಂಘಗಳಿಂದಲೂ ಸರ್ಕಾರದವರಿಗೆ ಹಲವಾರು ಮನವಿಗಳು ಬಂದಿವೆ. ಪೆನ್‌ಷನ್‌ದಾರರಿಗೆ ನೆರವು ನೀಡುವವಿಚಾರವನ್ನು ವೇತನಾಯೋಗದ ಪರಿಶೀಲನೆಗೆ ಒಪ್ಪಿಸಿಕೊಡಲಾಗಿತ್ತು. ಪೆನ್‌ಷನ್‌ದಾರರೂ ಅವರ ಸಂಘಗಳೂ ಮಾಡಿದ ಹಲವಾರು ವಿನಂತಿಗಳನ್ನು ಪರಿಶೀಲಿಸಿ ವೇತನಾಯೋಗವು ಈ ಕೆಳಗಿನ ಸಿಫಾರಸುಗಳನ್ನು ಮಾಡಿದೆ.

(1) ಪೆನನ್‌ದಾರರ ತುಟ್ಟಿಭತ್ಯವನ್ನು ಸೇಕಡ 50 ರಷ್ಟು ಹೆಚ್ಚಿಸುವುದು ಮತ್ತು ಈಗಿನಂತೆ 100ರೂ ನಿವೃತ್ತಿ ವೇತನ (ಪೆನ್‌ಷನ್) ಪಡೆಯುವವರ ಬದಲಾಗಿ 200ರೂ ಮತ್ತು ಅದಕ್ಕಿಂತ ಕಡಿಮೆ ನಿವೃತ್ತಿ ವೇತನವನ್ನು ಪಡೆಯುವವರಿಗೂ ತುಟ್ಟಿಭತ್ಯ ಕೊಡುವುದು.

(2) ತುಟ್ಟಿಭತ್ಯದ ಸಹಿತವಾಗಿ ಕನಿಷ್ಠ ನಿವೃತ್ತಿವೇತನ ಮೊತ್ತವನ್ನು ತಿಂಗಳಿಗೆ 20 ರೂಯಿಂದ 30 ರೂಪಾಯಿಗೆ ಹೆಚ್ಚಿಸುವುದು.

(3) ಪೆನ್‌ಷನ್‌ದಾರರಿಗೆ ಮತ್ತು ಅವರ ಪತ್ನಿಯರಿಗೆ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲೂ ಒಳರೋಗಿಗಳಾಗಿ ಮತ್ತು ಹೊರರೋಗಿಗಳಿಗಾಗಿ ಉಚಿತ ಚಿಕಿತ್ಸೆ ನೀಡುವುದು.

(4) 1964ನೇ ಇಸವಿಗೆ ಮುನ್ನ ನಿವೃತ್ತರಾದವರಿಗೆ ಕುಟುಂಬ ನಿವೃತ್ತಿ ವೇತನ ಸೌಲಭ್ಯ ನೀಡುವುದು. ಆದರೆ ಈ ಪೆನ್‌ಷನ್‌ದಾರರು ಎರಡು ವರ್ಷಗಳವರೆಗೆ ನಿವೃತ್ತಿ ವೇತನದ ಶೇಕಡ 25ರಷ್ಟನ್ನು ಬಿಟ್ಟುಕೊಡಬೇಕು ಅಥವಾ ಆ ಮೊತ್ತವನ್ನು ಏಕಗಂಟಿನಲ್ಲಿ ಸಲ್ಲಿಸಬೇಕು.

(5) ತ್ರಿಲಾಭ ಯೋಜನೆ ಅನ್ವಯಿಸುವವರಿಗೆ ತುಟ್ಟಿಭತ್ಯ ಕೊಡುವುದು ಮತ್ತು ನಿವೃತ್ತಿ ವೇತನವನ್ನು ಪರಿವರ್ತನೆಗೊಳಿಸುವ ಹಕ್ಕನ್ನು ಹಾಗೂ ಇತರ ಸೌಕರ್ಯಗಳನ್ನು ನೀಡುವುದು.

1964ನೇ ಇಸವಿಗೆ ಮುನ್ನ ನಿವೃತ್ತರಾದವರಿಗೆ ಕುಟುಂಬ ನಿವೃತ್ತಿ ವೇತನ ಕೊಡುವುದರ ಮತ್ತು ಉಚಿತ ಚಿಕಿತ್ಸಾ ಸೌಕರ್ಯಗಳನ್ನು ನೀಡುವುದರ ಹೊರತಾಗಿ ಮೇಲೆ ಹೇಳಿದ ಸೌಲಭ್ಯಗಳಿಂದ ವರ್ಷಕ್ಕೆ 50 ಲಕ್ಷ ರೂ ವೆಚ್ಚ ತಗಲುವುದು. ರಾಜ್ಯದಲ್ಲಿ 35,292 ಪೆನ್‌ಷನ್‌ದಾರರಿದ್ದಾರೆ. ಇವರಲ್ಲಿ 34,501 ಜನ ಪೆನ್‌ಷನ್‌ದಾರರಿಗೆ ಈ ಮೇಲೆ ಹೇಳಿದ ಸೌಲಭ್ಯಗಳು ಲಭಿಸಲಿವೆ.

ರಾಜ್ಯಕ್ಕೆ ವಿಧೇಯ ಸೇವೆ ಸಲ್ಲಿಸಿದ ನಿವೃತ್ತ ನೌಕರರಿಗೂ ನೆರವು ನೀಡಬೇಕೆಂಬ ಉದ್ದೇಶದಿಂದ ವೇತನಾಯೋಗದ ಸಿಫಾರಸುಗಳನ್ನು ಅಂಗೀಕರಿಸಲಾಗಿದೆ. ಪೆನ್‌ಷನ್‌ದಾರರಿಗೆ ಕೊಡಲಾಗುವ ತುಟ್ಟಿಭತ್ಯದ ಹೊಸ ದರಗಳನ್ನು ಪರಿಶಿಷ್ಟದಲ್ಲಿ ಕೊಟ್ಟಿದೆ. ವರ್ಷಕ್ಕೆ ಸುಮಾರು 8 ಕೋಟಿ ರೂಪಾಯಿ ಒಟ್ಟು ವೆಚ್ಚ ತಗಲುವ ಈ ಏರ್ಪಾಡುಗಳನ್ನು ಮಾನ್ಯ ಸಭೆಯು ಸ್ವಾಗತಿಸುವುದೆಂದು ನಂಬಿದ್ದೇನೆ. ಹಿಂದಿನ ವರ್ಷ ನೀಡಿದ ಹೆಚ್ಚಳಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೆ, ಎರಡು ವರ್ಷಗಳ ಅವಧಿಯಲ್ಲಿ ಕೈಕೊಂಡ ಈ ನಿರ್ಧಾರಗಳ ಪರಿಣಾಮವಾಗಿ ವರ್ಷಕ್ಕೆ ಒಟ್ಟಿಗೆ 14 ಕೋಟಿ ರೂಪಾಯಿ ವೆಚ್ಚ ತಗಲುವುದಾಗಿದೆ. ಸರ್ಕಾರಿ ನೌಕರರೂ ಪೆನ್‌ಷನ್‌ದಾರರೂ ಈ ಹೆಚ್ಚಳಗಳಿಂದ ತುಸು ಸಮಾಧಾನ ಹೊಂದಬಹುದಾದರೂ, ಈ ಸೌಲಭ್ಯಗಳನ್ನೂ ನಿಶ್ಚಿತ ಆದಾಯವನ್ನೂ ಪಡೆಯದ ಪ್ರಜಾಸಮುದಾಯವಾದರೋ ಅಪಾರವಾಗಿದೆಯೆಂಬ ಅಂಶವನ್ನು ಅವರು ಗಮನಿಸಬೇಕು. ಸಂಪತ್ತಿ ಮೂಲಗಳಲ್ಲಿ ಹೆಚ್ಚಳವಾಗದೆ, ವೆಚ್ಚ ಕಡಿಮೆಯಾಗದೆ, ತಮ್ಮ ಅತ್ಯಲ್ಪ ಸಂಪತ್ತಿನ ಬಹುಭಾಗವನ್ನು ಪದೇ ಪದೇ ವೇತನಗಳ ಹೆಚ್ಚಳಕ್ಕಾಗಿ ವ್ಯಯಿಸಲು ಯಾವ ಸರ್ಕಾರಕ್ಕೂ ಸಾಧ್ಯವಿಲ್ಲ. ಇನ್ನುಮುಂದೆ ಕೇಂದ್ರ ಸರ್ಕಾರದವರು ತಮ್ಮ ನೌಕರರ ಸಂಬಳವನ್ನು ಇನ್ನೂ ಹೆಚ್ಚಿಸಿ ರಾಜ್ಯಗಳಿಗೆ ಉಭಯಸಂಕಟ ತಂದೊಡ್ಡಲಾರರೆಂದು ನಂಬಿದ್ದೇನೆ. ಮೈಸೂರು ವೇತನಾಯೋಗವು ಸೂಕ್ತ ಕಾರ್ಯಪ್ರಮಾಣವನ್ನು ಗೊತ್ತುಪಡಿಸಿ ಮಿತವ್ಯಯೋಪಾಯಗಳನ್ನು ತನ್ನ ವರದಿಯಲ್ಲಿ ಸೂಚಿಸುವುದೆಂದೂ ನಂಬಿದ್ದೇನೆ.

ಸರ್ಕಾರಿ ನೌಕರರಿಗೂ ಇತರರಿಗೂ ವೇತನಗಳನ್ನು ಹೆಚ್ಚಿಸಿದ ಕಾರಣ ವಹಿಸತಕ್ಕ ಹೆಚ್ಚಿನ ವೆಚ್ಚಕ್ಕೆ ಈಗ ಮಂಡಿಸಿರುವ ಆಯವ್ಯಯ ಪತ್ರದಲ್ಲಿ ಹಣ ವ್ಯವಸ್ಥೆ ಮಾಡಿಲ್ಲ. ಆಯವ್ಯಯ ಪ್ರಸ್ತಾವಗಳನ್ನು ಸಿದ್ಧಪಡಿಸುವ ಕೆಲಸ ಮುಗಿಸಿದ ಮೇಲೆ ಈ ತೀರ್ಮಾನ ಕೈಕೊಂಡಿರುವುದು ಇದಕ್ಕೆ ಕಾರಣ. ಈ ಹೆಚ್ಚಿನ ವೆಚ್ಚವನ್ನು ಗಜೇಂದ್ರಗಡಕರ್ ಆಯೋಗದ ವರದಿಯಲ್ಲಿ ಸೂಚಿಸಿರುವಂತೆ ಹೆಚ್ಚಿಗಿನ ಕೇಂದ್ರ ಸಹಾಯ ಪಡೆದುಕೊಂಡಾಗಲಿ ಅಥವಾ ಹೆಚ್ಚಿನ ತೆರಿಗೆಯ ಮೂಲಕವಾಗಲಿ ತುಂಬಿಕೊಳ್ಳಬೇಕಾಗುವುದು. ಮುಂದೆ ನೇಮಕವಾಗಲಿರುವ ವಿತ್ತ-ಆಯೋಗವು ಎಲ್ಲಾ ರಾಜ್ಯಗಳ ಸಮಗ್ರ ಆಯವ್ಯಯ ಪರಿಸ್ಥಿತಿಯನ್ನು, ಮುಖ್ಯವಾಗಿ ಸಾಲದ ಮರುಸಂದಾಯ; ನೀರಾವರಿ ಮತ್ತು ಉದ್ಯಮಗಳ ಅಭಿವೃದ್ಧಿಯಲ್ಲಿ ಅಸಮತೆ, ಸರ್ಕಾರಿ ನೌಕರರ ವೇತನಗಳಲ್ಲಿ ಹೆಚ್ಚಳ ಮತ್ತು

ಬೇರೆ ಕೇಂದ್ರ ಸರ್ಕಾರದವರು ಕೈಕೊಂಡ ಅದೇ ಬಗೆಯ ಕ್ರಮದ ಪರಿಣಾಮವಾದ ಬೇರೆ ಸ್ಥಿತಿಗಳನ್ನೂ ಗಮನಕ್ಕೆ ತೆಗೆದುಕೊಳ್ಳುವುದೆಂದು ನಂಬಿದ್ದೇನೆ.

ಕೊನೆಯದಾಗಿ, ನಮ್ಮ ರಾಜ್ಯವು ಅಡಚಣೆಗಳನ್ನು ದಾಟಿ ಕ್ಷಿಪ್ರದಲ್ಲಿಯೇ ಆರ್ಥಿಕ ಸ್ವಾವಲಂಬನೆಯನ್ನು ಸಾಧಿಸಲಾಗುವಂತೆ, ಇಂದಿನ ತಾತ್ಕಾಲಿಕ ಸಂಕಷ್ಟಗಳಿಂದ ಪಾರಾಗುವ ಪ್ರಯತ್ನದಲ್ಲಿ ಮಾನ್ಯ ಸಭಾ ಸದಸ್ಯರ ಹಾರ್ದಿಕ ಸಹಕಾರವನ್ನು ಕೋರುತ್ತೇನೆ. ಮಾನ್ಯ ಸದಸ್ಯರು ರಚನಾತ್ಮಕ ಟೀಕೆಗಳನ್ನೂ, ಸೂಚನೆಗಳನ್ನೂ ಕೊಡಬೇಕೆಂದು ಹೃತ್ಪೂರ್ವಕವಾಗಿ ವಿನಂತಿಸಿಕೊಳ್ಳುತ್ತೇನೆ.

ಈ ಸರ್ಕಾರದ ಕಾಯನೀತಿಗನುಗುಣವಾಗಿ ಈ ಸಲ ಮುಖ್ಯವಾದ ಆಯವ್ಯಯ ಲೇಖಗಳನ್ನು ಇಂಗ್ಲೀಷಿನಲ್ಲೂ ಕನ್ನಡದಲ್ಲೂ ಮಂಡಿಸಿದೆ. ಮುಖ್ಯ ಲೇಖಗಳನ್ನು ಎರಡೂ ಭಾಷೆಗಳಲ್ಲಿ ಮಂಡಿಸುವ ಈ ಪ್ರಯತ್ನವು ಪ್ರಥಮ ಪ್ರಯತ್ನವಾಗಿದೆ. ಆದುದರಿಂದ ಕನ್ನಡ ಅನುವಾದವು ಪೂರ್ಣತೃಪ್ತಿ ನೀಡದಿರಬಹುದು ; ಅಲ್ಲದೆ, ಅನುವಾದದಲ್ಲಿ ಏಕರೂಪತೆಯೂ ಕಾಣದಿರಬಹುದು. ಕಾಲಕ್ರಮದಲ್ಲಿ ಈ ಕೆಲಸ ಸುವ್ಯವಸ್ಥಿತವಾಗಿ ಏಕರೂಪಕ್ಕೆ ಬರುವುದು ; ಅದುವರೆಗೆ ಮಾನ್ಯ ಸದಸ್ಯರು ಸಹನೆಯಿಂದಿರಬೇಕೆಂದು ನಮ್ರತೆಯಿಂದ ವಿನಂತಿಸಿಕೊಳ್ಳುತ್ತೇನೆ.

॥ ಜೈ ಹಿಂದ್ ॥

Mr. DEPUTY SPEAKER.—Now the House will rise and will meet again at 8-30 A.M. tomarrow.

The House adjourned at Twenty-five Minutes past Ten of the Clock to meet again at Thirty Minutes past Eight of the Clock on Saturday, the 2nd March 1968.

———